ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಡಿಸೆಂಬರ್ 30 ಮಂಗಳವಾರ 2025

ಸಂಪುಟ: 46 | ಸಂಚಿಕೆ: 252 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸುರಕ್ಷಿತ ಹೊಸ ವರ್ಷಾಚರಣೆ; ನಿಮ್ಮ ಸುರಕ್ಷೆ ನಮ್ಮ ಆದ್ಯತೆ

■ ಮೈಸೂರು ನಗರ ಪೊಲೀಸ್ ಕಮೀಷನರ್ ಸೀಮಾ ಲಾಟ್ಕರ್ ಅಭಯ ■ ಒಂದೂವರೆ ಸಾವಿರ ಪೊಲೀಸರಿಂದ ಬಂದೋಬಸ್ತ್ ■ ಹದ್ದುಮೀರಿದ ವರ್ತನೆಗೆ ಯಾವ ಮುಲಾಜಿಲ್ಲದೆ ತಕ್ಕ ಶಾಸ್ತಿ

ಮೈಸೂರು, ಡಿ.29– ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಕ್ರಮ ವಹಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರು ನಗರದಲ್ಲಿ ಸಾರ್ವಜನಿಕರು ಹೊಸ ವರ್ಷಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಸ್ವಾಗತಿಸಲಿದ್ದು, ಈ ಸಂದರ್ಭದಲ್ಲಿ ಮಹಿಳೆಯರು, ಮಕ್ಕಳು ಸೇರಿದಂತೆ ಸಾರ್ವಜನಿಕ ಸುರಕ್ಷತೆ ನಮ್ಮ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ನಗರದಾದ್ಯಂತ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಒಂದೂವರೆ ಸಾವಿರ ಪೊಲೀಸರು: ಬಂದೋಬಸ್ತ್ ಕರ್ತವ್ಯಕ್ಕೆ ನಾಲ್ವರು ಡಿಸಿಪಿ, 8 ಎಸಿಪಿ, 34 ಇನ್ಸ್‌ಪೆಕ್ಟರ್, 66 ಸಬ್‌ಇನ್ಸ್‌ಪೆಕ್ಟರ್, 138 ಎಎಸ್‌ಐ, 1062 ಪುರುಷ ಹಾಗೂ 154 ಮಹಿಳಾ ಸಿಬ್ಬಂದಿ ಸೇರಿ ಒಟ್ಟು 1466 ಪೊಲೀಸರನ್ನು ನಿಯೋಜಿಸಲಾಗಿದೆ. ಜೊತೆಗೆ ಸಿಎಆರ್ 10 ಹಾಗೂ ಕೆಎಸ್‌ಆರ್‌ಪಿ 5 ತುಕಡಿ, ಕಮಾಂಡೋ ಪಡೆ 2, ಶ್ವಾನದಳ 1 ಹಾಗೂ ಎಎಸ್‌ಸಿ 2 ತಂಡಗಳು ಕಾರ್ಯ ನಿರ್ವಹಿಸಲಿವೆ.



ಸಾರ್ವಜನಿಕರಿಗೆ ಶುಭ ಕೋರುವ ನೆಪದಲ್ಲಿ ಕೀಟಲೆ ಮಾಡುವುದು, ಅಸಭ್ಯವಾಗಿ ವರ್ತಿಸುವುದ ತಡೆಯಲು ಪೊಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಠಾಣಾವಾರು ವಿಶೇಷ ಕಾರ್ಯಪಡೆ ರಚಿಸಲಾಗಿದೆ. ಮಹಿಳೆಯರ ರಕ್ಷಣೆಗಾಗಿ ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿಯನ್ನೊಳಗೊಂಡ ಸುರಕ್ಷತಾ ಪಿಂಕ್ ಗರುಡಾ (ಚಾಮುಂಡಿ ಪಡೆ) ಪಡೆಗಳನ್ನು ನಿಯೋಜಿಸಲಾಗಿದೆ. ಶ್ವಾನದಳ ಹಾಗೂ ವಿಧ್ವಂಸಕ ಕೃತ್ಯ ತಡೆ(ಎಎಸ್‌ಸಿ) ತಂಡಗಳು ನಿರಂತರವಾಗಿ ತಪಾಸಣೆ ನಡೆಸಲಿವೆ. ಪ್ರಮುಖ ಸ್ಥಳಗಳಲ್ಲಿ ಹೆಚ್ಚಿನ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಕಣ್ಗಾವಲಿಡಲಾಗಿದೆ. ವಾಹನದ ವ್ಹೀಲಿಂಗ್, ಡ್ರಾಗ್ ರೇಸ್, ಕರ್ಕಶ ಶಬ್ಧ ಮಾಡದಂತೆ ತಡೆಯಲು ಸಂಚಾರ ಪೊಲೀಸರನ್ನೊಳಗೊಂಡ ಕ್ಷಿಪ್ರ ಕಾರ್ಯಪಡೆ ಕಾರ್ಯ ನಿರ್ವಹಿಸಲಿದೆ. ಅತೀವೇಗ ಹಾಗೂ ಅಜಾಗರೂಕತೆಯಿಂದ ವಾಹನ ಚಾಲನೆ ಮಾಡುವವರು ಮತ್ತು ಕಿಡಿಗೇಡಿಗಳ ಬಗ್ಗೆ ನಿಗಾ ವಹಿಸಲು ಚೆಕ್ ಪೋಸ್ಟ್‌ಗಳನ್ನು ತೆರೆಯುವುದರ ಜೊತೆಗೆ 112 ವಾಹನ, ಹೈವೇ ಪೆಟ್ರೋಲ್ ವಾಹನಗಳನ್ನು ನಿಯೋಜಿಸಲಾಗುವುದು.

ನಿಯಮ ಮೀರಿದರೆ ಕ್ರಮ: ಹೋಟೆಲ್, ರೆಸ್ಟೋರೆಂಟ್, ಕ್ಲಬ್, ರೆಸಾರ್ಟ್, ಹೋಂ ಸ್ಟೇ, ಸರ್ವೀಸ್ ಅಪಾರ್ಟ್‌ಮೆಂಟ್, ಅಪಾರ್ಟ್‌ಮೆಂಟ್ ಅಸೋಸಿಯೇಷನ್, ಮಾಲ್, ಹಾಗೂ ಸಂಘ ಸಂಸ್ಥೆಗಳಲ್ಲಿ ಹೊಸ ■ 6ನೇ ಪುಟಕ್ಕೆ

ತೊಂದರೆಯಾದರೆ ಕರೆ ಮಾಡಿ

ಮೈಸೂರು ನಗರಕ್ಕೆ ಆಗಮಿಸುವ ಹಾಗೂ ಇಲ್ಲಿಂದ ನಿರ್ಗಮಿಸುವ ವಾಹನಗಳ ಮೇಲೆ ನಿಗಾ ವಹಿಸಲು ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗುವುದು. ಸಾರ್ವಜನಿಕರಿಗೆ ಏನಾದರೂ ತೊಂದರೆಯಾದರೆ ಪೊಲೀಸ್ ಕಂಟ್ರೋಲ್ ರೂಂ(0821–2418339/ 2418139) ಅಥವಾ 112ಗೆ ಕರೆ ಮಾಡಿ ಮಾಹಿತಿ ನೀಡಿದರೆ, ಪೊಲೀಸರು ತಕ್ಷಣ ನೆರವಿಗೆ ದಾವಿಸುತ್ತಾರೆ.

- ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತೆ

ಡಿ.31, ಚಾಮುಂಡಿಬೆಟ್ಟಕ್ಕೆ ಪ್ರವೇಶ ನಿರ್ಬಂಧ

ಡಿ.31ರ ರಾತ್ರಿ 7ರ ನಂತರ ಚಾಮುಂಡಿ ಬೆಟ್ಟಕ್ಕೆ ಉತ್ತನಹಳ್ಳಿ ಕ್ರಾಸ್ ಗೇಟ್, ದೈವಿವನ ಗೇಟ್, ಚಾಮುಂಡಿಬೆಟ್ಟ ಪಾದದ ಗೇಟ್, ಲಲಿತಮಹಲ್ ಗೇಟ್ ಮೂಲಕ, ರಾತ್ರಿ 8ರ ನಂತರ ತಾವರಕಟ್ಟೆ ಗೇಟ್ ಮೂಲಕ ಪ್ರವೇಶ ನಿರ್ಬಂಧಿಸಲಾಗಿದೆ. ಬೆಟ್ಟಕ್ಕೆ ಯಾವುದೇ ರೀತಿಯ ಊಟ, ಮದ್ಯದ ಬಾಟಲಿಗಳನ್ನು ತೆಗೆದುಕೊಂಡು ಹೋಗುವಂತಿಲ್ಲ. ರಾತ್ರಿ 9ರ ನಂತರ ಸಾರ್ವಜನಿಕರು ಬೆಟ್ಟದಿಂದ ವಾಪಸ್ ಬರಬೇಕು. ಚಾಮುಂಡಿಬೆಟ್ಟ ಹಾಗೂ ಸುತ್ತಮುತ್ತಲ ಗ್ರಾಮಸ್ಥರನ್ನು ಹೊರತುಪಡಿಸಿ, ಉಳಿದ ಎಲ್ಲರಿಗೂ ಈ ನಿರ್ಬಂಧ ಅನ್ವಯವಾಗಲಿದೆ.

ಡಿಕೆಶಿ ನಡೆ ನಿಗೂಢ!

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಭೇಟಿ?


ಬೆಂಗಳೂರು, ಡಿ.29(ಕೆಎಂಶಿ)– ಮುಖ್ಯ ಮಂತ್ರಿ ಸಿದ್ದರಾಮಯ್ಯ ಕೊಟ್ಟ ಮಾತಿ ನಂತೆ ಜ.7 ರೊಳಗೆ ಅಧಿಕಾರ ಹಸ್ತಾಂತರ ಮಾಡದಿದ್ದರೆ ಶಕ್ತಿ ಪ್ರದರ್ಶನಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಣಿಯಾಗುತ್ತಿದ್ದಾರೆ.

ಸಹೋದರ ಡಿ.ಕೆ.ಸುರೇಶ್, ಕೆಲವು ಆಪ್ತ ಸಚಿವರು, ಶಾಸಕರು, ಹಿತೈಷಿಗಳ ಮಾರ್ಗದರ್ಶನದಲ್ಲಿ ಮುಖ್ಯಮಂತ್ರಿ ವಿರುದ್ಧ ಬಹಿರಂಗ ವಾಗಿಯೇ ಬಂಡಾಯ ಏಳಲು ಮುಂದಾಗಿ ದ್ದಾರೆ. ಈ ಮಧ್ಯೆ, ಕಳೆದ ರಾತ್ರಿ ಗೋವಾದ ಖಾಸಗಿ ಸ್ಥಳವೊಂದರಲ್ಲಿ ಅಲ್ಲಿನ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರನ್ನು ಡಿ.ಕೆ.ಶಿವ ಕುಮಾರ್ ಭೇಟಿ ಮಾಡಿದ್ದರು ಎನ್ನಲಾಗಿದೆ.

ಅಲ್ಲಿನ ವಿಧಾನಸಭಾಧ್ಯಕ್ಷ ಗಣೇಶ್ ಗಾಂವ್ಕರ್ ಮತ್ತು ರಾಜ್ಯದ ಬಂದರು ಮತ್ತು ಮೀನುಗಾರಿಕೆ ಜೊತೆಗೆ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಾಂಕಾಳು ವೈದ್ಯ ಈ ಭೇಟಿ ವ್ಯವಸ್ಥೆ ಮಾಡಿದ್ದರಂತೆ. ಹಡಗು ಉದ್ಯಮಿಯೂ ಆದ ಸಚಿವ ವೈದ್ಯ, ಗೋವಾ ಮುಖ್ಯಮಂತ್ರಿ ಹಾಗೂ ಅಲ್ಲಿನ ಸರ್ಕಾರದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಗೋವಾ ಮುಖ್ಯ ಮಂತ್ರಿ ಜೊತೆ ಮಾತುಕತೆ ಸಂದರ್ಭದಲ್ಲೂ ಈ ಇಬ್ಬರೂ ನಾಯಕರು ಉಪಸ್ಥಿತರಿದ್ದರು ಎನ್ನಲಾಗಿದೆ. ಅಧಿಕಾರ ಹಂಚಿಕೆ ಗೊಂದಲದ ನಡುವೆಯೇ ಶಿವಕುಮಾರ್ ಹಾಗೂ ಗೋವಾ ಮುಖ್ಯಮಂತ್ರಿ ಮಾತುಕತೆ ಕಾಂಗ್ರೆಸ್ ವಲಯದಲ್ಲಿ ಭಾರೀ ಚರ್ಚೆಗೆ ಎಡೆ ಮಾಡಿದೆ. ಆದರೆ, ಭೇಟಿಯ ಸ್ಪಷ್ಟ ಕಾರಣ ತಿಳಿದುಬಂದಿಲ್ಲ.



ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೋಮವಾರ ಗೋವಾದಲ್ಲಿ ಅಲ್ಲಿನ ಮಾಜಿ ಉಪಮುಖ್ಯಮಂತ್ರಿ ಹಾಗೂ ಹಾಲಿ ಶಾಸಕ ವಿಜಯ್‌ಸರ್‌ದೇಸಾಯ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.



ಪ್ರಮೋದ್ ಸಾವಂತ್

ಶಿವಕುಮಾರ್ ಬೆಂಬಲಿಗರು ಮಾತ್ರ ಅಧಿಕಾರ ಪಡೆಯಲೇಬೇಕೆಂದು ತಮ್ಮ ನಾಯಕನನ್ನು ಹುರಿದುಂಬಿಸಿರುವುದಲ್ಲದೆ, ಹೊಸ ವರ್ಷದ ಮೊದಲ ವಾರದಲ್ಲೇ ಸ್ಫೋಟಕ ಸುದ್ದಿ ನೀಡಲು ಗೌಪ್ಯ ಕಾರ್ಯತಂತ್ರಗಳಿಗೆ ಮುಂದಾಗಿದ್ದಾರೆ.

ಕಳೆದ ವಾರವಷ್ಟೇ ಸುರೇಶ್, ಗುರಿ ಮುಟ್ಟುವವರೆಗೂ ವಿಶ್ರಮಿಸದೆ ಮುನ್ನುಗ್ಗಬೇಕು ಎಂಬ ಸಂದೇಶ ನೀಡಿದ ಬೆನ್ನಲ್ಲೇ ಈ ಬೆಳವಣಿಗೆಗಳು ನಡೆದಿವೆ.

ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಹಾಗೂ ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಮ್ಮನ್ನು ಭೇಟಿಯಿಂದ ದೂರ ಇಡುತ್ತಿರುವುದು ಶಿವಕುಮಾರ್ ಅವರನ್ನು ಕೆರಳಿಸಿದೆ. ದೆಹಲಿಯಿಂದ ಹಿಂತಿರುಗುತ್ತಿದ್ದಂತೆ ಎಐಸಿಸಿ ಅಧ್ಯಕ್ಷ ಮಲ್ಲಿ ಕಾರ್ಜುನ ಖರ್ಗೆ ಅವರನ್ನು ನಗರದಲ್ಲೇ ಭೇಟಿ ಮಾಡಿ ವರಿಷ್ಠರ ನಡೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಸಿಡಬ್ಲ್ಯೂಸಿ ಸಭೆ ವೇಳೆ ಮುಖ್ಯಮಂತ್ರಿ ಅವರು, ರಾಹುಲ್ ಗಾಂಧಿ ಭೇಟಿ ಮಾಡಿದ ನಂತರ ಸಂಪುಟ ಪುನರ್ ರಚನೆ ಸುದ್ದಿಗಳು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆ ಶಿವಕುಮಾರ್ ಮತ್ತಷ್ಟು ಕೆರಳಿದ್ದಾರೆ. ಕೊಟ್ಟ ಮಾತಿನಂತೆ ನಡೆದು ಕೊಳ್ಳಲು ಮುಖ್ಯಮಂತ್ರಿ ಹಿಂದೆ ಸರಿಯುತ್ತಿರುವ ಹಿನ್ನೆಲೆಯಲ್ಲಿ ದೆಹಲಿ ವರಿಷ್ಠರಿಗೆ ಮತ್ತು ಸಿದ್ದರಾಮಯ್ಯ ಅವರಿಗೆ ತಮ್ಮ ಶಕ್ತಿ ಪ್ರದ ರ್ಶಿಸಲು ವೇದಿಕೆ ಸಿದ್ಧ ಮಾಡುತ್ತಿದ್ದಾರೆ.

ಈ ಮಧ್ಯೆ ರಾಮನಗರ ಶಾಸಕ ಇಕ್ಬಾಲ್ ಹುಸೇನ್, 15ಕ್ಕೂ ಅಧಿಕ ಮಂದಿ ಮಠಾಧಿಪತಿಗಳ ನಿರ್ಣಯದಂತೆ ಜ.6 ಇಲ್ಲವೇ 9ರಂದು ಪ್ರಮಾಣ ವಚನಕ್ಕೆ ಪ್ರಶಸ್ತ ಕಾಲವೆಂದು ನಿರ್ಧರಿಸಲಾಗಿತ್ತು ಎಂದು ಸ್ಪಷ್ಟನೆ ನೀಡಿದ್ದಾರೆ.

ಲೈಂಗಿಕ ದೌರ್ಜನ್ಯ ಕೇಸ್; ಹೆಚ್.ಡಿ ರೇವಣ್ಣಗೆ ರಿಲೀಫ್

ಬೆಂಗಳೂರು, ಡಿ.29– ಹೊಳೆನರಸೀ ಪುರದ ಸಂತ್ರಸ್ತೆಯ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣಗೆ ಬಿಗ್ ರಿಲೀಫ್ ಸಿಕ್ಕಿದೆ. ರೇವಣ್ಣ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್ ಕೈಬಿಟ್ಟಿದೆ.



ಆರೋಪವೇನು: ರೇವಣ್ಣ ತಮ್ಮ ಕೊಠಡಿಗೆ ಬರುವಂತೆ ಆಹ್ವಾನಿಸಿ ಹಣ್ಣು ಕೊಡುವ ನೆಪದಲ್ಲಿ ಮೈ ಮುಟ್ಟುತ್ತಿದ್ದರು. ಮನೆಯ ಸ್ಟೋರ್ ರೂಮಿನಲ್ಲಿ ಕೈ ಹಿಡಿದು ಎಳೆಯುತ್ತಿದ್ದರು. ಸೀರೆಯ ಪಿನ್ ಕಿತ್ತು ಲೈಂಗಿಕ ದೌರ್ಜನ್ಯ ಎಸಗುತ್ತಿದ್ದರು. ಪ್ರಜ್ವಲ್ ಹಿಂದಿನಿಂದ ಬಂದು ಮೈ ಮುಟ್ಟುತ್ತಿದ್ದರು. ಇದೇ ರೀತಿ ಹಲವು ಬಾರಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆಂದು ಹೊಳೇನರಸಿಪುರ ಮಹಿಳಾ ಪೊಲೀಸರಿಗೆ 2024ರ ಏಪ್ರಿಲ್‌ನಲ್ಲಿ ದೂರು ನೀಡಿದ್ದರು. ಮಹಿಳೆಯ ದೂರಿನ ಅನ್ವಯ ರೇವಣ್ಣ ಹಾಗೂ ಪ್ರಜ್ವಲ್ ರೇವಣ್ಣ ವಿರುದ್ಧ ಐಪಿಸಿ ಸೆಕ್ಷನ್ 354 ಎ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ದಳ ನಡೆಸುತ್ತಿತ್ತು. ಈ ಮಧ್ಯೆ, ರೇವಣ್ಣ ಅವರು ತಮ್ಮ ಮೇಲಿನ ಪ್ರಕರಣವನ್ನು ಕೈಬಿಡುವಂತೆ ಕೋರಿ ಕೋರ್ಟ್ ಮೊರೆ ಹೋಗಿದ್ದರು.

ಹುಣಸೂರು ಚಿನ್ನಾಭರಣ ಅಂಗಡಿ ದರೋಡೆ ಪ್ರಕರಣ

ಸುಮಾರು 7.5 ಕೆ.ಜಿ. ಚಿನ್ನಾಭರಣ ಲೂಟಿ; ಖದೀಮರಿಗೆ ತೀವ್ರ ಶೋಧ

ಮೈಸೂರು, ಡಿ.29(ಆರ್‌ಕೆ)– ಹುಣಸೂರಿನ ಹೃದಯ ಭಾಗದಲ್ಲಿರುವ ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್ ಚಿನ್ನಾಭರಣ ಅಂಗಡಿಯಲ್ಲಿ ಭಾನುವಾರ ಮಧ್ಯಾಹ್ನ ದರೋಡೆ ಮಾಡಿದ ದುಷ್ಕರ್ಮಿಗಳು ಸುಮಾರು 7.5 ಕೆ.ಜಿ. ಚಿನ್ನಾಭರಣವನ್ನು ಹೊತ್ತೊಯ್ದಿದ್ದಾರೆ ಎಂದು ಮಳಿಗೆಯ ಮ್ಯಾನೇಜರ್ ಪೊಲೀಸರಿಗೆ ಮಾಹಿತಿ ನೀಡಿದ್ದಾರೆನ್ನಲಾಗಿದೆ



ಮಳಿಗೆಯಲ್ಲಿ ಸಂಗ್ರಹಿಸಲಾಗಿದ್ದ ಆಭರಣಗಳಲ್ಲಿ ಈವರೆಗೆ ಮಾರಾಟವಾಗಿದ್ದನ್ನು ಕಳೆದು, ಉಳಿದ ಆಭರಣಗಳ ಲೆಕ್ಕಾಚಾರ ಮಾಡಿದ ನಂತರ ಸುಮಾರು 7.5 ಕೆ.ಜಿ. ಚಿನ್ನಾಭರಣ ದರೋಡೆಯಾಗಿದೆ. ಅದರ ನಿಖರ ಮೌಲ್ಯವನ್ನು ಲೆಕ್ಕ ಹಾಕಿದ ನಂತರ ತಿಳಿಸುವುದಾಗಿ ಪೊಲೀಸರಿಗೆ ಮ್ಯಾನೇಜರ್ ಹೇಳಿದ್ದು, ಅಂದಾಜು 10 ಕೋಟಿ ಮೌಲ್ಯದ ಆಭರಣಗಳು ದರೋಡೆ ಆಗಿವೆ ಎಂದು ಹೇಳಲಾಗಿದೆ.

ಮುಗ್ಗರಿಸಿದ ಮುನ್ನೆಚ್ಚರಿಕೆ: ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್ ಮಳಿಗೆಯು ಕೇರಳ ಸೇರಿದಂತೆ 5 ಕಡೆ ಶಾಖೆಗಳನ್ನು ಹೊಂದಿದ್ದು, ಎಲ್ಲಾ ಮಳಿಗೆಗಳ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಒಟ್ಟುಗೂಡಿಸಿ ಮಾಲೀಕರಿಗೆ ಸಂಪರ್ಕ ಕಲ್ಪಿಸಲಾಗಿದೆ. ಮಳಿಗೆಗಳ ಮ್ಯಾನೇಜರ್‌ಗಳು ಹಾಗೂ ಪಾಲುದಾರರು ಸಹ ತಾವಿರುವಲ್ಲೇ ಯಾವುದೇ ಶಾಖೆಯ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ವೀಕ್ಷಿಸಬಹುದಾದಂತಹ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಭಾನುವಾರ ಮಧ್ಯಾಹ್ನ ಹುಣಸೂರಿನ ಮಳಿಗೆಯಲ್ಲಿ ದರೋಡೆಕೋರರು ರಿವಾಲ್ವರ್ ತೋರಿಸಿ ದರೋಡೆ ಮಾಡುತ್ತಿರುವ ದೃಶ್ಯವನ್ನು ಕೇರಳ ಮಳಿಗೆಯೊಂದರ ಮ್ಯಾನೇಜರ್ ವೀಕ್ಷಿಸಿ ತಕ್ಷಣವೇ ಹುಣಸೂರು ಶಾಖೆಯ ಮ್ಯಾನೇಜರ್ ಅಸ್ಗರ್‌ಗೆ ಕರೆ ಮಾಡಿ, ವಿಚಾರಿಸಿದರಂತೆ. ಆ ಸಂದರ್ಭದಲ್ಲಿ ಮಳಿಗೆಯ ಪಕ್ಕದ ಕೊಠಡಿಯಲ್ಲಿ ಊಟ ಮಾಡುತ್ತಿದ್ದ ಅಸ್ಗರ್, ಅದನ್ನು ಅರ್ಧದಲ್ಲೇ ಬಿಟ್ಟು, ಮಳಿಗೆಗೆ ಧಾವಿಸಿದ್ದು, ಅದರ ಶೆಟ್ಟರ್ ಅನ್ನು ಕೆಳಗಿಳಿಸಿ, ದರೋಡೆಕೋರರು ■ 6ನೇ ಪುಟಕ್ಕೆ

ಹಣಕಾಸು ವ್ಯವಹಾರ ವೈಷಮ್ಯದ ಹಿನ್ನೆಲೆ

ತಂದೆ–ತಾಯಿ, ಮಗನಿಂದ ವ್ಯಾಪಾರಿ ಹತ್ಯೆ

ಕೊಳ್ಳೇಗಾಲ, ಡಿ.29–ಹಣಕಾಸು ವ್ಯವಹಾರದಲ್ಲಿ ಉಂಟಾದ ವೈಷಮ್ಯದಿಂದಾಗಿ ವ್ಯಾಪಾರಿಯೋರ್ವನನ್ನು ಒಂದೇ ಕುಟುಂಬದ ಮೂವರು ಸೇರಿ ಮಾರಕಾಸ್ತ್ರಗಳ ಬಳಸಿ, ಹಲ್ಲೆ ನಡೆಸಿ ಹತ್ಯೆ ಮಾಡಿರುವ ಘಟನೆ ತಾಲೂಕಿನ ಜಾಗೇರಿಯ ಚಿನ್ನಿಪುರದೊಡ್ಡಿ ಗ್ರಾಮದಲ್ಲಿ ನಡೆದಿದೆ.



ಉಮೇಶ್

ಗ್ರಾಮದ ಸಣ್ಣೇಗೌಡ ಎಂಬುವರ ಪುತ್ರ ಉಮೇಶ್(40) ಹತ್ಯೆಗೀಡಾದ ವ್ಯಾಪಾರಿಯಾಗಿದ್ದು, ಈತನನ್ನು ಅದೇ ಗ್ರಾಮದ ಪುಟ್ಟಸ್ವಾಮಿಗೌಡ, ಆತನ ಪತ್ನಿ ನಾಗಮ್ಮ, ಪುತ್ರ ಸ್ವಾಮಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ. ಗ್ರಾಮದಲ್ಲಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದ ಉಮೇಶ್ ■ 6ನೇ ಪುಟಕ್ಕೆ

ಪ್ರೀತಿಸಿದ ಯುವತಿ ನಾಪತ್ತೆ: ಪ್ರಿಯಕರ ನೇಣಿಗೆ ಶರಣು

ತಿ.ನರಸೀಪುರ, ಡಿ.29– ಅನ್ಯಕೋಮಿನ ಯುವಕನ ಪ್ರೀತಿಸಿ ಮದುವೆಯಾಗಿದ್ದನ್ನು ಸಹಿಸದ ತಂದೆ, ಗರ್ಭಿಣಿ ಮಗಳನ್ನೇ ಇತ್ತೀಚೆಗೆ ಕೊಂದ ಘಟನೆ ರಾಜ್ಯದಲ್ಲಿ ಭಾರೀ ಸುದ್ದಿಯಾಗಿತ್ತು. ಅದರ ಬೆನ್ನಲ್ಲೇ ಯುವತಿ ನಾಪತ್ತೆಯಾದ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮದ ಮುಖಂಡರು ಯುವಕನ ಮೇಲೆ ಹಲ್ಲೆ ನಡೆಸಿ, ಬೆದರಿಕೆಯೊಡ್ಡಿದ ಹಿನ್ನೆಲೆಯಲ್ಲಿ ಆತ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಿ.ಸೀಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಲೇ.ಜಯರಾಮು ಹಾಗೂ ಮಂಜುಳಾ ದಂಪತಿ ಪುತ್ರ ನಾಗೇಂದ್ರ(23) ಆತ್ಮಹತ್ಯೆ ಮಾಡಿಕೊಂಡ ಯುವಕ. ಈತ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ ಎನ್ನಲಾಗಿದೆ. ಆದರೆ ಯುವತಿ ನಾಪತ್ತೆಯಾಗಿದ್ದಾಳೆ ■ 6ನೇ ಪುಟಕ್ಕೆ



ನಾಗೇಂದ್ರ

ಮೈಸೂರು ಅರಮನೆ ವರಹಾ ಗೇಟ್ ಆಜು–ಬಾಜಲ್ಲಿ ಪ್ರವಾಸಿಗರಿಗೆ 'ಕಿರುಕುಳ' ವ್ಯಾಪಾರ ವಹಿವಾಟು ತೆರವು

- ಜಯಮಾರ್ತಾಂಡ ದ್ವಾರದ ಬಳಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ದುರಂತದ ಬಳಿಕ ಎಚ್ಚೆತ್ತ ಅಧಿಕಾರಿಗಳು
- ಮತ್ತೆ ಗೂಡಂಗಡಿಗಳು ತಲೆ ಎತ್ತದಂತೆ ಕಮಾಂಡೋ ಪಡೆ ನಿಯೋಜನೆ; ಇದು ಆರಂಭ ಶೂರತ್ವವಾಗದಿರಲಿ!

ಮೈಸೂರು, ಡಿ.29(ಎಂಟಿವೈ)– ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಕ್ಕೆ ಮೂವರು ಬಲಿಯಾದ ಘಟನೆಯಿಂದ ಕೊನೆಗೂ ಎಚ್ಚೆತ್ತಿರುವ ಮೈಸೂರು ನಗರ ಪೊಲೀಸರು, ಅರಮನೆ ವರಹಾ ಗೇಟ್ ಬಳಿ ಅನಧಿಕೃತವಾಗಿ ಹಲವು ವರ್ಷಗಳಿಂದ ತಲೆ ಎತ್ತಿದ್ದ ಗೂಡಂಗಡಿಗಳನ್ನು ತೆರವು ಮಾಡಿ, ಅವು ಅಲ್ಲಿ ಮತ್ತೆ ತಲೆಯೆತ್ತದಂತೆ ಕಮಾಂಡೋ ಪಡೆಯನ್ನು ನಿಯೋಜಿಸಿದೆ.

ಅರಮನೆಯ ಜಯಮಾರ್ತಾಂಡ ದ್ವಾರದ ಮುಂಭಾಗ ಬಿ.ಎನ್.ರಸ್ತೆಯಲ್ಲಿ ಡಿ.25ರಂದು ಬಲೂನು ವ್ಯಾಪಾರಿ ಬಳಿಯಿದ್ದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ದುರಂತ ಹಿನ್ನೆಲೆಯಲ್ಲಿ ಅರಮನೆ ಸುತ್ತಮುತ್ತ, ಮೈಸೂರಿನ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿರುವ ಅನಧಿಕೃತ ವ್ಯಾಪಾರಿ ಹಾಗೂ ಅಪಾಯಕಾರಿ ಸ್ಥಿತಿಯಲ್ಲಿರುವ ಫಾಸ್ಟ್‌ಫುಡ್‌ಗಳನ್ನು ತೆರವು ಮಾಡುವಂತೆ ಸಾರ್ವಜನಿಕ ವಲಯದಿಂದ ಒತ್ತಾಯ ಕೇಳಿ ಬಂದಿತ್ತು. ಮೊದಲ ಹಂತದಲ್ಲಿ ಹೊಸ ವರ್ಷದ ಸಂಭ್ರಮಾಚರಣೆಗಾಗಿ ಮೈಸೂರು ಅರಮನೆಗೆ ಹೆಚ್ಚಿನ ಪ್ರವಾಸಿಗರು ಹಾಗೂ ಸ್ಥಳೀಯರು ಆಗಮಿಸುವುದರಿಂದ ಸುರಕ್ಷತೆ ದೃಷ್ಟಿಯಿಂದ ಅರಮನೆಯ ವರಹಾ (ಗನ್‌ಹೌಸ್) ಗೇಟ್ ಬಳಿ ಎರಡೂ ಬದಿಯ 50ಕ್ಕೂ ಹೆಚ್ಚು ಗೂಡಂಗಡಿಗಳನ್ನು ತೆರವುಗೊಳಿಸಲಾಗಿದೆ.

ಪ್ರವಾಸಿಗರಿಗೆ ಕಿರಿಕಿರಿ: ಮೈಸೂರಿನ ಪ್ರಮುಖ ಪ್ರವಾಸಿ ತಾಣವೂ ಆಗಿರುವ ವಿಶ್ವ ಪ್ರಸಿದ್ಧ ಅರಮನೆ ವೀಕ್ಷಿಸಲು ದೇಶ–ವಿದೇಶದಿಂದ ಆಗಮಿಸುವ ಪ್ರವಾಸಿಗರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಸಾಮಾನ್ಯ ದಿನಗಳಲ್ಲಿ ದಿನಕ್ಕೆ 10ರಿಂದ 15 ಸಾವಿರ, ರಜೆ ದಿನ, ವಾರಾಂತ್ಯದ ದಿನಕ್ಕೆ 21ರಿಂದ 25 ಸಾವಿರ ಪ್ರವಾಸಿಗರು ಅರಮನೆಗೆ ಆಗಮಿಸುತ್ತಿದ್ದಾರೆ. ಪ್ರವಾಸಿಗರು ವರಹಾ ದ್ವಾರ ಹಾಗೂ ಅಂಬಾವಿಲಾಸ ದ್ವಾರದಿಂದಲೇ ಅರಮನೆಗೆ ಪ್ರವೇಶಿಸಬೇಕಾಗಿದೆ. ಆದರೆ, ಗನ್‌ಹೌಸ್ ಮುಂಭಾಗದಿಂದ ಅರಮನೆಯ ವರಹಾ ದ್ವಾರದ ಅಂಚಿನವರೆಗೂ ಎರಡೂ ಬದಿಯಲ್ಲಿ ಕಳೆದ ವರ್ಷಗಳಿಂದ 50ಕ್ಕೂ ಹೆಚ್ಚು ವ್ಯಾಪಾರಿಗಳು ಆಟಿಕೆ ಸೇರಿದಂತೆ ವಿವಿಧ ವಸ್ತುಗಳನ್ನು ಮಾರಾಟ ಮಾಡಲು ಗೂಡಂಗಡಿಗಳನ್ನು ಇಟ್ಟುಕೊಂಡಿದ್ದಾರೆ.



ಅರಮನೆಯ ವರಹಾ ಗೇಟ್ ಬಳಿ ಗೂಡಂಗಡಿ ತೆರವುಗೊಳಿಸಿ, ಭದ್ರತೆಗೆ ಕಮಾಂಡೋ ಪಡೆ ನಿಯೋಜಿಸಿರುವುದು.

ಶಾಶ್ವತ ನಿರ್ಬಂಧ ವಿಧಿಸಿ

"ವರಹಾ ಗೇಟ್ ಬಳಿ ಗೂಡಂಗಡಿಗಳನ್ನು ತೆರವು ಮಾಡಿರುವ ಪೊಲೀಸರ ಕ್ರಮಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ. ತೆರವು ಕಾರ್ಯ ಕೇವಲ 3–4 ದಿನಕ್ಕೆ ಸೀಮಿತವಾಗಬಾರದು. ಶಾಶ್ವತವಾಗಿ ಗೂಡಂಗಡಿ ತೆರವು ಮಾಡಿ ಅರಮನೆಗೆ ಹೆಚ್ಚಿನ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಸಣ್ಣ ಜಾಗದಲ್ಲೇ ಗೂಡಂಗಡಿಗಳ ಮುಂದೆ ಅರಮನೆಗೆ ಹೋಗಲು ಪ್ರವಾಸಿಗರಿಗೆ ತೊಂದರೆಯಾಗುತ್ತಿತ್ತು. ಅಲ್ಲದೆ, ಅರಮನೆ ಭದ್ರತೆಗೂ ಈ ಗೂಡಂಗಡಿಗಳಿಂದ ದಕ್ಕೆಯಾಗುತ್ತಿತ್ತು ಎಂದು ಈ ಹಿಂದೆಯೇ ಸಿಎಸ್‌ಎಫ್(ಕೈಗಾರಿಕಾ ಭದ್ರತಾ ಪಡೆ) ಎಚ್ಚರಿಸಿತ್ತು. ಆದರೂ ಗೂಡಂಗಡಿಗಳನ್ನು ತೆರವು ಮಾಡಲು ಕ್ರಮ ಕೈಗೊಂಡಿರಲಿಲ್ಲ. ಡಿ.25ರಂದು ರಾತ್ರಿ ಜಯಮಾರ್ತಾಂಡ ದ್ವಾರದ ಬಳಿ ಸಂಭವಿಸಿದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ನಗರ ಪೊಲೀಸರನ್ನು ಜಾಗೃತಗೊಳಿಸಿದೆ.

ಕಮಾಂಡೊ ಪಡೆ ನಿಯೋಜನೆ: ಹೊಸ ವರ್ಷದ ಸಂಭ್ರಮಾಚರಣೆಗೆ ಇನ್ನು ಕೇವಲ ಎರಡು ದಿನವಿದೆ. ಮುಂಜಾಗ್ರತಾ ಕ್ರಮವಾಗಿ ವರಹಾ ಗೇಟ್ ಬಳಿ ■ 6ನೇ ಪುಟಕ್ಕೆ

ಜ.1ರಂದು ಭೀಮಾ ಕೋರೆಗಾಂವ್ ಸಂಭ್ರಮಾಚರಣೆ



ಮೈಸೂರು,ಡಿ.29(ಜಿಎ)–ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ ವತಿಯಿಂದ ಜ.1ರಂದು ಸಂಜೆ 5.30ಕ್ಕೆ ಅಶೋಕಪುರಂ ರೈಲ್ವೆ ಗೇಟ್ ಬಳಿ ಭೀಮಾ ಕೋರೆಗಾಂವ್ 208ನೇ ಸಂಭ್ರಮಾಚರಣೆ ಹಾಗೂ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಹಿರಿಯ ವಕೀಲರೂ ಆದ ಎಸ್. ಉಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತರಸಂತೆಯ ಸಾರನಾಥ ಬುದ್ಧ ವಿಹಾರದ ಬಿಕ್ಕುಣಿ ಗೌತಮಿಮಾತೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಉದ್ಘಾಟಿಸಲಿದ್ದಾರೆ. ರಂಗಾಯಣ ಮಾಜಿ ನಿರ್ದೇಶಕ ಡಾ.ಜನಾರ್ಧನ್ (ಜನ್ನಿ) ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಮತಾ ವೇದಿಕೆ ಅಧ್ಯಕ್ಷೆ ರತಿರಾವ್ ಮುಖ್ಯ ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ಮಾಜಿ ಮೇಯರ್ ಪುರುಷೋತ್ತಮ್, ಚೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರಾದ ಎಸ್.ಬಿ. ಅನಿತಾ, 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್. ವೆಂಕಟೇಶ್, ಸಮಾಜ ಸೇವಕ ಆರ್.ಸಿ. ಮಹೇಶ್ ಮತ್ತಿತರರು ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ಬ್ಯಾಗ್ ಪುಸ್ತಕ ವಿತರಣೆ ನಡೆಯಲಿದೆ ಎಂದು ತಿಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಭೀಮಾ ಕೋರೆಗಾಂವ್ ಇತಿಹಾಸವನ್ನು ಪಠ್ಯದಲ್ಲಿ ಸೇರಿಸುವ ಮೂಲಕ ಅದರ ಮಾಹಿತಿ ಮಕ್ಕಳಿಗೆ ನೀಡಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ವಿಷಕಂಠ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರಿನ ಕೋಗಿಲು ಲೇ ಔಟ್ ವಲಸಿಗರಿಗೆ ಮನೆ ನಿರ್ಮಾಣ
ಕೇರಳದವರ ಕೈಗೊಂಬೆಯಾಗಿರುವ ರಾಜ್ಯ ಸರ್ಕಾರ

- ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಆರೋಪ
- ಕರ್ನಾಟಕದ ಸಾವಿರಾರು ಜನರಿಗೆ ಮನೆ ಇಲ್ಲ; ಆದರೂ ಕೇರಳದವರಿಗೆ ಮನೆ ನಿರ್ಮಾಣ
- ಮುಸ್ಲಿಂ ವೋಟ್ ಬ್ಯಾಂಕ್‌ಗಾಗಿ ರಾಜ್ಯದ ಹಿತಾಸಕ್ತಿ ಬಲಿ

ಮೈಸೂರು, ಡಿ.29(ಬಿಎಲ್‌ಯು)–ಇತ್ತೀಚೆಗೆ ಅಕ್ರಮ ನಿರ್ಮಾಣಗಳ ತೆರವುಗೊಳಿಸಲಾದ ಬೆಂಗಳೂರಿನ ಕೋಗಿಲು ಲೇಔಟ್ ವಲಸಿಗರಿಗೆ ಮನೆ ನಿರ್ಮಾಣ ಮಾಡುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ, ಕೇರಳದವರ ಕೈಗೊಂಬೆಯಾಗಿ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಆರೋಪಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಸ್ಲಿಂ ವೋಟ್ ಬ್ಯಾಂಕ್‌ಗಾಗಿ ಕರ್ನಾಟಕದ ಮಾನ, ಮರ್ಯಾದೆ, ಗೌರವವನ್ನು ಅಡವಿಟ್ಟಿದ್ದಾರೆ ಎಂದು ದೂರಿದರು.

ಬೆಂಗಳೂರಿನ ಕೋಗಿಲು ಲೇಟ್‌ಔಟ್‌ನಲ್ಲಿ ವಲಸಿಗರ ಮನೆ ಧ್ವಂಸ ಪ್ರಕರಣ ಸಂಬಂಧ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಧ್ವನಿ ಎತ್ತಿದ್ದರು. ಮುಂದಿನ ವರ್ಷ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂರ ಮತವನ್ನು ಒಟ್ಟುಗೂಡಿಸಿಕೊಳ್ಳಲು ಮುಸ್ಲಿಂ ಪರವಾಗಿ ಮಾತನಾಡಿದರು ಎಂದು ಹೇಳಿದರು.

ಇದರಿಂದ ಕೇರಳದಲ್ಲಿ ಮುಸ್ಲಿಂರ ಮತಗಳು ಕೈ ತಪ್ಪಬಾರದೆಂದು ಅಲ್ಲಿನ ಲೋಕಸಭಾ ಸದಸ್ಯ ಕೆ.ಸಿ.ವೇಣುಗೋಪಾಲ್ ಕೂಡ ಮುಸ್ಲಿಂರ ಪರವಾಗಿ ಮಾತನಾಡಿದ್ದಾರೆ. ವೇಣುಗೋಪಾಲ್ ಅವರ ಒತ್ತಡದ ಮೇರೆಗೆ ರಾಜ್ಯ ಸರ್ಕಾರ ಕೋಗಿಲು ಬಡಾವಣೆಯ ಸಂತ್ರಸ್ತರಿಗೆ ಈಗ ಮುಕ್ತ ಮನೆ ನಿರ್ಮಾಣ ಮಾಡಿಕೊಡುತ್ತಿದೆ ಎಂದು ತಿಳಿಸಿದರು.


ಎಂ.ಜಿ.ಮಹೇಶ್

ಕರ್ನಾಟಕದಲ್ಲಿ ಬಹಳಷ್ಟು ಜನರು ಇನ್ನು ಕೂಡ ಗುಡಿಸಲು ಹಾಗೂ ಕೊಳಚೆ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಹತ್ತಾರು ವರ್ಷವಾದರೂ ಅವರಿಗೆ ಮನೆ ನೀಡಿಲ್ಲ. ಹೀಗಿರುವಾಗ ಕೇರಳದವರ ಒತ್ತಡಕ್ಕೆ ಮಣಿದು ವಲಸಿಗರಿಗೆ ಮನೆ ನೀಡುತ್ತಿದ್ದಾರೆ. ಈ ಮೂಲಕ ಕೇರಳದವರಿಗಾಗಿ ಕರ್ನಾಟಕದ ಜನರ ಹಿತಾಸಕ್ತಿಯನ್ನು ಬಲಿ ನೀಡುತ್ತಿದ್ದಾರೆ ಎಂದು ಆಪಾದಿಸಿದರು.

ಕೇರಳದ ವೈನಾಡುವಿನಲ್ಲಿ ಭೂ ಕುಸಿತವಾದವರಿಗೆ ರಾಜ್ಯ ಸರ್ಕಾರ ನೂರಾರು ಮನೆ ನಿರ್ಮಾಣ ಮಾಡಿಕೊಡುತ್ತಿದೆ, ಕೇರಳದಲ್ಲಿ ಆನೆ ದಾಳಿಗೆ ಬಲಿಯಾದವನಿಗೆ ಪರಿಹಾರ ನೀಡಿದೆ. ಬಂಡೀಪುರದಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಅನುಮತಿ ನೀಡಲು ಮುಂದಾಗಿದ್ದಾರೆ. ಈ ಮೂಲಕ ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಹಾಗೂ ವೇಣುಗೋಪಾಲ್ ಅವರ ಆದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಸರ್ಕಾರದ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು ಇದರಿಂದ ಸ್ಪಷ್ಟವಾಗಿದೆ ಎಂದು ಆರೋಪಿಸಿದರು. ಕರ್ನಾಟಕದಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಮೈಸೂರು ನಂತರ ಬೆಂಗಳೂರಿನಲ್ಲಿ ಕೋಟ್ಯಾಂತರ ರೂಪಾಯಿ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ. ಈ ಮೂಲಕ ಉಡ್ತಾ ಪಂಜಾಬ್‌ನಂತೆ ಉಡ್ತಾ ಕರ್ನಾಟಕವಾಗಿದೆ. ಮಹಾರಾಷ್ಟ್ರದ ಪೊಲೀಸರು ಇಲ್ಲಿ ಬಂದು ಡ್ರಗ್ಸ್ ದಂಧೆಯನ್ನು ಭೇದಿಸುತ್ತಿದ್ದಾರೆ ಅಂದರೆ ಕರ್ನಾಟಕದ ಪೊಲೀಸರು ಈ ತನಕ ಎಲ್ಲಿ ಹೋಗಿದ್ದರು ಎಂದು ಮಹೇಶ್ ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮಾಧ್ಯಮ ವಕ್ತಾರ ಮಹೇಶ್‌ರಾಜ್ ಅರಸ್ ಉಪಸ್ಥಿತರಿದ್ದರು.

ಎನ್‌ಜೆ ಆಸ್ಪತ್ರೆಯಲ್ಲಿ ಅಪರೂಪದ ಶಸ್ತ್ರಚಿಕಿತ್ಸೆ

ಮೈಸೂರು, ಡಿ.29(ಜಿಎ) –ಸಿಸ್ಟಿಕ್ ಫೈಬ್ರೋಸಿಸ್ ಸಂಬಂಧಿತ ದೀರ್ಘಕಾಲದ ಕ್ಯಾಲ್ಸಿಫಿಕ್ ಪ್ಯಾಂಕ್ರಿಯಾಟೈಟಿಸ್ ಸಮಸ್ಯೆಯಿಂದ ಬಳಲುತ್ತಿದ್ದ 14 ವರ್ಷದ ಬಾಲಕನಿಗೆ ಎನ್‌ಜೆ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ನಡೆಸುವ ಮೂಲಕ ಆತನಿಗೆ ಹೊಸ ಜೀವನ ನೀಡಲಾಗಿದೆ ಎಂದು ಹಿರಿಯ ತಜ್ಞ ವೈದ್ಯರಾದ ಡಾ. ಸತೀಶ್ ದುರ್ಗೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಶಸ್ತ್ರ ಚಿಕಿತ್ಸೆಯಲ್ಲಿ ಡಾ.ಸುದೀಶ್ ದುರ್ಗೇಶ್ ಸಹ ಭಾಗಿಯಾಗಿದ್ದರು. ಸಂಕೀರ್ಣವಾದ ಮೇದೋಜ್ಜೀರಕ ಗ್ರಂಥಿಯ ಸಮಸ್ಯೆಯುಂಟಾಗಿತ್ತು. ಇದಕ್ಕಾಗಿ 4ಕೆ ಸಕ್ರಿಯ ಗೊಂಡ 3ಡಿ ಲ್ಯಾಪ್ರೊಸ್ಕೋಪಿಕ್ ನೂತನ ವಿಧಾನ ಅನುಸರಿಸಿಕೊಂಡು ಶಸ್ತ್ರ ಚಿಕಿತ್ಸೆಯನ್ನು ಕೈಗೆಟಕುವ ದರದಲ್ಲಿ ನಡೆಸಿದ್ದು, ಈಗ ಬಾಲಕ ಚೇತರಿಸಿಕೊಂಡಿದ್ದಾನೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಸುದೀಶ್ ದುರ್ಗೇಶ್ ಉಪಸ್ಥಿತರಿದ್ದರು.

ನಾಲ್ಕು ತಿಂಗಳಿಂದ ಸಂಬಳ ನೀಡದ್ದನ್ನು ಖಂಡಿಸಿ ಪಿಕೆಟಿಬಿ ಆಸ್ಪತ್ರೆ ಸಿಬ್ಬಂದಿ ಪ್ರತಿಭಟನೆ


ಪಿಕೆಟಿಬಿ ಆಸ್ಪತ್ರೆಯ ಗುತ್ತಿಗೆ ಸಿಬ್ಬಂದಿ ದಿಢೀರ್ ಪ್ರತಿಭಟನೆ ನಡೆಸಿದರು.

ಮೈಸೂರು, ಡಿ.29(ಎಂಕೆ)– ಕಳೆದ ನಾಲ್ಕು ತಿಂಗಳಿಂದ ಸಂಬಳ ನೀಡಿಲ್ಲವೆಂದು ಆರೋಪಿಸಿ ಪಿಕೆಟಿಬಿ ಆಸ್ಪತ್ರೆಯ ಗುತ್ತಿಗೆ ಸಿಬ್ಬಂದಿ ಸೋಮವಾರ ದಿಢೀರ್ ಪ್ರತಿಭಟನೆ ನಡೆಸಿದರು.


ಆಸ್ಪತ್ರೆಯ ಎದುರು ಜಮಾಯಿಸಿದ ಸೆಕ್ಯೂರಿಟಿ ಹಾಗೂ ಸ್ವಚ್ಛತಾ ಸಿಬ್ಬಂದಿ, ಸಂಬಳ ಕೇಳಿದರೆ ಕೆಲಸದಿಂದ ತೆಗೆಯುವುದಾಗಿ ಬೆದರಿಸುತ್ತಾರೆ ಎಂದು ಅಳಲು ತೋಡಿಕೊಂಡರು. ಎರಡು ಖಾಸಗಿ ಸಂಸ್ಥೆಗಳ ಮೂಲಕ 73 ಮಂದಿ ಕೆಲಸ ಮಾಡುತ್ತಿದ್ದು, ಸಂಬಳ ಪಾವತಿಸದೇ ಸತಾಯಿಸುತ್ತಿದ್ದಾರೆ. ಕೊಡುತ್ತಿರುವುದೇ ಕಡಿಮೆ ಸಂಬಳ. ಅದನ್ನೂ ಸರಿಯಾಗಿ ನೀಡುತ್ತಿಲ್ಲ. ಸಂಬಳ ಇಲ್ಲದೆ ಜೀವನ ನಡೆಸುವುದೇ ಕಷ್ಟವಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಬಿಲ್ ಬಾಕಿ ಉಳಿಸಿಕೊಂಡಿಲ್ಲ: ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವವರ ಸಂಬಳದ ಬಿಲ್‌ಗಳನ್ನು ಗುತ್ತಿಗೆ ಸಂಸ್ಥೆಗಳಿಗೆ ನೀಡಲಾಗಿದೆ. ಯಾವುದೇ ಬಿಲ್‌ಗಳನ್ನು ಬಾಕಿ ಉಳಿಸಿಕೊಂಡಿಲ್ಲ. ಅದಾಗ್ಯೂ ಸಂಬಳ ನೀಡದಿರುವ ಬಗ್ಗೆ ಗುತ್ತಿಗೆದಾರರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಪಿಕೆಟಿಬಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪ್ರಶಾಂತ್ ತಿಳಿಸಿದರು.

ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ವಿರುದ್ಧ ನಾನಾ ಆರೋಪ

ಮೈಸೂರು, ಡಿ.29(ಜಿಎ)–ಕಲ್ಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಕೂಡ್ಲಾದಲ್ಲಿರುವ ಉರಿಲಿಂಗ ಪೆದ್ದಿ ಸಂಸ್ಥಾನದ ಮೈಸೂರಿನ ಗಾಂಧಿನಗರದಲ್ಲಿರುವ ಶಾಖಾ ಮಠದಲ್ಲಿ ಜ್ಞಾನಪ್ರಕಾಶ್ ಅವರು ಸ್ವಯಂ ಘೋಷಿತ ಸ್ವಾಮೀಜಿಯಾಗಿ, ಶಾಖಾ ಮಠದ ಉತ್ತರಾಧಿಕಾರಿ ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಹಿಂದೆ ಮಠ ಸ್ಥಾಪಿಸಿದ ಸ್ವಾಮೀಜಿಯವರು ಮಠಕ್ಕಾಗಿ ಖರೀದಿಸಿದ್ದ ವರುಣ ಹೋಬಳಿ ದುದ್ದಗೆರೆಯಲ್ಲಿನ ಜಮೀನನ್ನು ಇತರರೊಡನೆ ಸೇರಿ ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸಿದ್ದಾರೆ ಎಂದು ಕೂಡ್ಲಾದಲ್ಲಿನ ಮಠದ ಪೀಠಾಧಿಕಾರಿ ಶಿವಲಿಂಗಸ್ವಾಮೀಜಿ ಗಂಭೀರ ಆರೋಪ ಮಾಡಿದರು.

> “ಕಲ್ಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಕೂಡ್ಲಾದಲ್ಲಿರುವ ಉರಿಲಿಂಗ ಪೆದ್ದಿ ಸಂಸ್ಥಾನ ಮಠ ಹಾಗೂ ಮೈಸೂರಿನ ಗಾಂಧಿನಗರದಲ್ಲಿರುವ ಶಾಖಾ ಮಠಕ್ಕೆ ಪೀಠಾಧ್ಯಕ್ಷರನ್ನಾಗಿ ಹಿರಿಯರು ನನ್ನನ್ನು ಆಯ್ಕೆ ಮಾಡಿದ್ದಾರೆ. ದುದ್ದಗೆರೆ (ಲಕ್ಷ್ಮೀಪುರ) ಯಲ್ಲಿರುವ ಜಮೀನು ಹಿರಿಯ ಸ್ವಾಮೀಜಿಗಳ ರಕ್ತ ಸಂಬಂಧಿಗಳಿಗೆ ಸೇರಿದೆ. ನನ್ನ ಮೇಲೆ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದದ್ದು.
>
> –ಜ್ಞಾನಪ್ರಕಾಶ ಸ್ವಾಮೀಜಿ, ಪೀಠಾಧ್ಯಕ್ಷರು, ಉರಿಲಿಂಗಿ ಪೆದ್ದಿಮಠ.




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2005ರಲ್ಲಿ ಸೇಡಂ ನ್ಯಾಯಾಲಯವೇ ಜ್ಞಾನ ಪ್ರಕಾಶ್ ಸ್ವಾಮೀಜಿಗೂ, ಮಠಕ್ಕೂ ಯಾವುದೇ ಸಂಬಂಧವಿಲ್ಲವೆಂದು ಆದೇಶ ನೀಡಿದೆ. ಆದರೂ ಇದನ್ನು ಧಿಕ್ಕರಿಸಿ ಇವರು ಗಾಂಧೀನಗರದ ಶಾಖಾ ಮಠದ ಪೀಠಾಧಿಪತಿ ಎಂದು ಹೇಳಿಕೊಳ್ಳುತ್ತ, ತಾನು ಅಂಬೇಡ್ಕರ್‌ವಾದಿ ಎಂದು ಬಿಂಬಿಸಿಕೊಳ್ಳುತ್ತ, ಪ್ರಭಾವೀ ರಾಜಕಾರಣಿಗಳ ಜೊತೆಗೆ ವೇದಿಕೆ ಹಂಚಿಕೊಳ್ಳುತ್ತ ಜನರನ್ನು ಮರಳು ಮಾಡುತ್ತಿದ್ದಾರೆಂದು ದೂರಿದರು.

ಈ ಮಠಕ್ಕೆ ಸಂಬಂಧಪಟ್ಟಂತೆ ದುದ್ದಗೆರೆ (ಲಕ್ಷ್ಮೀಪುರ)ಯ ಸರ್ವೆ ನಂ.35, 36, 37, 38, 41, 42, 111/1, 112, 90, 147, 108, 1430 ಜಮೀನುಗಳ ಬಗ್ಗೆ ಜನರಿಗೆ ತಪ್ಪು ಮಾಹಿತಿ ನೀಡಿ, ಇತರೆ ಅಕ್ರಮ ಖಾತೆದಾರರೊಡನೆ ಸೇರಿಕೊಂಡು ಇಬ್ಬರಿಗೆ ಮಾರಾಟ ಮಾಡಲು ನಿರ್ಧರಿಸಿ ಈಗಾಗಲೇ ಮುಂಗಡ ಹಣ ಪಡೆದು ಎಲ್ಲರೂ ಹಂಚಿಕೊಂಡಿದ್ದಾರೆ. ಇದರೊಡನೆ ಕೂಡ್ಲಾದಲ್ಲಿನ ಶಿವಯೋಗಿ ಸ್ವಾಮಿ ಸ್ಮಾರಕ ವಿದ್ಯಾವರ್ಧಕ ಸಂಸ್ಥೆಗೂ ಅಧ್ಯಕ್ಷನೆಂದು ಹೇಳಿಕೊಂಡು ಸಹಿ ಮಾಡಿ ಹಣ ಪಡೆದು ಅಕ್ರಮ ಎಸಗಿದ್ದಾರೆ.

ಉರಿಲಿಂಗ ಪೆದ್ದಿ ಮಠದ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾದ ಹಣವನ್ನು ಇವರೇ ಪಡೆದಿದ್ದಾರೆ. ಹೀಗಾಗಿ ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಇತರೆ ಸಂಬಂಧಿತರು ಸೂಕ್ತ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ದಸಂಸ ಮುಖಂಡರು ಹಾಗೂ ದುದ್ದಗೆರೆ ಗ್ರಾಮದ ಸಾಗುವಳಿದಾರರಾದ ಯಡದೊರೆ ಮಹದೇವಯ್ಯ, ಪುಟ್ಟಸ್ವಾಮಿ, ಶಿವಮೂರ್ತಿ, ಗುರುಸ್ವಾಮಿ, ಮಹಾದೇವ್ ಮತ್ತಿತರರು ಉಪಸ್ಥಿತರಿದ್ದರು.

ಕುವೆಂಪು ಜನ್ಮ ದಿನಾಚರಣೆ


ಕುವೆಂಪುನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕುವೆಂಪು ಜನ್ಮ ದಿನ ಆಚರಿಸಲಾಯಿತು. ಈ ವೇಳೆ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ಡಾ.ಎಲ್.ದೇವೆಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಮೇಯರ್ ಶಿವಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಜೆ.ಎಸ್.ಜಗದೀಶ್, ಉದ್ಯಮಿಗಳಾದ ಏಕನಾಥ್ ರೈ ಕೆ.ಎನ್.ಸಂತೋಷ್, ಎಂ.ಮೋಹನ್, ಮಾಜಿ ಸೆನೆಟ್ ಸದಸ್ಯರಾದ ಜಗದೀಶ್, ಎಂ.ರಾಜೀವ್, ಕಿರಣ್ ಕುಮಾರ್, ರಮೇಶ್, ರಾಮಪ್ಪ ಎಸ್.ಎನ್.ರಮೇಶ್, ರಘುರಾಂಗೌಡ, ವಿಠ್ಠಲ್, ರಾಮು, ನಿಂಗಪ್ಪ, ಜಗದೀಶ್, ಎಂ.ಬಿ.ಮಂಜೇಗೌಡ, ವಕೀಲರಾದ ಕೆ.ಎಸ್. ನಾಗರಾಜು, ಸಂಸ್ಥೆಯ ಖಜಾಂಚಿ ಟಿ.ಕೃಷ್ಣಕುಮಾರ್, ಕಾರ್ಯದರ್ಶಿ ಚರಣ್ ಶಿವರಾಜ್, ಬಸವರಾಜು, ಎಂ.ರಮೇಶ್ ಮತ್ತಿತರರಿದ್ದರು.

ಕೊಪ್ಪಳದ ಬಸಾಪುರ ಕೆರೆ ಒತ್ತುವರಿ ತೆರವಿಗೆ ಆಗ್ರಹ


ಮೈಸೂರು, ಡಿ.29(ಜಿಎ)–ಕೊಪ್ಪಳದ ಬಸಾಪುರ ಸಾರ್ವಜನಿಕ ಕೆರೆಯನ್ನು ಬಿಎಸ್‌ಪಿಎಲ್ ಕಾರ್ಖಾನೆಯು ಒತ್ತುವರಿ ಮಾಡಿಕೊಂಡು ಅಲ್ಲಿನ ಜನ ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆ ಉಂಟಾಗಿದೆ. ಹೀಗಾಗಿ ಕೂಡಲೆ ಸಿಎಂ ಸಿದ್ದರಾಮಯ್ಯ ಅವರು ಈ ಒತ್ತುವರಿ ತೆರವಿಗೆ ಕ್ರಮ ವಹಿಸಬೇಕೆಂದು ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಒತ್ತುವರಿಯಿಂದಾಗಿ ಕೊಪ್ಪಳ ಮತ್ತು ಭಾಗ್ಯನಗರದ 20 ಹಳ್ಳಿಗಳ ಸುಮಾರು ಒಂದೂವರೆ ಲಕ್ಷ ಜನರಿಗೆ ಕಾರ್ಖಾನೆಯ ಹೊಗೆ ಧೂಳಿನಿಂದಾಗಿ ಆರೋಗ್ಯದ ಸಮಸ್ಯೆ ಉಂಟಾಗಿದೆ. ಉಸಿರಾಟದ ಸಮಸ್ಯೆ, ಹೃದಯ ಸಂಬಂಧಿ ಕಾಯಿಲೆ, ಚರ್ಮದ ಅಲರ್ಜಿ, ಕಣ್ಣು ಉರಿ, ಹಾಗೂ ಕ್ಯಾನ್ಸರ್‌ನಂತಹ ಕಾಯಿಲೆಯ ಭೀತಿಯಿಂದ ಬಳಲುತ್ತಿದ್ದಾರೆ. ಜಾನುವಾರುಗಳು ಧೂಳಿನ ಮೇವು ತಿಂದು, ಕಲುಷಿತ ನೀರು ಕುಡಿದು ಗರ್ಭಿಣಿಯರು ಅತಿಸಾರದಿಂದ ಸಾಯುತ್ತಿರುವುದು ಮನಕಲಕುವಂತದ್ದಾಗಿದೆ ಎಂದರು.

ಬಸಾಪುರದ ಸರ್ವೆ ನಂ.143ರ 44.35 ಎಕರೆಯ ಈ ಸಾರ್ವ ಜನಿಕ ಕೆರೆಯನ್ನು ಈ ಕಂಪನಿಯವರು ಕಬಳಿಸಿ ಕಾಂಪೌಂಡ್ ಕಟ್ಟಿಕೊಂಡು ರಸ್ತೆ ಬಂದು ಮಾಡಿದ ಕಾರಣ ಜನರಿಗೆ ಜಾನುವಾರುಗಳಿಗೆ ತಿರುಗಾಡಲು ಮತ್ತು ಕೆರೆಯ ನೀರನ್ನು ಕುಡಿಯಲು ಅನುವಾಗುವಂತೆ ರಸ್ತೆಯನ್ನು ಮುಕ್ತವಾಗಬೇಕೆಂದು ಅಲ್ಲಿನ ಜನರು ಒತ್ತಾಯಿಸಿದ್ದಾರೆ ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮೈಸೂರಿನಲ್ಲಿಯೂ ಇದೇ ರೀತಿಯ ಸಮಸ್ಯೆಯುಂಟಾಗಿವೆ. ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಹಾಗೂ ಅದಕ್ಕೆ ಹೊಂದಿಕೊಂಡ ಪ್ರದೇಶಗಳಲ್ಲಿ ಯಾರ‍್ಯಾರೋ ಸರ್ಕಾರಿ ಭೂಮಿ ಆಕ್ರಮಿಸಿಕೊಂಡಿದ್ದಾರೆ. ಇದರಿಂದಾಗಿ ಪ್ರವಾಸೀ ಹಾಗೂ ಧಾರ್ಮಿಕ ಸ್ಥಳವಾದ ಚಾಮುಂಡಿಬೆಟ್ಟಕ್ಕೆ ಕುತ್ತು ಒದಗಿದೆ. ರಾಜ್ಯದೆಲ್ಲೆಡೆ ಅರಣ್ಯ ಸಹಾ ಒತ್ತುವರಿಯಾಗಿ ಕಾಡು ಪ್ರಾಣಿಗಳು ನಾಡಿಗೆ ಬರುವಂತಾಗಿದೆ. ಹೀಗಾಗಿ ಸರ್ಕಾರ ಇವುಗಳ ಬಗ್ಗೆ ಕೂಡಲೇ ಗಮನಹರಿಸಬೇಕೆಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ವಿಷಕಂಠ, ಸಿದ್ದಸ್ವಾಮಿ, ಸಿ.ಶಿವಣ್ಣ ಮತ್ತಿತರರಿದ್ದರು.

ಕ್ಯಾಲೆಂಡರ್ ಬಿಡುಗಡೆ


ಕರ್ನಾಟಕ ಪ್ರಜಾಪಾರ್ಟಿ (ರೈತ ಪರ್ವ) ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಾಹಿತಿ ಹಾ.ತಿ.ಕೃಷ್ಣೇಗೌಡ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಈ ವೇಳೆ ಪಕ್ಷದ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ, ಅಂಬಳೆ ಎಂ.ಶಿವಾನಂದಸ್ವಾಮಿ, ಡಾ.ಹೆಚ್.ಎನ್.ಶಿವಕುಮಾರ್, ಎಸ್.ಬಿ.ನಾಗಬಸವಣ್ಣ, ಪಿ.ಕುಮಾರಸ್ವಾಮಿ, ಭಾಗ್ಯಮ್ಮ, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಭೀಮ ಜ್ಯೋತಿ ಸೌಹಾರ್ದ ಸಹಕಾರ ಸಂಘದ ಕ್ಯಾಲೆಂಡರ್ ಬಿಡುಗಡೆ


ಭೀಮ ಜ್ಯೋತಿ ಸೌಹಾರ್ದ ಸಹಕಾರಿ ಸಂಘದ 2026ರ ಕ್ಯಾಲೆಂಡರ್ ಬಿಡುಗಡೆ.

ಮೈಸೂರು, ಡಿ.29(ಜಿಎ)–ಮೈಸೂರಿನ ಭೀಮ ಜ್ಯೋತಿ ಸೌಹಾರ್ದ ಸಹಕಾರಿ ಸಂಘ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರನ್ನು ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಿಂತಕ ಪ್ರೊ.ಎಚ್. ಗೋವಿಂದಯ್ಯ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, 2025 ದಲಿತರ ಪಾಲಿಗೆ ಮಹತ್ವದ ವರ್ಷವಾಗಿದೆ. ಈ ವರ್ಷದಲ್ಲಿ ಒಳ ಮೀಸಲಾತಿ ಕುರಿತ ಪ್ರಮುಖ ನಿರ್ಧಾರ ಕೈಗೊಳ್ಳಲಾಯಿತು. ಆದರೆ ಇದೇ ವೇಳೆ ಸರ್ಕಾರ ನಾಗಮೋಹನ ದಾಸ್ ವರದಿಗಾಳಿಗೆ ತೂರಿ ಹಲವಾರು ಸಮುದಾಯಗಳ ಮೀಸಲಾತಿ ಕಿತ್ತುಕೊಂಡಿದೆ. ಒಳ ಮೀಸಲಾತಿ ಒಡಕಿನ ಪ್ರಶ್ನೆ ಆಗಬಾರದು, ಬದಲಾಗಿ ಒಗ್ಗಟ್ಟನ್ನು ಬಲಪಡಿಸಬೇಕೆಂದು ಕೋರಿದರು.

ಕಾರ್ಯಕ್ರಮದಲ್ಲಿ ಆರ್.ಲಕ್ಷ್ಮಣ್, ಕೆ.ಆರ್.ವಿನುತ, ಎನ್.ಶ್ರೀನಿವಾಸಲು, ಬಿ.ಎಂ.ಮಹದೇವಯ್ಯ, ತಿಪ್ಪಯ್ಯ, ಸಿ.ಪಿ. ರಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.12.2025 ಮಂಗಳವಾರ, ಮಳೆ ನಕ್ಷತ್ರ: ಮೂಲ, 29.12.2025 ರಿಂದ 10.01.2026
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕಾವ್ಯಾಧ್ಯಯನ ಪೀಠ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ:** ನವೋದಯ ಕಾವ್ಯದ ಓದಿನ ಹಬ್ಬ ಕುರಿತು ವಿಚಾರ ಸಂಕಿರಣ, ಬೆಳಗ್ಗೆ 10ರಿಂದ ಗೋಷ್ಠಿ–1, ಉಪಸ್ಥಿತರು: ಪ್ರೊ.ಕೇಶವ ಶರ್ಮಾ, ಶಿವಮೊಗ್ಗ; ಪ್ರೊ.ಶಿವರಾಂ ಶೆಟ್ಟಿ, ಮಂಗಳೂರು; ಪ್ರೊ.ಕೆ.ಸಿ.ಶಿವಾರೆಡ್ಡಿ, ಬೆಂಗಳೂರು; ಪ್ರೊ.ಹೆಚ್.ಬಿ.ಬೆಟ್ಟಸ್ವಾಮಿ, ಮ.12ರಿಂದ ಗೋಷ್ಠಿ–2, ಡಾ.ಬಿ.ವಿ.ವಸಂತಕುಮಾರ್, ಪ್ರೊ.ಎಂ. ನಂಜುಂಡಯ್ಯ, ಪ್ರೊ.ಎಸ್.ಡಿ.ಶಶಿಕಲಾ, ಪ್ರೊ.ಕಾಳೇಗೌಡ ನಾಗವಾರ; ಮಧ್ಯಾಹ್ನ 3.30ರಿಂದ ಗೋಷ್ಠಿ–3, ಕೃಪಾಕರ ಸೇನಾನಿ, ಡಾ.ಚಂದ್ರಶೇಖರ್ ಬೆಟ್ಟಹಳ್ಳಿ, ಡಾ.ಸಿ.ಶಿವಕುಮಾರ ಕಾರೇಪುರ; ಸಂಜೆ 4.30ರಿಂದ ಸಮಾರೋಪ ಸಮಾರಂಭ, ಸಮಾರೋಪ ನುಡಿ: ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ, ಅಧ್ಯಕ್ಷತೆ : ಪ್ರೊ.ಎನ್.ಕೆ.ಲೋಲಾಕ್ಷಿ, ಮುಖ್ಯ ಅತಿಥಿಗಳು : ಪ್ರೊ.ಬಿ.ಎನ್. ಶ್ರೀರಾಮ್, ಪ್ರೊ.ಕೆ.ಸಿ. ಶಿವಾರೆಡ್ಡಿ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ.
- **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ನೂತನ ವರ್ಷದ ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆ ಸಮಾರಂಭ, ಕ್ಯಾಲೆಂಡರ್ ಬಿಡುಗಡೆ : ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಡೈರಿ ಬಿಡುಗಡೆ : ಸಿದ್ಧಾರ್ಥ ಗ್ರೂಪ್ಸ್ ಮುಖ್ಯಸ್ಥರಾದ ಪಿ.ವಿ. ಗಿರಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ದೀಪಕ್, ಮುಖ್ಯ ಅತಿಥಿಗಳು : ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯುಕೇಶ್‌ಕುಮಾರ್, ಮುಡಾ ಆಯುಕ್ತ ಕೆ.ಆರ್. ರಕ್ಷಿತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ವಿನೋದ್ ಚಂದ್ರ, ಸಹಾಯಕ ನಿರ್ದೇಶಕರಾದ ಶ್ರೀಮತಿ ಹೆಚ್.ಎಸ್. ನಿರ್ಮಲ, ಸ್ಥಳ: ಪತ್ರಕರ್ತರ ಸಂಘದ ಆವರಣ, ಬೆಳಗ್ಗೆ 10ಕ್ಕೆ.
- **ರಂಗಾಂತರಂಗ ಮೈಸೂರು ಮಕ್ಕಳ ರಂಗಭೂಮಿ :** ರಂಗಾಂತರಂಗ ನಡಿಗೆ ಹಳ್ಳಿ ಮಕ್ಕಳ ಕಡೆಗೆ ರಂಗ ತರಬೇತಿ ಶಿಬಿರ, ಉಪಸ್ಥಿತರು : ಡಾ. ಎಸ್. ತುಕಾರಾಮ್, ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗೇಗೌಡ, ಡಾ. ಎಂ.ಡಿ. ಸುದರ್ಶನ್, ರಾಘವೇಂದ್ರ, ಹೆಚ್.ವಿ. ಹೇಮಕುಮಾರ, ಸ್ಥಳ: ಮೊರಾರ್ಜಿ ದೇಸಾಯಿ ವಸತಿ ಶಾಲೆ, ದೊಡ್ಡಹುಂಡಿ, ಬೆಳಗ್ಗೆ 10.30ಕ್ಕೆ.
- **ಕರುಣಾಮಯಿ ವಿಷ್ಣುವರ್ಧನ್ ಅಭಿಮಾನಿ ಬಳಗ :** ಡಾ. ವಿಷ್ಣುವರ್ಧನ್‌ರವರ 16ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಪೌರಕಾರ್ಮಿಕರಿಗೆ ಮಾಸ್ಕ್, ಟೋಪಿ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಬಳಗದ ಅಧ್ಯಕ್ಷ ಎಂ.ಡಿ. ಪಾರ್ಥಸಾರಥಿ, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಜಗನ್ಮೋಹನ ಅರಮನೆ ಮುಂಭಾಗ, ಬೆಳಗ್ಗೆ 11ಕ್ಕೆ.
- **ಸಮರ್ಥನಂ ಅಂಗವಿಕಲರ ಸಂಸ್ಥೆ :** ಅಂಗವಿಕಲರಿಗಾಗಿ ವಿಶೇಷ ಕಲಾ ಕಾರ್ಯಾಗಾರ, ಮುಖ್ಯ ಅತಿಥಿಗಳು : ಹಿರಿಯ ಪ್ರಾಧ್ಯಾಪಕ ಪ್ರೊ. ಆರ್. ಶಿವಪ್ಪ, ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟದ ಅಧ್ಯಕ್ಷ ಶ್ರೀಧರ್ ದೀಕ್ಷಿತ್. ಎನ್., ಪ್ರಿನ್ಸಿಪಾಲ್ ಅನುಷಾ ಮಂಜುನಾಥ್, ಸಮರ್ಥನಂ ಸಂಸ್ಥೆ ಮುಖ್ಯಸ್ಥ ಶಿವರಾಜು, ಸ್ಥಳ: EMRC ಸಭಾಂಗಣ, ಮಾನಸ ಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆ :** ವಿದ್ಯಾರ್ಥಿ ಸಂಘದ ಸಮಾರೋಪ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕ ಎಂ. ಶಿವಮಾದಪ್ಪ, ಸಮಾರೋಪ ಭಾಷಣ : ಬಿಇಓ ಕೃಷ್ಣ, ಮುಖ್ಯ ಅತಿಥಿಗಳು : ಬಿ.ಎಸ್. ಯೋಗೇಂದ್ರ, ಆರಕ್ಷಕ ಉಪ ನಿರೀಕ್ಷಕ ಕಾಳೇಗೌಡ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.
- **ಶ್ರೀ ನಟರಾಜ ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆ :** ವಾರ್ಷಿಕೋತ್ಸವ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ, ಸಮಾರೋಪ ಭಾಷಣ : ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಪ್ರೌಢಶಾಲೆ ಮುಖ್ಯೋಪಾಧ್ಯಾಯಿನಿ ಹೆಚ್.ಜಿ. ಮಮತಾ, ಸ್ಥಳ: ಶ್ರೀ ನಟರಾಜ ಸಭಾಂಗಣ, ಸಂಜೆ 4ಕ್ಕೆ.
- **ಸಾಧನ ಮಂದಿರ, ಮೈಸೂರು:** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ವಾಗ್ಭಾರತಿ ವಿದ್ಯಾಸಂಸ್ಥೆ :** ಶಾಲಾ ವಾರ್ಷಿಕೋತ್ಸವ, ಉಪಸ್ಥಿತರು : ವಿಜ್ಞಾನ ಸಂವಹನಕಾರ ಎ.ಎಸ್. ಅಭಿಷೇಕ್, ಸಹಾಯಕ ಪೊಲೀಸ್ ಆಯುಕ್ತ ಎಂ. ಶಿವಶಂಕರ್, ಖೋ ಖೋ ಆಟಗಾರ್ತಿ ಬಿ. ಚೈತ್ರ, ಸ್ಥಳ: ವಿದ್ಯಾಸಂಸ್ಥೆ ಆವರಣ, ಹೊಸಹುಂಡಿ, ಸಂಜೆ 5.30ಕ್ಕೆ.
- **ಶ್ರೀ ವಿಘ್ನೇಶ್ವರ ಪ್ರಸನ್ನ ಭಕ್ತ ಮಂಡಳಿ ಮಾರ್ಪಾಡಿತ ಟ್ರಸ್ಟ್ :** ವೈಕುಂಠ ಏಕಾದಶಿ, ಸ್ಥಳ: ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ, ರಾಜಪಥ ರಸ್ತೆ, ಉದಯಗಿರಿ ಬಡಾವಣೆ, ಬೆಳಗ್ಗೆ 6 ರಿಂದ.
- **ಕರ್ನಾಟಕ ಸೇನಾ ಪಡೆ:** ಕನ್ನಡ ರಾಜ್ಯೋತ್ಸವ–ವಿಶ್ವಮಾನವ ಕುವೆಂಪು ಜಯಂತಿ, ಸಾನ್ನಿಧ್ಯ: ಪ್ರೊ.ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಸಂಸದ ಯದುವೀರ್ ಒಡೆಯರ್, ಅಧ್ಯಕ್ಷತೆ: ಶಾಸಕ ಸಿ.ಎನ್. ಮಂಜೇಗೌಡ, ಉಪಸ್ಥಿತರು: ಶಾಸಕರಾದ ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಡಾ.ಡಿ.ತಿಮ್ಮಯ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ವಿವೇಕಾನಂದ ವೃತ್ತ, ವಿವೇಕಾನಂದನಗರ, ಸಂಜೆ 6ಕ್ಕೆ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ.ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಮೊರಬದ ಮಲ್ಲಿಕಾರ್ಜುನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಅಮೃತ ನಿತಿನ್ ಶಾಸ್ತ್ರೀ ಹಾಗೂ ಎಂ. ಎಸ್. ಲಕ್ಷ್ಮೀಶ, ವ್ಯಾಖ್ಯಾನ: ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್. ಓ.ಯು. ಮುಕ್ತವಾಣಿ, ಪ್ರಾಯೋಜಕರು–ಪ್ರಸಾರಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಕೇಂದ್ರಗಳ ಡೀನ್ ಡಾ. ಎನ್.ಆರ್. ಚಂದೇಗೌಡ, ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್.ಕೇಶವಮೂರ್ತಿ, 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು– ಮಾಲಿಕೆಯಲ್ಲಿ ಭಾಗವಹಿಸುತ್ತಾರೆ, ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕರು ಹಾಗೂ ಸೋವಿಯತ್ ಲ್ಯಾಂಡ್ ನೆಹರು ಅಂತಾರಾಷ್ಟ್ರೀಯ ಪುರಸ್ಕಾರ ಪಡೆದ ಅನುವಾದಕರಾದ ಪ್ರೊ. ಹೆಚ್.ಎಸ್. ಹರಿಶಂಕರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ, 9.05 ಕ್ಯಾನ್ಸರ್ ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ. ಎನ್. ರಮಣಿ –ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ:ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ ಮಹಿಳಾ ಸಬಲೀಕರಣ ಕುರಿತು ಮೈಸೂರಿನ ಟಿ.ಕೆ. ಲೇಔಟ್‌ನ ಪುರಂದರ ಭಜನಾ ಮಂಡಳಿಯವರಿಂದ ಕಾರ್ಯಕ್ರಮ ವೈವಿಧ್ಯ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಮುಕ್ತಾ ಮುರಳಿ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪಿ.ಸುರುಭಿ – ಹಾಡುಗಾರಿಕೆ, 4.00 ಕಥಾಕಾಲಕ್ಷೇಪ– ಶಿವಲೀಲೆ ಸುಗುಣಮಣಿ, ಪ್ರಸ್ತುತಿ: ವಿ.ಆರ್. ಗುರುರಾಜಲು ನಾಯ್ಡು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಬೆರಳು ಗಾತ್ರದ ಮೀನುಮರಿ ಬೆಳವಣಿಗೆ ಅನುಸರಿಸಬೇಕಾದ ಕ್ರಮಗಳು ಈ ಕುರಿತು ನುಗು ಮೀನುಮರಿ ಉತ್ಪಾದನಾ ಕೇಂದ್ರದ ಉಪನಿರ್ದೇಶಕರಾದ ಮಹದೇವ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್, ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ:ಬಿ. ದಿಗ್ವಿಜಯ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ನಾಸಿರ್ ಅಹ್ಮದ್–ಮ್ಯಾಂಡೊಲಿನ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ರಂಜನಿ ಹೆಬ್ಬಾರ್– ಹಾಡುಗಾರಿಕೆ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ–2025, ಎಂ.ಡಿ. ಅಮಾನ್ ಖಾನ್ – ಹಾಡುಗಾರಿಕೆ

ಬೆಂಗಳೂರಿನ ಕೋಗಿಲು ಬಡಾವಣೆಯಲ್ಲಿನ ಮನೆಗಳ ತೆರವು ವಿವಾದ

ಚುನಾವಣೆ ಸೋಲಿನ ಭಯದಿಂದ ಪಿಣರಾಯ್ ರಾಜಕೀಯ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ

ಬೆಂಗಳೂರು, ಡಿ.29– ಮುಂಬರುವ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಕೇರಳ ಸಿಎಂ ಪಿಣರಾಯ್ ವಿಜಯನ್ ಅವರು ಕೋಗಿಲು ಬಡಾವಣೆಯಲ್ಲಿನ ಅಕ್ರಮ ಒತ್ತುವರಿ ತೆರವು ವಿಚಾರದಲ್ಲಿ ಕುತಂತ್ರ ರಾಜಕೀಯ ಮಾಡುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಾಗ್ದಾಳಿ ನಡೆಸಿದ್ದಾರೆ.

ಬೆಂಗಳೂರಿನ ಯಲಹಂಕದ ಕೋಗಿಲು ಬಳಿ ಘನ ತ್ಯಾಜ್ಯ ವಿಲೇವಾರಿ ಘಟಕದ ಸರ್ಕಾರಿ ಜಾಗದಲ್ಲಿ ಅನಧಿಕೃತ ನಿರ್ಮಾಣಗಳ ತೆರವು ಜಾಗವನ್ನು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸೋಮವಾರ ಪರಿಶೀಲಿಸಿದ ನಂತರ ಮಾಧ್ಯಮಗಳ ಜತೆ ಮಾತನಾಡಿದರು.

ಕೋಗಿಲು ಬಡಾವಣೆಯಲ್ಲಿರುವ ಕ್ವಾರಿ ಜಾಗವನ್ನು ಘನತ್ಯಾಜ್ಯ ವಿಲೇವಾರಿ ಮಾಡಲು ಸರ್ಕಾರ ಒಂಬತ್ತು ವರ್ಷಗಳ ಹಿಂದೆಯೇ ನೀಡಿತ್ತು. ಕೆಲವರು ಈಗ ಬಂದು ಇಲ್ಲಿನ ಜಾಗ ಒತ್ತುವರಿ ಮಾಡಿ ಗುಡಿಸಲು, ಶೆಡ್ ಹಾಕಿದ್ದಾರೆ. ಇದು ಸರ್ಕಾರಿ ಜಾಗವಾಗಿರುವ ಕಾರಣ ಮತದಾರರ ಚೀಟಿ ನೀಡಿಲ್ಲ. ಇಲ್ಲಿನ ಅಕ್ಕಪಕ್ಕ ಪ್ರದೇಶದವರಿಗೆ ಮತದಾರರು ಚೀಟಿ ನೀಡಲಾಗಿದೆ ಎಂದರು.



ಇಲ್ಲಿ ಒತ್ತುವರಿ ತೆರವುಗೊಳಿಸುವ ಮುನ್ನ ಅಧಿಕಾರಿಗಳು ಇವರಿಗೆ ಮಾಹಿತಿ ನೀಡಿದ್ದಾರೆ. ಸ್ಥಳೀಯ ಶಾಸಕರು ಈ ವಿಚಾರವಾಗಿ ಚರ್ಚೆ ಮಾಡಿದ್ದಾರೆ. ಆದರೆ ಕೆಲವರು ನಮಗೆ ಇಲ್ಲೇ ಜಾಗ ನೀಡಿ ಎಂದು ಮನವಿ ಮಾಡಿದ್ದರು. ಆದರೆ ಇದು ತ್ಯಾಜ್ಯ ವಿಲೇವಾರಿ ಜಾಗ ಆಗಿರುವ ಕಾರಣ ವಾಸಕ್ಕೆ ಯೋಗ್ಯ ಪ್ರದೇಶವಲ್ಲ. ಅವರ ಆರೋಗ್ಯ ದೃಷ್ಟಿಯಿಂದ ಸರ್ಕಾರ ಈ ತೀರ್ಮಾನ ಕೈಗೊಂಡಿದೆ ಎಂದು ಹೇಳಿದರು.

ಕೆಲವರು ಈ ವಿಚಾರದಲ್ಲಿ ರಾಜಕೀಯ ಬೆರೆಸುತ್ತಿದ್ದಾರೆ. ಕಮ್ಯುನಿಸ್ಟ್ ಪಕ್ಷದವರು ಚುನಾವಣೆ ಸೋಲಿನ ಭಯದಿಂದ ಅಲ್ಪಸಂಖ್ಯಾತರ ಸಿಂಪತಿ ಪಡೆಯಲು ಈ ರೀತಿ ಮಾಡುತ್ತಿದ್ದಾರೆ. ಕೇರಳ ಸಿಎಂ ಈ ವಿಚಾರವಾಗಿ ಸಂಪೂರ್ಣ ಮಾಹಿತಿ ಪಡೆಯಬೇಕು. ಇದು ನಮ್ಮ ರಾಜ್ಯದ ಸ್ಥಳೀಯ ವಿಚಾರ. ಇಲ್ಲಿ ವಾಸ ಮಾಡಿದರೆ ಆರೋಗ್ಯ ಸಮಸ್ಯೆ ಉದ್ಭವಿಸುತ್ತದೆ. ನಾನು ಇಲ್ಲಿಗೆ ಬಂದಾಗ ಅಲ್ಪಸಂಖ್ಯಾತ ಸಮುದಾಯದವರು ಜೈಕಾರ ಹಾಕುತ್ತಿದ್ದಾರೆ. ನಾವು ತಪ್ಪು ಮಾಡಿದ್ದರೆ ಅವರು ಧಿಕ್ಕಾರ ಹಾಕುತ್ತಿದ್ದರು ಎಂದರು.

ಈ ತೆರವಿನಿಂದ ಸೂರು ಕಳೆದುಕೊಂಡ ಬಡವರಿಗೆ ಹಾಗೂ ಅರ್ಹರ ಬಗ್ಗೆ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಕೆಲವರು ಇವರಿಂದ ಒಂದು ಲಕ್ಷ, ಒಂದೂವರೇ ಲಕ್ಷ ಹಣ ಪಡೆದು ಅಕ್ರಮವಾಗಿ ಗುಡಿಸಲು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಬೇರೆ ರಾಜ್ಯಗಳ ರೀತಿ ಏಕಾಏಕಿ ಸ್ಲಂ ಸೃಷ್ಟಿಸಲು ಬಿಡುವುದಿಲ್ಲ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಈ ರೀತಿ ಒತ್ತುವರಿ ತೆರವು ಕಾರ್ಯವನ್ನು ನಿರಂತರವಾಗಿ ಮಾಡಲಾಗುತ್ತಿರುತ್ತದೆ. ಸರ್ಕಾರಿ ಜಾಗ ಕಾಪಾಡಿಕೊಳ್ಳಲು ಇದು ಸಹಜ ಪ್ರಕ್ರಿಯೆಯಾಗಿದೆ. ಈ ಕಸ ವಿಲೇವಾರಿ ಜಾಗದಲ್ಲಿ ಕಾಂಪೌಂಡ್ ಹಾಕುವ ಕಾರ್ಯ ಎರಡು ವರ್ಷದಿಂದ ನಡೆಯುತ್ತಿದೆ. ಇಲ್ಲಿ ಯಾರಿಗಾದರೂ ಅನ್ಯಾಯ ಆಗಿದ್ದರೆ, ಸರ್ಕಾರಿ ಯೋಜನೆಯಲ್ಲಿ ಮನೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಈ ಜನರಿಂದ ಹಣ ಪಡೆದಿರುವವರು ಯಾರು ಎಂದು ಕೇಳಿದಾಗ, ಸಾರ್ವಜನಿಕವಾಗಿ ಈ ಮಾಹಿತಿ ಹೇಳಲು ಆಗುವುದಿಲ್ಲ. ನಮ್ಮ ತನಿಖಾ ತಂಡ ಅದನ್ನು ಪರಿಶೀಲನೆ ಮಾಡಲಿದೆ. ಈ ಪ್ರದೇಶ ಹೇಗಿತ್ತು ಎಂಬುದರ ಬಗ್ಗೆ ಪ್ರತಿ ವರ್ಷದ ಗೂಗಲ್ ಮ್ಯಾಪ್ ಫೋಟೋಗಳು ನಮ್ಮ ಬಳಿ ಇವೆ. ಅವುಗಳನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಅರ್ಹರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಸರ್ಕಾರ ತೀರ್ಮಾನ

●ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ●ಬೈಯ್ಯಪ್ಪನ ಹಳ್ಳಿಯಲ್ಲಿ ತಾತ್ಕಾಲಿಕ ಪರ್ಯಾಯ ವ್ಯವಸ್ಥೆ

ಬೆಂಗಳೂರು, ಡಿ.29– ಕೋಗಿಲು ಬಡಾವಣೆಯಲ್ಲಿ ತೆರವುಗೊಳಿಸಲಾದ ಅಕ್ರಮ ಶೆಡ್‌ನಲ್ಲಿ ಯಾರ್‍ಯಾರು ಇದ್ದರು ಎಂಬುದರ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಪಾಲಿಕೆ ಆಯುಕ್ತರಿಗೆ ಮಾಹಿತಿ ಕೇಳಿದ್ದೇನೆ. ಇನ್ನೆರಡು ದಿನಗಳಲ್ಲಿ ಅದನ್ನೆಲ್ಲಾ ಪರಿಶೀಲಿಸಿ ಅರ್ಹ ವ್ಯಕ್ತಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.



ಇಂದು ಸಿಎಂ–ಡಿಸಿಎಂ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಿಎಂ, ಕೋಗಿಲು ಬಡಾವಣೆಯಲ್ಲಿ ಡಿ.20 ರಂದು ಅಕ್ರಮವಾಗಿ ನಿರ್ಮಿಸಿದ್ದ ಶೆಡ್ ತೆರವು ಪ್ರಕರಣದ ಕುರಿತು ಸಂಪೂರ್ಣ ವಿವರ ನೀಡಿದರು.

ಇನ್ನು ಮುಂದೆ ಅಕ್ರಮ ನಡೆದರೆ ಅಧಿಕಾರಿಗಳೇ ಹೊಣೆ: ಕೋಗಿಲು ಬಡಾವಣೆಯಲ್ಲಿ ಒಟ್ಟು 167 ಶೆಡ್‌ಗಳನ್ನು ತೆರವುಗೊಳಿಸಲಾಗಿದೆ. ಅವರೆಲ್ಲರಿಗೂ ನೋಟಿಸ್ ಕೊಟ್ಟು ಸರ್ಕಾರಿ ಜಾಗ ಇದು, ತೆರವು ಮಾಡಿ ಅಂದ ಮೇಲೂ ಖಾಲಿ ಮಾಡಿರಲಿಲ್ಲ ಕಸ ವಿಲೇವಾರಿಗೆ 15 ಎಕರೆ ಜಮೀನನ್ನು ಡಿಸಿಯವರು ಬಿಬಿಎಂಪಿಗೆ ಹಸ್ತಾಂತರ ಮಾಡಿರುವ ಜಾಗದಲ್ಲಿ 2020–21 ರಿಂದ ಈ ರೀತಿಯಾಗಿ ಅಕ್ರಮವಾಗಿ ಶೆಡ್ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇದು ತಹಶೀಲ್ದಾರ್ ಹಾಗೂ ಶಿರಸ್ಥೆದಾರರಿಗೆ ಗೊತ್ತಿಲ್ಲದಿರಲು ಸಾಧ್ಯವಿಲ್ಲ. ಹಾಗಾಗಿ ಇದನ್ನು ಗುರುತಿಸದ ಆ ಭಾಗದ ಪಾಲಿಕೆ ಹಾಗೂ ಕಂದಾಯ ಅಧಿಕಾರಿಗಳ ವಿರುದ್ಧವೂ ಕ್ರಮಕ್ಕೆ ನಿರ್ಧಾರ ಮಾಡಲಾಗಿದೆ. ಮುಂದೆ ಈ ರೀತಿ ಅಕ್ರಮ ಮನೆ ಕಟ್ಟಲು ಅವಕಾಶ ಮಾಡಿಕೊಡದಂತೆಯೂ ಕ್ರಮಕ್ಕೆ ಮುಂದಾಗಿದ್ದೇವೆ. ಒಂದು ವೇಳೆ ಈ ರೀತಿ ಅಕ್ರಮ ಕಂಡುಬಂದರೆ ಅದಕ್ಕೆ ಅಧಿಕಾರಿಗಳೇ ಹೊಣೆಯಾಗುತ್ತಾರೆ ಎಂದು ಎಚ್ಚರಿಸಿದರು.

ಅರ್ಹರಿಗೆ ಪರ್ಯಾಯ ವ್ಯವಸ್ಥೆ: ಅಕ್ರಮ ಶೆಡ್‌ನಲ್ಲಿ ಯಾರ್‍ಯಾರು ಇದ್ದರು ಎಂದು ಜಿಲ್ಲಾಧಿಕಾರಿ ಹಾಗೂ ಕಾರ್ಪೊರೇಷನ್ ಕಮಿಷನರ್‌ಗೆ ಕೇಳಿದ್ದೇನೆ. ಇನ್ನೆರಡು ದಿನಗಳಲ್ಲಿ ಅದನ್ನೆಲ್ಲಾ ಪರಿಶೀಲಿಸಿ ಅರ್ಹ ವ್ಯಕ್ತಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕು ಸರ್ಕಾರ ತೀರ್ಮಾನ ಮಾಡಿದೆ. ಡಿಸಿ ಹಾಗೂ ಕಾರ್ಪೊರೇಷನ್‌ನವರು ಲೀಸ್ಟ್ ಕೊಡುತ್ತಾರೆ. ಆ ಲಿಸ್ಟ್‌ನ ಆಧಾರದ ಮೇಲೆ ಪರ್ಯಾಯ ವ್ಯವಸ್ಥೆ ಮಾಡುತ್ತೇವೆ ಎಂದು ತಿಳಿಸಿದರು.

ಬೈಯ್ಯಪ್ಪನಹಳ್ಳಿಯಲ್ಲಿ ಪರ್ಯಾಯ ವ್ಯವಸ್ಥೆ: ಈ ವಿಚಾರವಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ನನ್ನ ಹಾಗೂ ಡಿಸಿಎಂ ಜೊತೆ ಚರ್ಚೆ ಮಾಡಿದ್ದಾರೆ. ಪರ್ಯಾಯ ವ್ಯವಸ್ಥೆ ಮಾಡುತ್ತೇವೆ ಎಂದು ಅವರಿಗೂ ಹೇಳಿದ್ದೇನೆ. ಆದರೆ, ಅದೇ ಜಾಗದಲ್ಲಿ ಆಗಲ್ಲ, ಏಕೆಂದರೆ ಅದು ಸರ್ಕಾರಿ ಜಾಗ. ಬೈಯ್ಯಪ್ಪನ ಹಳ್ಳಿಯಲ್ಲಿ 1,187 ಮನೆಗಳಿವೆ ಅಲ್ಲಿ ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಿಕೊಡುತ್ತೇವೆ. ಒಂದು ಮನೆಗೆ 11.20 ಲಕ್ಷ ರೂ. ಅಲಾಟ್ ಮಾಡಬೇಕು ಅಂದುಕೊಂಡಿದ್ದೇವೆ. ಜನರಲ್, ಪರಿಶಿಷ್ಟ ಜಾತಿ, ವರ್ಗದವರಿಗೆ ಬೇರೆ ಬೇರೆ ಸಹಾಯ ಧನಗಳಿವೆ ಎಂದು ವಿವರಿಸಿದರು.

ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ: ಗೃಹ ಸಚಿವ ಜಿ.ಪರಮೇಶ್ವರ್ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಪೋಸ್ಟರ್ ಬಿಡುಗಡೆ



ಡಾ ಜಿ.ಪರಮೇಶ್ವರ್ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ನಾಯಕರು ಪೋಸ್ಟರ್ ಬಿಡುಗಡೆ ಮಾಡಿದರು.

ಬೆಂಗಳೂರು, ಡಿ.29– ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ ಪ್ರಕರಣ ಬಹಿರಂಗಗೊಂಡ ಹಿನ್ನೆಲೆಯಲ್ಲಿ ಗೃಹ ಸಚಿವ ಡಾ ಜಿ.ಪರಮೇಶ್ವರ್ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ನಾಯಕರು ಪೋಸ್ಟರ್ ಬಿಡುಗಡೆ ಮಾಡಿದ್ದಾರೆ. ಓಲೈಕೆ, ಮತಬ್ಯಾಂಕಿಗಾಗಿ ಸ್ಲಂ ನಿರ್ಮಾಣಕ್ಕೆ ಕಾಂಗ್ರೆಸ್ ಕಾರಣ ಎಂದು ಆರೋಪ ಮಾಡಿರುವ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಗೃಹ ಸಚಿವರ ರಾಜೀನಾಮೆಗೆ ಆಗ್ರಹಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸೋಮವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗೊತ್ತಿಲ್ಲ ಸಚಿವರೇ ರಾಜೀನಾಮೆ ಕೊಟ್ಟು ನಡೆಯಿರಿ' ಪೋಸ್ಟರ್ ಅನ್ನು ಅವರು ಬಿಡುಗಡೆಗೊಳಿಸಿದರು. ಗೃಹ ಸಚಿವರೇ ಸಬೂಬುಗಳನ್ನು ಹೇಳಿಕೊಂಡು ಎಷ್ಟು ದಿನ ಈ ರಾಜ್ಯವನ್ನು ಹಾಳು ಮಾಡುತ್ತೀರಿ. ನೀವು ಅಧಿಕಾರ ಬಿಟ್ಟು ಕೊಡಿ. ಬೇರೆ ಯಾರಿಗಾದರೂ ತಾಕತ್ತಿದ್ದರೆ ಆಡಳಿತ ನಡೆಸಲಿ ಎಂದು ಒತ್ತಾಯಿಸಿದರು. ಡಾ. ಪರಮೇಶ್ವರ್ ಅವರೇ, ಇದು ನಿಮ್ಮ ಅಸಹಾಯಕತೆಯೇ ಅಥವಾ ಬೇರೆಯವರು ನಿಮಗೆ ಕೆಟ್ಟ ಹೆಸರು ತರಲು ನಿಮ್ಮ ವಿರುದ್ಧವಾಗಿ ಮಾಡಿದ ಷಡ್ಯಂತ್ರವೇ ಎಂದು ಹೇಳಿ ಎಂದು ಆಗ್ರಹವನ್ನು ಮುಂದಿಟ್ಟರು.

ರಾಜ್ಯದಲ್ಲಿ ಡ್ರಗ್ ಮಾಫಿಯ ಸಂಚಲನವನ್ನೇ ಸೃಷ್ಟಿ ಮಾಡಿದೆ. ಈ ಮಾಫಿಯಾಕ್ಕೆ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ ಅವಕಾಶ ಕಲ್ಪಿಸುವ ಮೂಲಕ ಡ್ರಗ್ ಸರ್ಕಾರವಾಗಿದೆ ಎಂದು ಆರೋಪಿಸಿದರು. ಕರ್ನಾಟಕದಲ್ಲಿ ಡ್ರಗ್ ಕಾರ್ಖಾನೆ ತಲೆ ಎತ್ತಿರುವುದು ಹೊರಕ್ಕೆ ಬರುತ್ತಿದೆ ಎಂದು ವಿವರಿಸಿದರು. ರಾಜ್ಯದಲ್ಲಿ ಕಾನೂನು– ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಮೊದಲಿನಿಂದ ತಿಳಿಸಿ, ನಿದರ್ಶನ ನೀಡಿದ್ದೇವೆ. ಅತ್ಯಾಚಾರಗಳು ನಡೆಯುತ್ತಿದ್ದವು. ಎಷ್ಟೋ ಪ್ರಾಣಹಾನಿಗಳಾದವು. ಹತ್ಯೆಗಳೂ ನಡೆದವು. ಆದರೆ, ತಡೆಯಲು ಈ ಸರ್ಕಾರದಿಂದ ಆಗಲಿಲ್ಲ ಎಂದು ಟೀಕಿಸಿದರು.

ಮಾದಕವಸ್ತು ಮಾರಾಟ ಅಡ್ಡೆಗಳಿಗೆ ಸರ್ಕಾರದ ಕುಮ್ಮಕ್ಕು: ಮಾದಕವಸ್ತು ಮಾರಾಟ ಅಡ್ಡೆಗಳಿಗೆ ಸರ್ಕಾರದ ಕುಮ್ಮಕ್ಕಿದೆ. ಗಂಧದ ನಾಡು ಗಾಂಜಾ ಬೀಡಾಗಿದೆ. ವಿದ್ಯಾರ್ಥಿಗಳು ಕಾಲೇಜಿಗೆ ಹೋಗಬೇಕೇ ಬೇಡವೇ ಎಂಬ ಪರಿಸ್ಥಿತಿ ಬಂದಿದೆ. ಆ್ಯಂಟಿ ನಕ್ಸಲ್ ದಳದ ಕೆಲಸ ಮುಗಿದುಹೋಗಿದೆ. ಅದನ್ನು ಆ್ಯಂಟಿ ಡ್ರಗ್ಸ್ ದಳವಾಗಿ ಮಾಡಿ ಮಾದಕವಸ್ತು ಜಾಲದ ಸಂಪೂರ್ಣ ಮೂಲೋತ್ಪಾಟನೆ ಮಾಡಿ ಎಂದು ಒತ್ತಾಯಿಸಿದರು. ಒಟ್ಟಾರೆ ಕಾಂಗ್ರೆಸ್ ಸರ್ಕಾರವು ಈ ರಾಜ್ಯವನ್ನು ಸಂಪೂರ್ಣ ಹದಗೆಡಿಸಿದೆ. ಮುಖ್ಯಮಂತ್ರಿಗಳು ತಕ್ಷಣ ಕಾರ್ಯೋನ್ಮುಖವಾಗಲಿ. ಮುಖ್ಯಮಂತ್ರಿಗಳು ಅಥವಾ ಗೃಹ ಸಚಿವರು ರಾಜೀನಾಮೆ ಕೊಡಬೇಕೇ ಎಂದು ಅವರೇ ತೀರ್ಮಾನಿಸಲಿ ಎಂದು ತಿಳಿಸಿದರು.

36 ವರ್ಷಗಳ ನಂತರ ರಾಜ್ಯದಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗೆ ಕೆಪಿಸಿಸಿ ಚಿಂತನೆ

ಬೆಂಗಳೂರು, ಡಿ.29–ಕರ್ನಾಟಕ ರಾಜ್ಯದಲ್ಲಿ 36 ವರ್ಷಗಳ ಬಳಿಕ ಮತ್ತೆ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಯು ಚಿಂತನೆ ನಡೆಸಿದೆ.

ಈ ಕುರಿತು ಪ್ರಸ್ತುತ ಪರಿಸ್ಥಿತಿ ಮತ್ತು ಕಾರ್ಯ ಸಾಧ್ಯತೆ ಕುರಿತಂತೆ ಸಮೀಕ್ಷೆ ನಡೆಸಿ ಸವಿಸ್ತಾರವಾದ ವರದಿ ನೀಡಲು ಇಬ್ಬರು ಸಚಿವರನ್ನೊಳಗೊಂಡ 9 ಮಂದಿ ಸದಸ್ಯರ ಸಮಿತಿಯನ್ನು ರಚಿಸಲಾಗಿದೆ. ಕೆಪಿಸಿಸಿ ಅಧ್ಯಕ್ಷರಾದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶನಿವಾರ ಸಮಿತಿ ರಚಿಸಿದ್ದು, 15 ದಿನಗಳಲ್ಲಿ ವರದಿ ನೀಡಲು ಸೂಚಿಸಿದ್ದಾರೆ.

ಸಮಿತಿ ಸಂಚಾಲಕರಾಗಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ್ ಅವರನ್ನು ನೇಮಿಸಲಾಗಿದೆ. ಉಳಿದಂತೆ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ವಿಧಾನ ಪರಿಷತ್ತಿನ ಸರ್ಕಾರ ಮುಖ್ಯ ಸಚೇತಕ ಸಲೀಂ ಅಹಮ್ಮದ್, ಶಾಸಕರಾದ ರಿಜ್ವಾನ್ ಅರ್ಷದ್, ಬಿ. ಶಿವಣ್ಣ, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಬಸವನಗೌಡ ಬಾದರ್ಲಿ, ಕೆಪಿವೈಸಿಸಿ ಅಧ್ಯಕ್ಷ ಹೆಚ್.ಎಸ್. ಮಂಜುನಾಥ್, ಎನ್‌ಎಸ್‌ಯುಐ ಅಧ್ಯಕ್ಷ ಕೀರ್ತಿ ಗಣೇಶ್ ಅವರು ಸಮಿತಿ ಸದಸ್ಯರಾಗಿದ್ದಾರೆ.

ವಿದ್ಯಾರ್ಥಿ ಸಂಘಗಳ ಚುನಾವಣೆಗಳನ್ನು ನಡೆಸುವುದರಿಂದ ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯ ಉತ್ತೇಜನಗೊಳ್ಳುತ್ತದೆ. ವಿದ್ಯಾರ್ಥಿ ಸಮೂಹದಲ್ಲಿ ನಾಯಕತ್ವ ಗುಣಗಳು ಬೆಳೆಯುತ್ತವೆ ಎಂದು ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಿಂದ ವ್ಯಕ್ತವಾದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕೆಪಿಸಿಸಿಯು ವಿದ್ಯಾರ್ಥಿ ಸಂಘಗಳ ಚುನಾವಣೆಗಳನ್ನು ಮತ್ತೆ ನಡೆಸಲು ಚಿಂತನೆ ನಡೆಸಿದೆ. ಇದಕ್ಕೆ ಪೂರಕವಾಗಿ ಪ್ರಸ್ತುತ ಸನ್ನಿವೇಶಗಳನ್ನು ಅಧ್ಯಯನ ಮಾಡಿ ಹಾಗೂ ಚುನಾವಣೆಗಳನ್ನು ನಡೆಸುವ ಕಾರ್ಯ ಸಾಧ್ಯತೆ ಮತ್ತು ಅಗತ್ಯತೆಯ ಶಿಫಾರಸುಗಳೊಂದಿಗೆ ಸಮಗ್ರ ವರದಿ ಸಲ್ಲಿಸಲು ಸೂಚಿಸಲಾಗಿದೆ.

ನಕ್ಕರೆ ಅದೇ ಸ್ವರ್ಗ

ಹುಡುಗ : ಸಿಸ್ಟರ್, ನಂಗೆ ಒಂದು ಬಾಟಲಿ ಬ್ಲಡ್ ಬೇಕು.
ನರ್ಸ್ : ಬ್ಲಡ್ ಗ್ರೂಪ್ ಹೇಳಿ.
ಹುಡುಗ : ಯಾವ್ದಾದ್ರು ಆಗುತ್ತೆ.
ನರ್ಸ್ : ಅದು ಹೇಗೆ ಆಗುತ್ತೇ?
ಹುಡುಗ : ಅದು ನನ್ನ ಗರ್ಲ್‌ಫ್ರೆಂಡ್‌ಗೆ ಲವ್ ಲೆಟರ್ ಬರೆಯೋಕೆ ಅಷ್ಟೇ!

ಮೈಸೂರು ಮಿತ್ರ
ಮಂಗಳವಾರ, 30 ಡಿಸೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಹುಡುಕುತ್ತಾ ಹೋದ ಧರ್ಮರಾಯನಿಗೆ ಕೆಟ್ಟವರು ಸಿಗಲಿಲ್ಲ.
ಎಷ್ಟು ಹುಡುಕಿದರೂ ದುರ್ಯೋಧನನಿಗೆ ಒಳ್ಳೆಯವರ ದರ್ಶನವಾಗಲಿಲ್ಲ.
ನೋಡುವ ದೃಷ್ಟಿ, ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಳೆ ಎಂದವನಿಗೆ ಹಾಳು, ಇಂದೇ ಎಂದವನಿಗೆ ಬೀಳಾಗದು ಬಾಳು.

ನಿಮ್ಮ ಪತ್ರಗಳು

ಹೊಸ ವರ್ಷದ ಆಚರಣೆ: ಇರಲಿ ಸಂಯಮ, ನಿಖರ ಗುರಿ!

ಮಾನ್ಯರೆ,

ವಿಶ್ವದೆಲ್ಲೆಡೆ ಹೊಸ ವರ್ಷದ ದಿನಾಚರಣೆ ಡಿ.31ರ ರಾತ್ರಿ ಮತ್ತು ಜನವರಿ 1 ರಂದು ನಡೆಯುತ್ತದೆ. ಆದರೆ ಭಾರತದಲ್ಲಿ ಯುಗಾದಿ, ಹೋಳಿಯಂತಹ ಹಬ್ಬಗಳು ಸ್ಥಳೀಯವಾಗಿ ಹೊಸ ವರ್ಷಗಳಾಗಿವೆ. ನಮ್ಮಲ್ಲಿನ ವರ್ಷಾಚರಣೆಗೆ ಅದರದ್ದೇ ಆದ ನಂಬಿಕೆ, ಸಂಪ್ರದಾಯದ ಹಿನ್ನೆಲೆ ಇರುತ್ತಿತ್ತು. ಆದರೆ ಈಗಿನ ಯುವ ಜನತೆಗೆ ಹೊಸ ವರ್ಷದ ಆಚರಣೆ ಎಂದರೆ ಅದೊಂದು ಮೋಜಿನಾಟ ಎಂಬಂತಾಗಿದೆ. ಕೆಲವರು ಪಟಾಕಿಗಳನ್ನು ಸಿಡಿಸುತ್ತಾ, ಸಂಗೀತ ಗೋಷ್ಠಿಗಳಿಗೆ ಭೇಟಿ ನೀಡುತ್ತಾ ದಿನವನ್ನು ಸಂತೋಷದಿಂದ ಕಳೆದರೆ, ಇನ್ನೂ ಹಲವರದು ಕೇವಲ ಮೋಜು, ಮಸ್ತಿ, ಕುಡಿತ, ಕುಣಿತ... ಇಷ್ಟಕ್ಕೇ ಹೊಸ ವರ್ಷಾಚರಣೆ ಸೀಮಿತವಾಗಿರುತ್ತದೆ.

ಹೊಸ ವರ್ಷದ ಸಂಭ್ರಮಾಚರಣೆಯನ್ನು ಕೇವಲ ಒಂದೆರಡು ದಿನಕ್ಕೆ ಸೀಮಿತಗೊಳಿಸದೆ, ವರ್ಷಪೂರ್ತಿ ಆರೋಗ್ಯಕರ ಜೀವನ, ಹಣ ಉಳಿತಾಯ, ಪ್ರಯಾಣದಂತಹ ಹೊಸ ಹೊಸ ಗುರಿಗಳನ್ನು ಹಾಕಿಕೊಳ್ಳುವುದು ಹೆಚ್ಚು ಸೂಕ್ತ ಅನಿಸುತ್ತದೆ. ಹೊಸ ವರ್ಷ 2026 ಎಂದರೆ ಕೇವಲ ದಿನಾಂಕ ಬದಲಾವಣೆ ಅಲ್ಲ, ಅದು ಜೀವನವನ್ನು ಹೊಸ ದೃಷ್ಟಿಕೋನದಿಂದ ನೋಡಲು ಸಿಗುವ ಮತ್ತೊಂದು ಅವಕಾಶ. ಹಳೆಯ ವರ್ಷದಲ್ಲಿ ಸಾಧಿಸಿದವುಗಳು, ತಪ್ಪಿದ ಗುರಿಗಳು ಮತ್ತು ಕಲಿತ ಪಾಠಗಳನ್ನು ಮನದಲ್ಲಿಟ್ಟುಕೊಂಡು ಮುಂದಿನ ವರ್ಷಕ್ಕೆ ಹೊಸ ನಿರ್ಣಯಗಳನ್ನು ಮಾಡಬೇಕಿದೆ. ಈ ಹೊಸ ವರ್ಷಕ್ಕೆ ಕಾಲಿಡುತ್ತಿದ್ದಂತೆ, ದಯೆಯಿಂದ ಇರುತ್ತೇವೆ, ಕಷ್ಟಪಟ್ಟು ಕೆಲಸ ಮಾಡುತ್ತೇವೆ ಮತ್ತು ಬರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುತ್ತೇವೆ ಎಂದು ಪ್ರತಿಜ್ಞೆ ಮಾಡೋಣ. ನವ ವರ್ಷದ ಆಗಮನ ಪರಸ್ಪರ ಶುಭಕಾಮನೆಗಳ ವಿನಿಮಯಕ್ಕೆ ಮೋಜು–ಮಸ್ತಿಗೆ ಮಾತ್ರ ಅಂತ ಸೀಮಿತಗೊಳಿಸದೆ, ಬರುವ ಹೊಸ ವರ್ಷದಲ್ಲಿ ದೊಡ್ಡ ಸಂಕಲ್ಪಗಳ ಸಾಕಾರಕ್ಕೆ ಮುಂದಾಗೋಣ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಪಾರ್ಕ್ ಸ್ವಚ್ಛಗೊಳಿಸಿ

ಮಾನ್ಯರೆ,

ಮೈಸೂರಿನ ಬನ್ನಿಮಂಟಪ ಬಿ ಬಡಾವಣೆ ಶ್ರೀ ಶಿವರಾತ್ರೀಶ್ವರನಗರ 2ನೇ ಮೇನ್‌ನಲ್ಲಿರುವ ಕುಡಿಯುವ ನೀರಿನ ಘಟಕದ ಹತ್ತಿರ ಪಾರ್ಕ್‌ನಲ್ಲಿ ಗಿಡಗಂಟಿಗಳು ವಿಪರೀತ ಬೆಳೆದು ಕಾಡಿನಂತಾಗಿದೆ. ಇದರ ಒಳಗಡೆ ನೀರಿನ ಟ್ಯಾಂಕ್ ಸಹ ಇದೆ. ಪಾರ್ಕ್ ಸ್ವಚ್ಛತೆ ಇಲ್ಲದಿರುವುದರಿಂದ ವಿಷಜಂತುಗಳು ಸೇರಿಕೊಂಡಿವೆ. ಹಾವಿನ ಮರಿಗಳು ಮನೆ ಬಾಗಿಲವರೆಗೂ ಬರುತ್ತಿವೆ. ಇದರಿಂದ ರಸ್ತೆಯಲ್ಲಿ ತಿರುಗಾಡಲು ಭಯವಾಗುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಪಾರ್ಕ್‌ನ ಗಿಡಗಂಟಿಗಳನ್ನು ಸ್ವಚ್ಛಗೊಳಿಸಿ ಇಲ್ಲಿನ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಎಸ್. ಸಿದ್ದೇಗೌಡ, ಎಸ್.ಎಸ್.ನಗರ, ಬನ್ನಿಮಂಟಪ, ಮೈಸೂರು.

ಎಲ್‌ಪಿಜಿ ಸಿಲಿಂಡರ್‌ಗಳ ಅವೈಜ್ಞಾನಿಕ ಬಳಕೆ

ಮಾನ್ಯರೆ,

ದಿನಾಂಕ 28.12.25 ರ 'ಮೈಸೂರು ಮಿತ್ರ' ದಿನಪತ್ರಿಕೆಯ 'ನಿಮ್ಮ ಪತ್ರಗಳು' ವಿಭಾಗದಲ್ಲಿ ಪಿ.ಜೆ. ರಾಘವೇಂದ್ರ ಅವರು ಪಾದಚಾರಿ ಮಾರ್ಗಗಳಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಅವೈಜ್ಞಾನಿಕ ಬಳಕೆಯ ಬಗ್ಗೆ ಬರೆದಿರುವ ಪತ್ರವು ಅತ್ಯಂತ ಸಮಯೋಚಿತ ಹಾಗೂ ಪ್ರಸ್ತುತವಾಗಿದೆ. ಮೈಸೂರಿನಂತಹ ಪಾರಂಪರಿಕ ನಗರದ ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತಾ ನಿಯಮಗಳನ್ನು ಗಾಳಿಗೆ ತೂರಿ ಸಿಲಿಂಡರ್ ಬಳಸುತ್ತಿರುವುದು ಮುಂದೊಂದು ದಿನ ಸಂಭವಿಸಲಿರುವ ದೊಡ್ಡ ದುರಂತಕ್ಕೆ ಮುನ್ನುಡಿಯಂತಿದೆ.

ಜನನಿಬಿಡ ಪಾದಚಾರಿ ಮಾರ್ಗಗಳಲ್ಲೇ ಗ್ಯಾಸ್ ಒಲೆಗಳನ್ನು ಹಚ್ಚಿ ವ್ಯಾಪಾರ ಮಾಡುವುದು ನಾಗರಿಕರ ಪ್ರಾಣದ ಜೊತೆ ಚೆಲ್ಲಾಟವಾಡಿದಂತೆ. ಇದು ಕೇವಲ ಸಂಚಾರಕ್ಕೆ ಅಡ್ಡಿಯಲ್ಲ, ಬದಲಾಗಿ ಭೀಕರ ಅನಾಹುತಕ್ಕೆ ಆಹ್ವಾನ ನೀಡುವ 'ಸಂಚಾರಿ ಬಾಂಬ್'ಗಳೇ ಸರಿ. ಅನಾಹುತ ಸಂಭವಿಸಿದ ನಂತರ ತನಿಖೆ, ಪರಿಹಾರ ಎಂದು ಓಡಾಡುವ ಬದಲು, 'ಮುನ್ನೆಚ್ಚರಿಕೆಯೇ ಮದ್ದು' ಎಂಬ ರಾಘವೇಂದ್ರ ಅವರ ತರ್ಕಬದ್ಧ ಆಗ್ರಹವನ್ನು ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ಗಂಭೀರವಾಗಿ ಪರಿಗಣಿಸಬೇಕಿದೆ. ನಗರದ ಸುರಕ್ಷತೆ ಮತ್ತು ಸಾರ್ವಜನಿಕ ಹಿತಾಸಕ್ತಿಯ ಪರವಾಗಿ ಧ್ವನಿ ಎತ್ತುತ್ತಲೇ ಇರುವ ಅವರಿಗೆ ಅಭಿನಂದನೆಗಳು. ಸಂಬಂಧಪಟ್ಟ ಅಧಿಕಾರಿಗಳು ಈ ಕೂಡಲೇ ಎಚ್ಚೆತ್ತುಕೊಂಡು ಪಾದಚಾರಿ ಮಾರ್ಗಗಳಲ್ಲಿ ನಡೆಯುವ ಇಂತಹ ಅಪಾಯಕಾರಿ ಚಟುವಟಿಕೆಗಳಿಗೆ ಶಾಶ್ವತ ಕಡಿವಾಣ ಹಾಕುವ ಮೂಲಕ ಮೈಸೂರಿನ ಸೌಂದರ್ಯ ಮತ್ತು ನಾಗರಿಕರ ಸುರಕ್ಷತೆಯನ್ನು ಕಾಪಾಡಲಿ ಎಂದು ಈ ಮೂಲಕ ಒತ್ತಾಯಿಸುತ್ತೇನೆ. **– ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

ಜೆ.ಪಿ.ನಗರ ರಿಂಗ್ ರಸ್ತೆಯಲ್ಲಿ ಸಿಗ್ನಲ್ ದೀಪ ಅಳವಡಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ.ನಗರ ರಿಂಗ್ ರಸ್ತೆಯ ಪಕ್ಕದಲ್ಲಿ 24 ಬಡಾವಣೆಗಳು ನಿರ್ಮಾಣವಾಗಿದ್ದು, ಸುಮಾರು 10 ರಿಂದ 12 ಸಾವಿರ ಜನ ವಾಸಿಸುತ್ತಿದ್ದಾರೆ. ಪ್ರತಿಯೊಬ್ಬರೂ ತಮ್ಮ ದಿನನಿತ್ಯದ ಕೆಲಸ ಕಾರ್ಯಗಳಿಗೆ ರಿಂಗ್ ರಸ್ತೆ ದಾಟಿ ಜೆ.ಪಿ.ನಗರಕ್ಕೆ ಬರಲೇಬೇಕಿದೆ. ರಿಂಗ್ ರಸ್ತೆಯಲ್ಲಿ ವಾಹನ ದಟ್ಟಣೆ ವಿಪರೀತವಾಗಿದ್ದು ರಸ್ತೆ ದಾಟಲು ಕಾದು ನಿಲ್ಲಬೇಕಾಗಿದೆ. ಇಲ್ಲಿ ವಾಹನಗಳ ವೇಗದ ಮಿತಿ ಎಲ್ಲೆ ಮೀರಿದೆ. ವಾರದಲ್ಲಿ ಎರಡು ಮೂರು ಬಾರಿ ಅಪಘಾತಗಳಾಗುತ್ತಿವೆ. ಸದರೀ ಜೆ.ಪಿ. ನಗರ ಅಕ್ಕಮಹಾದೇವಿ ರಸ್ತೆಯ ಜಂಕ್ಷನ್‌ನಲ್ಲಿ ಸಿಗ್ನಲ್ ದೀಪ ಅಳವಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಚುನಾಯಿತ ಜನಪ್ರತಿನಿಧಿಗಳು ಹಾಗೂ ನಗರ ಪಾಲಿಕೆ ಆಯುಕ್ತರು, ಪೊಲೀಸ್ ಆಯುಕ್ತರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ವಾಹನ ದಟ್ಟಣೆ ಇಲ್ಲದ ಕಡೆ ಸಿಗ್ನಲ್ ದೀಪ ಅಳವಡಿಸಲಾಗಿದೆ. ತೀರಾ ಅನಿವಾರ್ಯವೂ ಅವಶ್ಯವೂ ಆದ ಇಂತಹ ಸ್ಥಳದಲ್ಲಿ ಸಿಗ್ನಲ್ ದೀಪ ಅಳವಡಿಸಬೇಕೆಂದು ಈ ಮೂಲಕ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ಕೆ.ಸಿ. ಬಸವರಾಜಸ್ವಾಮಿ, ಸಂಸ್ಥಾಪಕ ಅಧ್ಯಕ್ಷರು, ವೀರಶೈವ–ಲಿಂಗಾಯತ ವಿವಿಧ ಬಡಾವಣೆಗಳ ಒಕ್ಕೂಟ, ಜೆ.ಪಿ.ನಗರ, ಮೈಸೂರು.

ಈ ಜೀವನ



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಹೊಗಳಿಕೆ–ತೆಗಳಿಕೆ ಸಾರ್ಥಕ ಜೀವನದ ಸಾಧನಗಳು...!

ಮಾನವನ ಜೀವನ ಪಥದಲ್ಲಿ ಹೊಗಳಿಕೆ ಮತ್ತು ತೆಗಳಿಕೆ ಎಂಬ ಎರಡು ಪದಗಳು ನೆರಳಿನಂತೆ ಜೊತೆಗೂಡಿ ನಡೆಯುತ್ತವೆ. ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಕಾರ್ಯಗಳಿಗೆ ಪ್ರತಿಫಲವಾಗಿ ಒಂದೊಮ್ಮೆ ಪ್ರಶಂಸೆಯೂ ಸಿಗುತ್ತದೆ, ಕೆಲವೊಮ್ಮೆ ಟೀಕೆಯೂ ಎದುರಾಗುತ್ತದೆ. ಒಳ್ಳೆಯ ಕೆಲಸ ಮಾಡಿದಾಗ ಹೊಗಳಿಕೆಯ ಮಳೆಯೇ ಸುರಿಯುತ್ತದೆ; ತಪ್ಪಾದಾಗ ಅಥವಾ ಅರ್ಥವಾಗದ ಕೆಲಸ ಮಾಡಿದಾಗ ತೆಗೆಳಿಕೆಯ ಕಟು ಮಾತುಗಳು ಕೇಳಿಬರುತ್ತವೆ. ಈ ಎರಡನ್ನೂ ಸಮಚಿತ್ತದಿಂದ ಸ್ವೀಕರಿಸುವ ಗುಣವೇ ವ್ಯಕ್ತಿತ್ವದ ನಿಜವಾದ ಮಾನದಂಡವಾಗಿರುತ್ತದೆ.

ಹೊಗಳಿಕೆ ಮಾನವನಿಗೆ ಉತ್ತೇಜನ ನೀಡುವ ಶಕ್ತಿಯಾಗಿದ್ದರೆ, ಅತಿಯಾದ ಹೊಗಳಿಕೆ ಅಹಂಕಾರಕ್ಕೆ ದಾರಿ ಮಾಡಿಕೊಡುತ್ತದೆ. ಅದೇ ರೀತಿ ತೆಗಳಿಕೆ ವ್ಯಕ್ತಿಯನ್ನು ತಿದ್ದಿಕೊಳ್ಳಲು ಸಹಾಯಕವಾಗಬಹುದು; ಆದರೆ ಅತಿರೇಕವಾದ ಟೀಕೆ ಮನಸ್ಸಿಗೆ ನೋವುಂಟು ಮಾಡಿ ಆತ್ಮವಿಶ್ವಾಸ ಕುಗ್ಗಿಸಬಹುದು. ಆದ್ದರಿಂದ ಜೀವನದಲ್ಲಿ ಹೊಗಳಿಕೆಯಿಂದ ಹಿಗ್ಗದೇ, ತೆಗಳಿಕೆಯಿಂದ ಕುಗ್ಗದೇ ಸಮತೋಲನ ಕಾಯ್ದುಕೊಳ್ಳುವುದೇ ಜಾಣ್ಮೆಯ ಲಕ್ಷಣವಾಗಿದೆ.

ಪ್ರತಿಯೊಬ್ಬ ಮನುಷ್ಯನಿಗೂ ತನ್ನನ್ನು ಮತ್ತೊಬ್ಬರು ಗುರುತಿಸಬೇಕು, ತನ್ನ ಜ್ಞಾನ, ಪಾಂಡಿತ್ಯದ ಬಗ್ಗೆ ಮೆಚ್ಚುಗೆ ಸೂಚಿಸಬೇಕು, ರೂಪ– ಗುಣವನ್ನು ಹಾಡಿ ಕೊಂಡಾಡಬೇಕು, ತನ್ನಲ್ಲಿರುವ ವಿಶೇಷವಾದ ಅಂಶವನ್ನು ಪರಿಗಣಿಸಬೇಕು ಎಂಬಿತ್ಯಾದಿ ಆಸೆಗಳು ಬಹುತೇಕವಾಗಿ ಇರುತ್ತವೆ. ಅದೇ ಸಮಯದಲ್ಲಿ ನಮ್ಮನ್ನು ಯಾರು ಪ್ರಶ್ನೆ ಮಾಡಬಾರದು, ನಮ್ಮಲ್ಲಿರುವ ಸಣ್ಣತನಗಳನ್ನು, ಮಾಡಿದ ತಪ್ಪುಗಳನ್ನು ತೋರಿಸಿ ಹೀಯ್ಯಾಳಿಸಬಾರದು, ಮುಖ್ಯವಾಗಿ ನಿಂದನೆ ಮಾಡಬಾರದು ಎಂದು ಕೂಡ ಅಂದುಕೊಂಡಿರುತ್ತೇವೆ. ಹೊಗಳಿಕೆಗೆ ಹಿಗ್ಗಿ ಸಂತಸ ಪಡುವ ಮನಸ್ಸು ತೆಗಳಿಕೆಗೆ ಕುಗ್ಗಿ ನರಳಿ ಪರಿತಪಿಸುವುದನ್ನು ಕಾಣಬಹುದು.

ಹಾಗೆ ನೋಡಿದ್ದಲ್ಲಿ ಹೊಗಳಿಕೆ ಮತ್ತು ತೆಗಳಿಕೆ ಎಂಬುದು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಕ್ರಿಕೆಟ್‌ನಲ್ಲಿ ಉತ್ತಮ ಫಾರ್ಮ್‌ನಲ್ಲಿ ಆಟಗಾರ ಇರುವಾಗ, ಸಿನಿಮಾ ನಟನೊಬ್ಬ ಯಶಸ್ಸಿನ ಉತ್ತುಂಗದ ಶಿಖರದಲ್ಲಿದ್ದಾಗ ಹೊಗಳಿ ಅಟ್ಟಕ್ಕೇರಿಸುವ ಅದೇ ಮಂದಿ ಸಮಯ ಬದಲಾದಂತೆ ಎಲ್ಲವೂ ಏರು–ಪೇರುಗಳಾದಾಗ ತೆಗಳುವ ಕೆಲಸವನ್ನು ಮಾಡುತ್ತಾರೆ. ಬದುಕಿನಲ್ಲಿ ಸೋಲು–ಗೆಲುವುಗಳು ಎಷ್ಟು ಮುಖ್ಯವೋ, ಹಾಗೆಯೇ ಹೊಗಳಿಕೆ–ತೆಗಳಿಕೆಗಳು ಕೂಡ ತುಂಬಾ ಪ್ರಧಾನವಾದವುಗಳಾಗಿರುತ್ತವೆ.

ಹೊಗಳಿಕೆಯಿಂದಾಗುವ ಉಪಯೋಗಗಳು

ಹೊಗಳಿಕೆ ಎಂಬುದು ಉತ್ತಮವಾದ ಬದಲಾವಣೆಯನ್ನು ಕೂಡ ತರಬಲ್ಲದು. ಹಿಂದಿನ ಕಾಲದಲ್ಲಿ ರಾಜಪ್ರಭುತ್ವದ ಆಳ್ವಿಕೆಯ ಸಮಯದಲ್ಲಿ ಹೊಗಳುವ ಜನರು ಹೊಗಳು ಭಟರು ಇಟ್ಟುಕೊಂಡು, ಅವರಿಗೆ ಬೇಕಾದ ಎಲ್ಲ ಸವಲತ್ತುಗಳನ್ನು ನೀಡಿ, ಅವರಿಗೆ ಅಗತ್ಯವಾದ ಏರ್ಪಾಡುಗಳನ್ನು ಕೊಟ್ಟು ತಮ್ಮನ್ನು ಹೊಗಳಲೆಂದೇ ಅವರನ್ನು ನೇಮಿಸಿಕೊಂಡಿರುತ್ತಿದ್ದರಂತೆ. ಹೊಗಳುಭಟ್ಟರ ಹೊಗಳಿಕೆಗಳಿಂದ ಮತ್ತಷ್ಟು, ಮಗದಷ್ಟು ಕೆಲಸಗಳನ್ನು ಮಾಡಲು ಸ್ಫೂರ್ತಿಯನ್ನು ಪಡೆಯುತ್ತಿದ್ದರಂತೆ.

ಹೊಗಳಿಕೆ ಎಂಬುದು ವ್ಯಕ್ತಿಯೊಬ್ಬನ ಬದುಕಿನಲ್ಲಿ ಅಗಾಧವಾದ ಪರಿಣಾಮವನ್ನು ಬೀರುತ್ತದೆ. ಒಳ್ಳೆಯ ಕೆಲಸವನ್ನು ಮಾಡಿದಾಗ, ನಾವು ಮಾಡಲಾಗದ ಕೆಲಸವನ್ನು ಮತ್ತೊಬ್ಬರು ಮಾಡಿದಾಗ, ವಿಶೇಷವಾದ ಪ್ರತಿಭೆಯನ್ನು ತೋರಿದಾಗ ನಾವು ನುಡಿಯುವ ಸಕಾರಾತ್ಮಕ ಮಾತುಗಳು



ಆ ಕೆಲಸದಲ್ಲಿ ನಿರತರಾದವರಿಗೆ ಉತ್ತೇಜನವನ್ನು ಕೊಟ್ಟು ಮತ್ತಷ್ಟು ಕೆಲಸಗಳನ್ನು ಮಾಡಲು ಸ್ಫೂರ್ತಿಯನ್ನು ಒದಗಿಸುತ್ತದೆ.

- ಉತ್ತಮವಾಗಿ ಹಾಡುವ ಗಾಯಕನಿಗೆ ಪ್ರೋತ್ಸಾಹದ ಮಾತುಗಳನ್ನು ಹೇಳುವುದರಿಂದ ಅವನು ತನ್ನ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಲು ಉತ್ತೇಜನ ನೀಡಬಹುದು
- ಆರಂಭಿಕ ಹಂತದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿರುವವರಿಗೆ ಅಥವಾ ವಿದ್ಯಾಭ್ಯಾಸದ ಹಂತದಲ್ಲಿ ಸಾಹಿತ್ಯ ಬರೆಯಲು ಪ್ರಯತ್ನಿಸಿದವರಿಗೆ ಪ್ರೋತ್ಸಾಹದ ಹೊಗಳಿಕೆಯ ಮಾತುಗಳನ್ನಾಡಿದರೆ ಮುಂದೆ ಅವರಿಂದ ಉತ್ತಮ ಸಾಹಿತ್ಯ ಸೃಷ್ಟಿಯಾಗಬಹುದು.
- ಮನೆಯಲ್ಲಿ ಗೃಹಿಣಿಯರು ಮಾಡುವ ಸಣ್ಣ ಪುಟ್ಟ ಕೆಲಸಗಳನ್ನು ಮೆಚ್ಚಿ ಒಂದೊಳ್ಳೆಯ ಮಾತನ್ನು ಆಡಿದರೆ ಅವರು ಮತ್ತಷ್ಟು ತನ್ಮಯರಾಗಿ ತಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಬಹುದು.
- ಸಮಾಜ ಸೇವಾಕಾರ್ಯದಲ್ಲಿ ನಮ್ಮಿಂದಾಗದ ಕೆಲಸವನ್ನು ಮಾಡುವವರಿಗೆ ಪ್ರೋತ್ಸಾಹವನ್ನು ನೀಡಿ ಒಳ್ಳೆಯ ಮಾತುಗಳನ್ನಾಡಿದರೆ ಅವರಿಂದ ಮತ್ತಷ್ಟು ಸತ್ಕಾರ್ಯಗಳು ಉಂಟಾಗಬಹುದು.

ಹೊಗಳಿಕೆಗಳಿಂದಾಗುವ ಪರಿಣಾಮಗಳು

ಅತಿಯಾದರೆ ಅಮೃತವು ವಿಷವಾದಂತೆ ಎಂಬ ಗಾದೆ ಮಾತಿನಂತೆ ಕೆಲವೊಮ್ಮೆ ಹೊಗಳಿಕೆ ಅತಿಯಾದರೆ ಅದು ಹೊನ್ನ ಶೂಲದಂತೆ ಇರಿಯಲೂ ಬಹುದು. ಇತ್ತೀಚಿನ ದಿನಗಳಲ್ಲಿ ಸಣ್ಣ ಪುಟ್ಟ ಕೆಲಸಗಳಿಗೆಲ್ಲ ಹೊಗಳಿಕೆಯನ್ನು ಮಾಡುತ್ತಾ ಅಥವಾ ಯಾವುದಕ್ಕೆ ಪ್ರೋತ್ಸಾಹ ನೀಡಬೇಕೋ ಅದಕ್ಕೆ ನೀಡದೇ ಬೇಡದ ವಿಚಾರಗಳಿಗೆ ಪ್ರೋತ್ಸಾಹ ನೀಡಿ ಉತ್ತೇಜನ ನೀಡುತ್ತಿರುವುದು ನಿಜಕ್ಕೂ ಆಘಾತಕಾರಿ ಸಂಗತಿಯಾಗಿದೆ.ಇದಕ್ಕೆ ತಾಜಾ ಉದಾಹರಣೆ ಎಂದರೆ ಹುಡುಗಿಯೊಬ್ಬರು ಕರ್ಕಶವಾಗಿ ಹಾಡಿದ ಹಾಡನ್ನೇ ದೊಡ್ಡದನ್ನಾಗಿ ವೈರಲ್ ಮಾಡಿ ಭಾರೀ ಸಾಧನೆ ಮಾಡಿದವರ ಹಾಗೆ ಇನ್ನಿಲ್ಲದಂತೆ ಅವರನ್ನು ಆಡಿ ಮೆರೆಸಿದ್ದನ್ನು ನೋಡಿದಾಗ ಪ್ರಸ್ತುತ ದಿನಗಳಲ್ಲಿ ಹೊಗಳಿಕೆಯ ಹಾದಿ ದಾರಿ ತಪ್ಪಿರುವುದನ್ನು ತೋರಿಸುವುದಲ್ಲದೇ ಇತರರಿಗೂ ದಾರಿ ತಪ್ಪಿಸುವಂತೆ ಮಾಡುತ್ತಿರುವುದು ನಿಜಕ್ಕೂ ಆತಂಕಪಡುವಂತದ್ದು.

ಒಳ್ಳೆಯ ಕೆಲಸಗಳಿಗೆ ಹೊಗಳಿಕೆಯ ಮಾತುಗಳನ್ನಾಡಿ ಪ್ರೋತ್ಸಾಹ ನೀಡಿದರೆ ಅದು ಮತ್ತಷ್ಟು ಒಳ್ಳೆಯ ಕೆಲಸಗಳಿಗೆ ಪ್ರೇರಣೆ. ಅದೇ ತರಹ ಬೇಡದ ವಿಚಾರಗಳಿಗೆ ಸಲ್ಲದ ಸಂಗತಿ ಗಳಿಗೆ ಪ್ರೋತ್ಸಾಹ ನೀಡಿ ಹೊಗಳಿದರೆ ಅದು ಅಧಪತನಕ್ಕೆ ಕಾರಣವಾಗುತ್ತದೆ.

ತೆಗಳಿಕೆಯಿಂದಾಗುವ ಉಪಯೋಗಗಳು

ಹೊಗಳಿಕೆಯಂತೆ ತೆಗಳಿಕೆಗಳಿಂದಲೂ ಸಹ ಉಪಯೋಗವಾಗುತ್ತದೆ. ಟೀಕೆ, ತೆಗಳಿಕೆ, ನಿಂದನೆಯಂತಹ ಮಾತುಗಳಿಂದ ಕೆಲವೊಮ್ಮೆ ಉಪಯೋಗಗಳಾಗುವ ಸಾಧ್ಯತೆಗಳು ಕೂಡ ಇವೆ. ಈ ಮಾತನ್ನು ಹೇಳುವಾಗ ನನಗೆ ಆಲ್‌ಫ್ರೆಡ್ ನೊಬೆಲ್‌ನ ಜೀವನದ ಕಥೆ ನೆನಪಾಗುತ್ತದೆ.

> "ಹೊಗಳಿಕೆ ಮತ್ತು ತೆಗಳಿಕೆ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಹೊಗಳಿಕೆಯಿಂದ ಮರುಳಾಗದೆ, ತೆಗಳಿಕೆಯಿಂದ ನಿರಾಶರಾಗದೆ, ಎರಡನ್ನೂ ಸಮಚಿತ್ತದಿಂದ ಸ್ವೀಕರಿಸುವುದೇ ಸಾರ್ಥಕ ಜೀವನದ ಮಾರ್ಗವಾಗಿದೆ. ಹೊಗಳಿಕೆಯನ್ನು ಪ್ರೇರಣೆಯಾಗಿ ತೆಗೆದುಕೊಂಡು ಮುಂದುವರಿಯಬೇಕು, ತೆಗಳಿಕೆಯನ್ನು ಆತ್ಮ ಪರಿಶೀಲನೆಗೆ ಉಪಯೋಗಿಸಬೇಕು. ಆಗ ಮಾತ್ರ ವ್ಯಕ್ತಿತ್ವವು ಮೆರೆಯುತ್ತದೆ, ಜೀವನವು ಅರ್ಥಪೂರ್ಣವಾಗುತ್ತದೆ.

ಆಲ್ಫ್ರೆಡ್ ನೋಬೆಲ್ 'ಡೈನಾಮೈಟ್' ಎಂಬ ಸ್ಫೋಟಕವನ್ನು ಆವಿಷ್ಕರಿಸಿ ಅಪಾರವಾದ ಸಾವು ನೋವುಗಳಿಗೆ ಕಾರಣಕರ್ತನಾದವನು. ಒಮ್ಮೆ ಇದೇ ಹೆಸರಿನ ವ್ಯಕ್ತಿಯೊಬ್ಬ ಸಾವಿಗೀಡಾದ ಸುದ್ದಿಯನ್ನು ಪತ್ರಿಕೆಗಳು ಆತ ಆಲ್ ಫ್ರೆಡ್ ನೊಬೆಲ್ ಎಂತಲೇ ಭಾವಿಸಿ ಸಾವಿನ ಜನಕ ಇನ್ನಿಲ್ಲ ಎಂಬ ಶೀರ್ಷಿಕೆಯಡಿಯಲ್ಲಿ ಸುದ್ದಿಯನ್ನು ಪ್ರಕಟ ಮಾಡಿದವು. ತನ್ನ ಸಾವಿನ ನಂತರ ತನ್ನನ್ನು ಈ ರೀತಿ ಜನ ನೆನಪಲ್ಲಿಟ್ಟುಕೊಳ್ಳಬಾರದೆಂದು ನಿರ್ಧರಿಸಿದ ನೊಬೆಲ್ ತನ್ನ ಶೋಧನೆಯಿಂದಾದ ಸಾವು– ನೋವುಗಳಿಂದ ಬೇಸರ ಪಟ್ಟು 1895ರಲ್ಲಿ ತನ್ನ ಸಂಪತ್ತಿನ 94% ಭಾಗವನ್ನು ಈ ಪ್ರಶಸ್ತಿಗಳ ಸ್ಥಾಪನೆಗೆ ಉಯಿಲಿನಲ್ಲಿ ನಮೂದಿಸಿದ. ಮುಂದೆ ಈತನ ಉಯಿಲನ ಪ್ರಕಾರವಾಗಿ 1901ರಲ್ಲಿ ಮೊದಲ ನೊಬೆಲ್ ಪ್ರಶಸ್ತಿಗಳನ್ನು ವಿತರಿಸಲಾಯಿತು. ಪ್ರಸ್ತುತ ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಕೀಯ, ಸಾಹಿತ್ಯ, ಅರ್ಥಶಾಸ್ತ್ರ, ಶಾಂತಿ ವಿಭಾಗ ಹೀಗೆ ಆರು ವಿಭಾಗಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ನೊಬೆಲ್ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ನೋಡಿ ಪತ್ರಿಕೆಗಳು ಮಾಡಿದ ಸಣ್ಣ ತೆಗಳಿಕೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಗುರುತಿಸಿ ಪ್ರೋತ್ಸಾಹಿಸಿ ಪ್ರಶಸ್ತಿ ನೀಡುವುದಕ್ಕೆ ಕಾರಣವಾಯಿತು.

ನಿಮ್ಮ ದೇಶದಲ್ಲಿ ಇನ್ನೂ ಚಿಕ್ಕ ಹುಡುಗರಿದ್ದರೆ ಕಳುಹಿಸಿ ಕ್ರಿಕೆಟ್ ಆಡಲು ಎಂದು ತೆಗಳಿಕೆ ಮಾಡಿದ ಪರಿಣಾಮವೇ ಅದೇ ಹುಡುಗ ಕ್ರಿಕೆಟ್‌ನಲ್ಲಿ ಮುಂದೆ ವಾಮನ ಬೃಹದಾಕಾರದ ಸಾಧನೆ ಮಾಡಿ ಕ್ರಿಕೆಟ್‌ಗೆ ದೇವರಾಗಿ ಪ್ರಸಿದ್ಧರಾದದ್ದು ಇತಿಹಾಸ. ಹೀಗೆ ಹಲವು ತೆಗಳಿಕೆಯ, ನಿಂದನೆಯ ಮಾತುಗಳು ಹೊಸ ಸಾಧನೆಗಳಿಗೆ, ಹೊಸ ಆವಿಷ್ಕಾರಗಳಿಗೆ ನಾಂದಿಯಾಗಿವೆ. ತೆಗಳಿಕೆಯು ಕೂಡ ಪ್ರೋತ್ಸಾಹವನ್ನು ನೀಡಬಲ್ಲದು. ಆದ್ದರಿಂದ ತೆಗಳಿಕೆಗಳಿಗೆ ಕುಗ್ಗದೇ ಧೈರ್ಯವಾಗಿ ಮುನ್ನುಗ್ಗುವ ಛಲ ನಮ್ಮಲ್ಲಿ ಮೂಡಬೇಕು.

ತೆಗಳಿಕೆಯಿಂದಾಗುವ ಪರಿಣಾಮಗಳು

ಕೆಲವೊಮ್ಮೆ ಹಾಸ್ಯ, ತಮಾಷೆ ಎಂದು ಮಾಡುವ ತೆಗಳಿಕೆಗಳೇ ಮಾರಕವಾಗಬಹುದು. ಕೆಲವೊಬ್ಬರ ಬದುಕಿನಲ್ಲಿ ನಕರಾತ್ಮಕವಾದ ಪರಿಣಾಮವನ್ನು ಉಂಟು ಮಾಡುತ್ತವೆ.

- ಸಭಾಕಂಪನ (ಸ್ಟೇಜ್ ಫಿಯರ್) ಇರುವವರಿಗೆ ಆಡಿಕೊಂಡರೆ ಮುಂದೆಂದೂ ಅವರು ಸಭಾ ವೇದಿಕೆಯನ್ನು ಹತ್ತದೇ ದೂರ ಉಳಿಯಬಹುದು.
- ಗೊತ್ತಿದ್ದು ಅಥವಾ ಗೊತ್ತಿಲ್ಲದೆಯೇ ತಪ್ಪು ಮಾಡಿರುವವರನ್ನು ಟೀಕಿಸಿದಾಗ ಅವರು ಮುಂದೆ ಅದೇ ತರಹದ ತಪ್ಪುಗಳನ್ನು ಮಾಡಲು ಮುಂದಾಗಬಹುದು.
- ಬರಿ ತಪ್ಪುಗಳನ್ನೇ ಹುಡುಕಿ ಕೊಂಕು ನುಡಿಯುವುದರಿಂದ ಸಂಕುಚಿತ ಮನೋಭಾವ ನಮ್ಮನ್ನು ಇತರರ ಮುಂದೆ ಸಣ್ಣವರನ್ನಾಗಿ ಮಾಡಬಹುದು.
- ಪ್ರಯತ್ನ ಪಡದೇ ಹೊಸ ಶೋಧನೆ ಸಾಧ್ಯವಾಗದು. ಪರಿಸ್ಥಿತಿ ಹೀಗಿರುವಾಗ ಪ್ರಯತ್ನದಲ್ಲಿ ಸೋಲು ಉಂಟಾದಾಗ ತೆಗಳಿದರೆ, ಹೀಯ್ಯಾಳಿಸಿ ಮಾತಾನಾಡಿದರೆ ಅವರು ಮತ್ತೆ ಪ್ರಯತ್ನವನ್ನೇ ಮಾಡದಿರಬಹುದು.

ಹೀಗೆ ಹೊಗಳಿಕೆ, ತೆಗಳಿಕೆಗಳೆರಡು ಜೀವನದ ಗಾಡಿಗೆ ಗಾಲಿ (ಚಕ್ರಗಳಾಗಿ)ಗಳಾಗಿ ಒಂದೇ ನಾಣ್ಯದ ಎರಡು ಮುಖಗಳಾಗಿ ಬದುಕಿಗೆ ಸ್ಫೂರ್ತಿ ನೀಡುವ, ಪ್ರೇರಣೆ ಕೊಡುವ ಮಾದರಿಗಳಾಗಿ ನಿಲ್ಲಬಹುದು. ಹೊಗಳಿಕೆಗಳಿಗೆ ಹಿಗ್ಗದೇ, ತೆಗಳಿಕೆಗಳಿಗೆ ಕುಗ್ಗದೇ ಎರಡನ್ನೂ ಸಮಾವಾಗಿ ಸ್ವೀಕರಿಸಿ ಮುನ್ನುಗ್ಗುವುದನ್ನು ಕಲಿತುಕೊಂಡಾಗ ಬದುಕು ಹಸನಾಗಬಲ್ಲದು, ಸುಂದರವಾಗಿ ಗೋಚರವಾಗಬಲ್ಲದು. ಇಲ್ಲಿ ಅಕ್ಕಮಹಾದೇವಿಯ ವಚನವೊಂದರ ಉಲ್ಲೇಖ ಅರ್ಹವಾದುದೆನಿಸುತ್ತದೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ,
ಸಮುದ್ರದ ತಡಿಯಲೊಂದು ಮನೆಯ
ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯಾ,
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ,
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ

ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ–ನಿಂದೆಗಳು ಬಂದೆಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಈ ವಚನದಲ್ಲಿ ಅಕ್ಕಮಹಾದೇವಿಯು ಈ ಧರೆಯಲ್ಲಿ ಜನ್ಮ ತಾಳಿದ ನಂತರ ಕಷ್ಟ–ನಷ್ಟಗಳು, ನೋವು ಅವಮಾನಗಳನ್ನು ಎದುರಿಸಲೇಬೇಕು. ಅವುಗಳಿಗೆ ಹೆದರಿ ಹಿಮ್ಮೆಟ್ಟುವುದು ಸರಿಯಲ್ಲ ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾರೆ.

ಪ್ರಸ್ತುತ ದಿನಗಳಲ್ಲಿ ಒಂದು ಸಣ್ಣ ಮಾತನ್ನು ಬೇರೆಯವರಿಂದ ಕೇಳಲು ಇಷ್ಟಪಡದ ನಮ್ಮ ಯುವಜನಾಂಗಕ್ಕೆ ನೀತಿಯನ್ನು ಹೇಳಿದಂತಿದೆ ಈ ವಚನ. ಮನುಷ್ಯನಾಗಿ ಹುಟ್ಟಿ ಬಂದ ಮೇಲೆ ಏನೇ ಅವಮಾನ–ನಿಂದನೆಗಳು ಬಂದರೂ, ಒಂದು ವೇಳೆ ಹೊಗಳಿಕೆಗಳು ಬಂದರೂ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಗುಣ ನಮ್ಮದಾಗಬೇಕೆಂಬ ನೀತಿ ಈ ವಚನದಲ್ಲಿದೆ. ಹೊಗಳಿಕೆಗೆ ಹಿಗ್ಗದೇ, ತೆಗಳಿಕೆಗೆ ಕುಗ್ಗದೆ ಎರಡನ್ನೂ ಸಮಾನ ಚಿತ್ತವಾಗಿ ಸ್ವೀಕರಿಸಿದರೆ ಬದುಕು ಸುಂದರವಾಗಿರುತ್ತದೆ. ತಮ್ಮ ಮುಂದಿನ ಭವಿಷ್ಯವನ್ನು ನೆನೆದು ಆತಂಕಪಡುವಂತಹ ಅಥವಾ ಸಣ್ಣಪುಟ್ಟ ನಕರಾತ್ಮಕ ಚಿಂತನೆಗಳಿಂದ ಹತಾಶೆಗೆ ಒಳಗಾಗುವಂತಹ ಜನರಿಗೆ ಸ್ಫೂರ್ತಿಯನ್ನು ನೀಡಬಲ್ಲ ವಚನ ಇದಾಗಿದೆ ಎಂದು ಹೇಳಬಹುದು.

ಒಟ್ಟಾರೆಯಾಗಿ ಹೇಳುವುದಾದರೆ, ಹೊಗಳಿಕೆ ಮತ್ತು ತೆಗಳಿಕೆ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಹೊಗಳಿಕೆಯಿಂದ ಮರುಳಾಗದೆ, ತೆಗಳಿಕೆಯಿಂದ ನಿರಾಶರಾಗದೆ, ಎರಡನ್ನೂ ಸಮಚಿತ್ತದಿಂದ ಸ್ವೀಕರಿಸುವುದೇ ಸಾರ್ಥಕ ಜೀವನದ ಮಾರ್ಗವಾಗಿದೆ. ಹೊಗಳಿಕೆಯನ್ನು ಪ್ರೇರಣೆಯಾಗಿ ತೆಗೆದುಕೊಂಡು ಮುಂದುವರಿಯಬೇಕು, ತೆಗಳಿಕೆಯನ್ನು ಆತ್ಮಪರಿಶೀಲನೆಗೆ ಉಪಯೋಗಿಸಬೇಕು. ಆಗ ಮಾತ್ರ ವ್ಯಕ್ತಿತ್ವವು ಮೆರೆಯುತ್ತದೆ, ಜೀವನವು ಅರ್ಥಪೂರ್ಣವಾಗುತ್ತದೆ. ಅಂತೆಯೇ, ಹೊಗಳಿಕೆ–ತೆಗಳಿಕೆ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಭಾವವೇ ನಿಜವಾದ ಮಾನವೀಯತೆಯ ಲಕ್ಷಣವಾಗಿದೆ.

ಬಂಧನ್ ಬ್ಯಾಂಕ್‌ನಿಂದ 30ಕ್ಕೂ ಅಧಿಕ ಕನ್ನಡಿಗರ ವಜಾ ಖಂಡಿಸಿ ಕರವೇ ಪ್ರತಿಭಟನೆ



ಬಂಧನ್ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ 30ಕ್ಕೂ ಹೆಚ್ಚು ಮಂದಿ ಕನ್ನಡಿಗರನ್ನು ಏಕಾಏಕಿ ಕೆಲಸದಿಂದ ವಜಾ ಮಾಡಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.29(ಜಿಎ)–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಬಂಧನ್ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ 30ಕ್ಕೂ ಹೆಚ್ಚು ಮಂದಿ ಕನ್ನಡಿಗರನ್ನು ಏಕಾಏಕಿ ಕೆಲಸದಿಂದ ವಜಾ ಮಾಡಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದ ವತಿಯಿಂದ ಹಳೆ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಯಾವುದೇ ಪೂರ್ವ ಮಾಹಿತಿ ಇಲ್ಲದೆ, ನೋಟಿಸ್ ಸಹ ನೀಡದೆ ಕೆಲಸದಿಂದ ವಜಾ ಮಾಡಿ, ಬೇರೆ ರಾಜ್ಯದ ನೌಕರರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ವಜಾಗೊಳಿಸಿ ಮೂರು ತಿಂಗಳಾದರೂ ಬಿಡುಗಡೆ ಪತ್ರ ನೀಡಿಲ್ಲ. ವಜಾಗೊಂಡ ನೌಕರರು ಬಿಡುಗಡೆ ಪತ್ರ ಕೇಳಲು ಹೋದಾಗ ಸರಿಯಾದ ರೀತಿಯಲ್ಲಿ ಸ್ಪಂದಿಸದೆ ಅಸಭ್ಯವಾಗಿ ವರ್ತಿಸಿದ್ದಾರೆ. ಬಿಡುಗಡೆ ಪತ್ರ ಇಲ್ಲದೆ ವಜಾಗೊಂಡ ನೌಕರರು ಬೇರೆ ಕಡೆ ಕೆಲಸ ಮಾಡಲು ಆಗುತ್ತಿಲ್ಲ. ಇದರಿಂದ ಅವರ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಕಾರಣ ಕೇಳಲು ಹೋದ ವಜಾಗೊಂಡ ನೌಕರರಿಗೆ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದ ಪದಾಧಿಕಾರಿಗಳೊಂದಿಗೆ ಅಸಭ್ಯವಾಗಿ ವರ್ತಿಸುತ್ತಿದ್ದಾರೆ. ಹೀಗಾಗಿ ಬ್ಯಾಂಕ್ ಕ್ಷಮಾಪಣೆ ಕೇಳಬೇಕು. ವಜಾಗೊಂಡ ನೌಕರರಿಗೆ ಕೂಡಲೇ ಬಿಡುಗಡೆ ಪತ್ರ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಎಂ.ಲಿಂಗರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ವಕೀಲ ಚರಣ್ ರಾಜ್.ಕೆ.ಆರ್, ಉಪಾಧ್ಯಕ್ಷ ಮಲ್ಲೇಶ್, ಆನಂದ್‌ಕುಮಾರ್‌ಗೌಡ, ಖಜಾಂಚಿ, ಮಹದೇವಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಶ್ವೇತಾ, ನೇತ್ರಾವತಿ, ವಿನೋದ್, ಕರಿಯಪ್ಪ, ಪ್ರಕಾಶ್, ರವಿಕಿರಣ್, ಮಹದೇವು, ಉಷಾ, ಮಂಜುಳಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕ್ಯಾಲೆಂಡರ್ ಬಿಡುಗಡೆ...



ಮಾರ್ಬಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ 2026ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಮಾಂತಪ್ಪ, ಉಪಾಧ್ಯಕ್ಷ ಎಂ.ಎನ್. ಕುಮಾರ, ನಿರ್ದೇಶಕರಾದ ಸಿ.ದೇವಣ್ಣ, ಚನ್ನರಾಜ ನಾಯಕ, ವೆಂಕಟಪ್ಪ, ಸೋಮಣ್ಣ, ಮಂಟೇಸ್ವಾಮಿ, ನಾಗೇಂದ್ರ ಶಿವರಾಜು, ಜವರಾಜು, ಕಮಲಮ್ಮ, ಸಂಘದ ಕಾರ್ಯದರ್ಶಿ ಚಿಕ್ಕಕುಮಾರ, ಹಾಲು ಪರೀಕ್ಷಕ ವಿ.ಕುಮಾರ, ಸಹಾಯಕ ಅಶೋಕ ಇತರರಿದ್ದರು.

ಶ್ರೀಗಳಿಂದ ಆಶೀರ್ವಾದ...



ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಮೈಸೂರು ತಾಲೂಕು ಪ್ರತಿನಿಧಿಯಾಗಿ ನೇಮಕಗೊಂಡ ಮೈಸೂರು ತಾಲೂಕು ನಾಯಕರ ಸಂಘದ ಅಧ್ಯಕ್ಷ ಉದ್ಬೂರು ಮಹದೇವಸ್ವಾಮಿ ಅವರನ್ನು ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀಗಳಾದ ಡಾ. ಪ್ರಸನ್ನಾನಂದ ಸ್ವಾಮೀಜಿ ಆಶೀರ್ವದಿಸಿದರು. ಮೈಸೂರು ತಾಲೂಕು ನಾಯಕ ಸಂಘದ ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ಜವರ ನಾಯಕ, ಚಿಕ್ಕಣ್ಣ, ಜೆ.ಕೃಷ್ಣ, ರಾಜಶೇಖರ್, ಅಂಕಪ್ಪ ಸುಂದರ್, ಶಂಕರ್, ನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com








ಪ್ರಮುಖ ಘಟನಾವಳಿಗಳು

ಮೇ

ಮೇ 2 ಮಾಜಿ ಮೇಯರ್ ಎನ್. ಪ್ರಕಾಶ್ ನಿಧನ
ಮೇ 2 ಎಸ್ಎಸ್ಎಲ್‌ಸಿ ಫಲಿತಾಂಶ: 22 ಮಂದಿಗೆ 625ಕ್ಕೆ 625 ಅಂಕ
ಮೇ 2 ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಭೀಕರ ಹತ್ಯೆ
ಮೇ 3 ಮೈಸೂರು ದಸರಾ ವೇಳೆ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ
ಮೇ 4 ಪಹಲ್ಗಾಮ್ ಉಗ್ರರ ದಾಳಿ: ಭಾರತ-ಪಾಕ್ ನಡುವೆ ಹೆಚ್ಚಿದ ಉದ್ವಿಗ್ನತೆ : ವಾಯು ಸೇನೆ ಮುಖ್ಯಸ್ಥರಿಂದ ಪ್ರಧಾನಿ ನರೇಂದ್ರ ಮೋದಿ ಭೇಟಿ
ಮೇ 5 ವರುಣಾ ಬಳಿ ಮಚ್ಚು, ಲಾಂಗ್‌ನಿಂದ ಕೊಚ್ಚಿ ರೌಡಿಶೀಟರ್ ಕಾರ್ತಿಕ್ ಭೀಕರ ಹತ್ಯೆ
ಮೇ 6 ಭಾರತ-ಪಾಕ್ ಉದ್ವಿಗ್ನತೆ : 1971ರ ನಂತರ ಇದೇ ಮೊದಲು ದೇಶದ 224 ಜಿಲ್ಲೆಗಳಲ್ಲಿ ಬೃಹತ್ ನಾಗರಿಕ ರಕ್ಷಣಾ ಮಾಕ್ ಡ್ರಿಲ್, ಸೈರನ್, ಲೈಟ್ ಆಫ್...
ಮೇ 6 ಅಕ್ರಮ ಗಣಿಗಾರಿಕೆ: ಶಾಸಕ ಜನಾರ್ಧನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ


ಜನಾರ್ದನ ರೆಡ್ಡಿ

ಮೇ 6 ರೌಡಿ ಶೀಟರ್ ಕಾರ್ತಿಕ್ ಹತ್ಯೆ ಪ್ರಕರಣ : ಮಹಿಳೆ ಸೇರಿ 6 ಮಂದಿ ಬಂಧನ
ಮೇ 7 ಪಹಲ್ಗಾಮ್ ಉಗ್ರರ ದಾಳಿಗೆ ಭಾರತ ಪ್ರತೀಕಾರ ಆಪರೇಷನ್ ಸಿಂಧೂರ್
ಮೇ 8 ಭಾರತದ ದಾಳಿಗೆ ಪತರಗುಟ್ಟಿದ ಪಾಕಿಸ್ತಾನ ಅಡಗುತಾಣದಲ್ಲಿ ಆಶ್ರಯ ಪಡೆದ ಪಾಕ್ ಪ್ರಧಾನಿ, ಲಾಹೋರ್, ಕರಾಚಿ, ಇಸ್ಲಾಮಾಬಾದ್, ಪೇಶಾವರ್, ರಾವಲ್ಪಿಂಡಿಗಳಲ್ಲಿ ಭಾರತದ ಕ್ಷಿಪಣಿಗಳ ರುದ್ರನರ್ತನ


ಡಾ.ಅಯ್ಯಪ್ಪನ್

ಮೇ 9 ಗಡಿಯುದ್ದಕ್ಕೂ ಪಾಕ್ ಅಪ್ರಚೋದಿತ ಶೆಲ್, ಡ್ರೋನ್ ದಾಳಿ, ಭಾರತೀಯ ಸೇನೆಯಿಂದ ತಕ್ಕ ಪ್ರತ್ಯುತ್ತರ
ಮೇ 10 ಭಾರತ-ಪಾಕ್ ಕದನ ವಿರಾಮ
ಮೇ 10 ಕಣ್ಮರೆಯಾಗಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕೃಷಿ ವಿಜ್ಞಾನಿ ಡಾ. ಸುಬ್ಬಣ್ಣ ಅಯ್ಯಪ್ಪನ್ ಮೃತದೇಹ ಶ್ರೀರಂಗಪಟ್ಟಣ ಬಳಿ ಕಾವೇರಿ ನದಿಯಲ್ಲಿ ಪತ್ತೆ



ಮೇ 11 ಬ್ರಹ್ಮೋಸ್ ಕ್ಷಿಪಣಿ ಉತ್ಪಾದನಾ ಘಟಕ ಉದ್ಘಾಟನೆ
ಮೇ 12 ಟೆಸ್ಟ್ ಕ್ರಿಕೆಟ್‌ಗೆ ವಿರಾಟ್ ಕೊಹ್ಲಿ ವಿದಾಯ
ಮೇ 12 ಕಾಮಿಡಿ ಕಿಲಾಡಿಗಳು ಖ್ಯಾತಿಯ ರಾಕೇಶ್ ಪೂಜಾರಿ ನಿಧನ


ರಾಕೇಶ್ ಪೂಜಾರಿ

ಮೇ 13 ಆಪರೇಷನ್ ಸಿಂಧೂರ ವಿಚಾರವಾಗಿ ಪಂಜಾಬ್ ಆದಂಪುರ್ ವಾಯುನೆಲೆಯಲ್ಲಿ ಯೋಧರಿಗೆ ಮೋದಿ ಸೆಲ್ಯೂಟ್
ಮೇ 14 ಮುಡಾ ಈಗ ಎಂಡಿಎ
ಮೇ 14 ಮಡಿಕೇರಿಯಲ್ಲಿ ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆತ ಪ್ರಕರಣದ ಪ್ರಮುಖ ಆರೋಪಿ ಶಂಭು ಭೀಕರ ಹತ್ಯೆ
ಮೇ 15 ನಮ್ಮ ತಲೆ ಮೇಲೆ ಹೊಡೆದರು! ನಾವು ಅವರ ಎದೆ ಸೀಳಿದೆವು!! ಪಾಕ್ ವಿರುದ್ಧ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಘರ್ಜನೆ
ಮೇ 17 ಗ್ಯಾರಂಟಿಗೆ ಇಲ್ಲಿಯವರೆಗೆ ಕೊಟ್ಟಿದ್ದು 90000 ಕೋಟಿ: ಮುಖ್ಯಮಂತ್ರಿ ಸಿದ್ದರಾಮಯ್ಯ
ಮೇ 18 ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಕೀಮೋಥೆರಪಿ ಸೌಲಭ್ಯ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್
ಮೇ 18 ನಿವೃತ್ತ ನ್ಯಾಯಮೂರ್ತಿ ಎಸ್.ಆರ್.ನಾಯಕ್ ನಿಧನ
ಮೇ 20 ಹೊಸಪೇಟೆ : ಗ್ಯಾರಂಟಿ ಸರ್ಕಾರದ ಸಾಧನೆ ಸಮರ್ಪಣೆ



ಮೇ 21 ಕನ್ನಡದ ಸಾಹಿತಿ ಭಾನು ಮುಷ್ತಾಕ್‌ರ 'ಹಾರ್ಟ್ ಲ್ಯಾಂಪ್' ಕೃತಿಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ, ಭಾನು ಮುಷ್ತಾಕ್‌ರ ಕೃತಿಯನ್ನು ಕನ್ನಡದಿಂದ ಇಂಗ್ಲೀಷ್‌ಗೆ ಅನುವಾದಿಸಿದ್ದು ಕೊಡಗಿನ ಪ್ರತಿಭೆ ದೀಪಾ ಭಸ್ತಿ
ಮೇ 21 ಗೃಹ ಸಚಿವ ಡಾ.ಜಿ.ಪರಮೇಶ್ವರ್ ಒಡೆತನದ ಸಿದ್ದಾರ್ಥ ಶಿಕ್ಷಣ ಸಮೂಹ ಸಂಸ್ಥೆಗಳ ಮೇಲೆ ಇಡಿ ದಾಳಿ
ಮೇ 23 ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಡೇ ಕೇರ್ ಕಿಮೋಥೆರಪಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ
ಮೇ 24 ಹೆಚ್.ಡಿ.ಕೋಟೆ: ಪ್ರಿಯಕರನೊಂದಿಗೆ ಹಿರಿಯ ಪುತ್ರಿ ವಿವಾಹ, ಆಕೆಯ ತಂದೆ-ತಾಯಿ, ತಂಗಿ ಜಲಾಶಯಕ್ಕೆ ಹಾರಿ ಆತ್ಮಹತ್ಯೆ
ಮೇ 25 ಕೊಡಗಿನಲ್ಲಿ ರಣ ಮಳೆಗೆ ಜನ ತತ್ತರ
ಮೇ 27 ಪಕ್ಷ ವಿರೋಧಿ ಚಟುವಟಿಕೆ: ಬಿಜೆಪಿಯಿಂದ ಶಾಸಕರಾದ ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್ ಉಚ್ಚಾಟನೆ
ಮೇ 27 ನಟ ಅನಂತ್‌ನಾಗ್ ಸೇರಿ 71 ಮಂದಿ ಗಣ್ಯರಿಗೆ ಪದ್ಮ ಪ್ರಶಸ್ತಿ ಪ್ರದಾನ
ಮೇ 30 ಖ್ಯಾತ ಸಾಹಿತಿ ಡಾ. ಹೆಚ್.ಎಸ್. ವೆಂಕಟೇಶಮೂರ್ತಿ ನಿಧನ

ಜೂನ್

ಜೂ.2 ಜಯಪುರ ಬಳಿ ಪತ್ತೆಯಾದ ಅರೆಬೆಂದ ವ್ಯಕ್ತಿ ದೇಹದ ರಹಸ್ಯ ಬಯಲು; ಬೋಗಾದಿ ಬಳಿಯ ಲಾಡ್ಜ್‌ನ ಮ್ಯಾನೇಜರ್ ಜೂಜುಕೋರರಿಂದ ಹತ್ಯೆ
ಜೂ.3 18 ವರ್ಷಗಳ ಬಳಿಕ ಚೊಚ್ಚಲ ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ
ಜೂ.3 ಮೈಸೂರಲ್ಲಿ ಆರ್‌ಸಿಬಿ ಜಯಘೋಷ
ಜೂ.4 18 ವರ್ಷದ ನಂತರ ಚೊಚ್ಚಲ ಐಪಿಎಲ್ ಗೆದ್ದ ಆರ್‌ಸಿಬಿ ಸಂಭ್ರಮ 18 ಗಂಟೆಯೂ ಇರಲಿಲ್ಲ. ತವರು ಬೆಂಗಳೂರಲ್ಲಿ ವಿಜಯೋತ್ಸವ ವೇಳೆ ನೂಕು-ನುಗ್ಗಲು, ಕಾಲ್ತುಳಿತದಲ್ಲಿ 11 ಮಂದಿ ಅಭಿಮಾನಿಗಳ ದಾರುಣ ಸಾವು
ಜೂ.5 ಆರ್‌ಸಿಬಿ ವಿಜಯೋತ್ಸವದ ವೇಳೆ ನೂಕು-ನುಗ್ಗಲು, ಕಾಲ್ತುಳಿತದಿಂದ 11 ಮಂದಿ ಅಭಿಮಾನಿಗಳ ಸಾವಿನ ಹಿನ್ನೆಲೆಯಲ್ಲಿ ಹೈಕೋರ್ಟ್ ನೋಟೀಸ್; ಎಚ್ಚೆತ್ತ ಸರ್ಕಾರದಿಂದ ಕಠಿಣ ಕ್ರಮ, ಬೆಂಗಳೂರು ಪೊಲೀಸ್ ಆಯುಕ್ತ ದಯಾನಂದ್ ಅಮಾನತು



ಜೂ.6 ಬೆಂಗಳೂರು ಕಾಲ್ತುಳಿತ ದುರಂತ ಪ್ರಕರಣ: ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ಸೇರಿ ನಾಲ್ವರ ಬಂಧನ
ಜೂ. 7 ಮೈಸೂರಲ್ಲಿ ಮುಸ್ಲಿಂ ಬಾಂಧವರ ಬಕ್ರೀದ್ ಸಾಮೂಹಿಕ ಪ್ರಾರ್ಥನೆ
ಜೂ.8 ಹಾಸನ : ನೀರಿನ ತೊಟ್ಟಿಯಲ್ಲಿ ಮುಳುಗಿಸಿ ಮಗಳ ಕೊಂದ ತಾಯಿ
ಜೂ.11 ವಾಲ್ಮೀಕಿ ಹಗರಣ: ಕಾಂಗ್ರೆಸ್ ಸಂಸದ ತುಕಾರಾಂ, ಶಾಸಕರಾದ ಭರತ್‌ರೆಡ್ಡಿ, ನಾಗೇಂದ್ರ, ಕಂಪ್ಲಿ ಗಣೇಶ್, ಎನ್.ಟಿ. ಶ್ರೀನಿವಾಸ್ ಮನೆ, ಕಚೇರಿಗಳ ಮೇಲೆ ಇಡಿ ದಾಳಿ



ಜೂ.12 ಗುಜರಾತ್‌ನ ಅಹಮದಾಬಾದ್‌ನಲ್ಲಿ ಲಂಡನ್‌ಗೆ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಏರ್ ಇಂಡಿಯಾ ವಿಮಾನ ಪತನ, 241 ಮಂದಿ ಸಜೀವ ದಹನ, ಗುಜರಾತ್ ಮಾಜಿ ಸಿಎಂ ವಿಜಯ್ ರೂಪಾನಿ ಸಾವು
ಜೂ.12 ವಿಮಾನ ದುರಂತದಲ್ಲಿ ಮಡಿದವರ ಕುಟುಂಬಕ್ಕೆ ತಲಾ 1 ಕೋಟಿ ಪರಿಹಾರ ಟಾಟಾ ಗ್ರೂಪ್‌ನಿಂದ ಘೋಷಣೆ
ಜೂ.15 ಉತ್ತರಕಾಂಡ: ಕೇದಾರನಾಥದಲ್ಲಿ ಹೆಲಿಕಾಪ್ಟರ್ ಪತನ: ಪೈಲಟ್ ಸೇರಿ 7 ಮಂದಿ ದುರ್ಮರಣ



ಜೂ.16 ನಿಕೋಶಿಯಾ : ಪ್ರಧಾನಿ ನರೇಂದ್ರ ಮೋದಿಗೆ ಸೈಪ್ರಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ
ಜೂ.19 ಗುಂಡ್ಲುಪೇಟೆ : ಅರಣ್ಯದಂಚಿನ ಜಮೀನಲ್ಲಿ ಹುಲಿ ದಾಳಿಗೆ ಮಹಿಳೆ ಬಲಿ
ಜೂ.21 ಮೈಸೂರಲ್ಲಿ ಯೋಗ ಸಂಭ್ರಮ



ಜೂ.22 ಮಾಜಿ ಪ್ರಧಾನಿ ದೇವೇಗೌಡರಿಗೆ ಶ್ರೀ ಗಂಗ ಸಾಮ್ರಾಟ ಶ್ರೀ ಪುರುಷ ಪ್ರಶಸ್ತಿ ಪ್ರದಾನ
ಜೂ.22 ಇಸ್ರೇಲ್-ಇರಾನ್ ಕದನ : ಇರಾನ್‌ನ 3 ಅಣುಸ್ಥಾವರಗಳು ಧ್ವಂಸ
ಜೂ.23 ಟ್ರಂಪ್ ವಿರುದ್ಧ ಇರಾನ್ ಪ್ರತೀಕಾರ, ಕತಾರ್, ಇರಾಕ್‌ನಲ್ಲಿರುವ ಅಮೇರಿಕ ಸೇನಾ ನೆಲೆಗಳ ಮೇಲೆ ಕ್ಷಿಪಣಿ ದಾಳಿ



ಜೂ.24 ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅಂತರಿಕ್ಷಯಾನ
ಜೂ.26 ಮಲೆ ಮಹದೇಶ್ವರ ವನ್ಯಧಾಮದ ಐದು ಹುಲಿಗಳು ಧಾರುಣ ಸಾವು
ಜೂ.28 ಚಾಮರಾಜನಗರ: ವಿಷ ಪ್ರಾಶನದಿಂದ ಐದು ಹುಲಿಗಳ ಸಾವು ಪ್ರಕರಣ; ಮೂವರು ಆರೋಪಿಗಳ ಬಂಧನ



ಜೂ.29 ಪುರಿಯ ಗುಂಡಿಚಾ ದೇವಸ್ಥಾನ ಹೊರಗೆ ಕಾಲ್ತುಳಿತದಲ್ಲಿ ಮೂವರು ಸಾವು
ಜೂ.30 ಕೆಆರ್‌ಎಸ್ ಜಲಾಶಯ ದಲ್ಲಿ ತುಂಬಿ ತುಳುಕುತ್ತಿರುವ ಕಾವೇರಿಗೆ ಸಿಎಂ ಸಿದ್ದರಾಮಯ್ಯ ಬಾಗಿನ ಅರ್ಪಣೆ
ಜೂ.30 ಪತ್ನಿ ಜೀವಂತವಾಗಿದ್ದರೂ ಆಕೆಯ ಕೊಂದ ಆರೋಪದಲ್ಲಿ ಪತಿ ಬಂಧನ ಪ್ರಕರಣ : ಇನ್ಸ್‌ಪೆಕ್ಟರ್ ಬಿ.ಜಿ. ಪ್ರಕಾಶ್ ಸೇರಿ ಮೂವರು ಅಧಿಕಾರಿಗಳ ಅಮಾನತು

ಜುಲೈ


ಜು. 1 ಚಿನ್ನಸ್ವಾಮಿ ಸ್ಟೇಡಿಯಂ ಕಾಲ್ತುಳಿತ ದುರಂತ ಪ್ರಕರಣ ಹಿರಿಯ ಐಪಿಎಸ್ ಅಧಿಕಾರಿ ವಿಕಾಸ್‌ಕುಮಾರ್ ಅಮಾನತು ರದ್ದು
ಜು. 2 ಐದು ವರ್ಷವೂ ನಾನೇ ಸಿಎಂ! ಸಿದ್ದರಾಮಯ್ಯ ಘೋಷಣೆ
ಜು. 2 ಗುಂಡ್ಲುಪೇಟೆ : ಹುಲಿ, ಚಿರತೆ ಆಯ್ತು ಈಗ ಕೋತಿಗಳ ಮಾರಣ ಹೋಮ
ಜು. 3 ಮೈಸೂರು ಜಿಮ್‌ನಲ್ಲಿ ಹೃದಯಾಘಾತದಿಂದ ಹಾಸನ ಮೂಲದ ಇಂಜಿನಿಯರ್ ಸಾವು
ಜು. 3 ಹಾಸನದಲ್ಲಿ ಕಳೆದ 24 ಗಂಟೆಯಲ್ಲಿ ಮತ್ತೆ ನಾಲ್ವರು ಹೃದಯಾಘಾತದಿಂದ ಸಾವು
ಜು. 4 ಐದು ಹುಲಿ ಸಾವು ಪ್ರಕರಣದಲ್ಲಿ ಕರ್ತವ್ಯ ಲೋಪ, ಇಬ್ಬರು ಅರಣ್ಯಾಧಿಕಾರಿಗಳ ಅಮಾನತು, ಡಿಸಿಎಫ್ ವಿರುದ್ಧ ಕ್ರಮಕ್ಕೆ ಕೇಂದ್ರಕ್ಕೆ ಪ್ರಸ್ತಾವನೆ



ಜು. 5 'ಹಿ ಹಿಡನ್ ಲೈಫ್ ಆಫ್ ಎ ಯೋಗಿ' ಡಾ.ಕೆ.ಬಿ.ಗಣಪತಿಯವರ ಪುಸ್ತಕ ಬಿಡುಗಡೆ
ಜು. 6 ಮೈಸೂರು : ಅತೀ ವೇಗದ ಅಜಾಗರೂಕ ಚಾಲನೆಗೆ ಇಬ್ಬರ ಸಾವು
ಜು. 7 ಮೈಸೂರು ಜಿಲ್ಲೆಯಲ್ಲಿ ಆರೇ ತಿಂಗಳಲ್ಲಿ 9428 ಮಂದಿಗೆ ನಾಯಿ ಕಡಿತ
ಜು. 8 ಕೆಆರ್‌ಎಸ್ ಹಿನ್ನೀರಿನಲ್ಲಿ ಪುಂಡ-ಪೋಕರಿಗಳು, ಕುಡುಕರು, ಹೇಸಿಗೆ ಮಾಡುವವರಿಗೆ ಬ್ರೇಕ್, ಇಲವಾಲ ಪೊಲೀಸರ ಕಾರ್ಯಾಚರಣೆ : ಐವರ ಬಂಧನ
ಜು. 10 ಚಾಮರಾಜನಗರ : ವಿಜೃಂಭಣೆಯ ಶ್ರೀ ಚಾಮರಾಜೇಶ್ವರಸ್ವಾಮಿ ರಥೋತ್ಸವ



ಜು. 10 ಅಮಾಯಕರ ಮಹಿಳೆಯರ ಬಳಸಿಕೊಂಡು ದಾಖಲೆ ತಿದ್ದಿ ಭೂ ಮಾಫಿಯಾದಿಂದ ಕೋಟ್ಯಾಂತರ ಮೌಲ್ಯದ ಆಸ್ತಿ ಕಬಳಿಕೆ



ಜು. 13 ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ ಇನ್ನಿಲ್ಲ
ಜು. 14 ಖ್ಯಾತ ಚಲನಚಿತ್ರ ನಟಿ ಬಿ.ಸರೋಜಾದೇವಿ ವಿಧಿವಶ


ಬಿ.ಸರೋಜಾದೇವಿ

ಜು. 16 ಚೆಲುವಾಂಬ ಆಸ್ಪತ್ರೆಯಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಕಳಪೆ ಆಹಾರ ಪೂರೈಕೆ, ಇಬ್ಬರು ಸಿಬ್ಬಂದಿ ಅಮಾನತು
ಜು. 17 ಚಾಮುಂಡಿಬೆಟ್ಟದಲ್ಲಿ ವಿಜೃಂಭಣೆಯ ಚಾಮುಂಡೇಶ್ವರಿ ವರ್ಧಂತಿ ಉತ್ಸವ
ಜು. 17 ಮೈಸೂರಿಗೆ ಭಾರತದ 3ನೇ ಸ್ವಚ್ಛ ನಗರ ಪ್ರಶಸ್ತಿ
ಜು. 17 ಮಂಗಳೂರು: ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರಿ ಭೂಕುಸಿತ : ಸಂಚಾರ ಬಂದ್
ಜು.20 ಮೀನಾಕ್ಷಿಪುರ ಕೆಆರ್‌ಎಸ್ ಹಿನ್ನೀರಿನಲ್ಲಿ ಮೂವರು ನರ್ಸಿಂಗ್ ವಿದ್ಯಾರ್ಥಿಗಳು ಜಲಸಮಾಧಿ
ಜು. 25 ಮಡಿಕೇರಿ : ಕಾರಿಗೆ ಕ್ಯಾಂಟರ್ ಡಿಕ್ಕಿ : ಕೊಡಗಿನ ನಾಲ್ವರು ದುರ್ಮರಣ



ಜು. 26 ಮೈಸೂರಲ್ಲಿ ಭಾರೀ ಪ್ರಮಾಣದ ಡ್ರಗ್ಸ್!
ಜು. 26 ವಿಜ್ಞಾನಿ ಪ್ರೊ.ಕೆ.ಎಸ್. ರಂಗಪ್ಪನವರಿಗೆ ಭಾರತದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಅತ್ಯುನ್ನತ ಗೌರವ
ಜು. 27 ಮೈಸೂರಲ್ಲಿ ಭಾರಿ ಪ್ರಮಾಣದ ಡ್ರಗ್ಸ್ ಪತ್ತೆ ಪ್ರಕರಣ, ಓರ್ವ ಸ್ಥಳೀಯ, ಮೂವರು ದಂಧೆಕೋರರ ಬಂಧನ
ಜು. 28 ಹಣ ಡಬ್ಲಿಂಗ್ ದಂಧೆ ಪ್ರಕರಣ : ಚಾ.ನಗರದ ಸೆನ್ ವಿಭಾಗದ ಎಸ್‌ಐ ಸೇರಿ ನಾಲ್ವರು ಅಮಾನತು
ಜು. 29 ಮೈಸೂರಲ್ಲಿ ಮುಂಬೈ ಪೊಲೀಸರ ಕಾರ್ಯಾಚರಣೆ




ವೇಳೆ ಸಿಕ್ಕಿದ್ದು, ಬರೋಬ್ಬರಿ 390 ಕೋಟಿ ಮೌಲ್ಯದ ಡ್ರಗ್ಸ್
ಜು. 31 ಹೊರಗಿಂದ ಸಾಮಾನ್ಯ ಶೆಡ್, ಒಳಗಡೆ ಎಸಿಯಡಿ ಕೂಲ್ ಆಗಿ ನಡೆತಿತ್ತು ಡ್ರಗ್ಸ್ ದಂಧೆ

ಆಗಸ್ಟ್

ಆ. 1 ಮನೆ ಕೆಲಸದ ಮಹಿಳೆ ಮೇಲೆ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ


ಪ್ರಜ್ವಲ್ ರೇವಣ್ಣ

ಆ. 1 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟ : ಶಾರುಖ್ ಖಾನ್, ವಿಕ್ರಾಂತ್ ಮೆಸ್ಸಿ ಅತ್ಯುತ್ತಮ ನಟರು; ರಾಣಿ ಮುಖರ್ಜಿ ಅತ್ಯುತ್ತಮ ನಟಿ
ಆ. 1 ಕನ್ನಡಕ್ಕೆ ರಾಷ್ಟ್ರ ಪ್ರಶಸ್ತಿ ತಂದ ಕಂದೀಲು ಚಲನಚಿತ್ರ
ಆ. 2 ಮನೆ ಕೆಲಸದ ಮಹಿಳೆ ಮೇಲೆ ಅತ್ಯಾಚಾರ ಪ್ರಕರಣ : ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವನಪೂರ್ತಿ ಜೈಲು
ಆ. 4 ಮೈಸೂರು ದಸರಾ ಉತ್ಸವಕ್ಕೆ ಮುನ್ನುಡಿ: ಗಜಪಡೆ ಪುರ ಪ್ರವೇಶ
ಆ. 4 ಜಾರ್ಖಂಡ್ ಮಾಜಿ ಸಿಎಂ ಶಿಬು ಸೂರೇನ್ ನಿಧನ


ಶಿಬು ಸೂರೇನ್

ಆ. 5 ಉತ್ತರಕಾಶಿಯಲ್ಲಿ ಭೀಕರ ಜಲಸ್ಫೋಟ : ಜಲಪ್ರಳಯಕ್ಕೆ ಕೊಚ್ಚಿ ಹೋದ ಗ್ರಾಮ



ಆ. 6 ಯೂ ಟ್ಯೂಬರ್‌ಗಳ ಮೇಲೆ ಹಲ್ಲೆ : ಧರ್ಮಸ್ಥಳ ಉದ್ವಿಗ್ನ
ಆ. 7 ಸ್ಟೇರಿಂಗ್ ಲಾಕ್ ಆಗಿ ಚಾಮುಂಡಿಬೆಟ್ಟದಲ್ಲಿ ಉರುಳಿ ಬಿದ್ದ ಬಸ್
ಆ. 8 ಮತ ಕದ್ದು ಮೋದಿ ಪ್ರಧಾನಿಯಾಗಿದ್ದಾರೆ : ರಾಹುಲ್ ಆರೋಪ
ಆ. 10 ಪ್ರಧಾನಿ ಮೋದಿಯಿಂದ ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಚಾಲನೆ
ಆ. 11 ಸೆಪ್ಟೆಂಬರ್ ಕ್ರಾಂತಿ ಭವಿಷ್ಯ ನುಡಿದಿದ್ದ ಕೆ.ಎನ್. ರಾಜಣ್ಣ ತಲೆ ದಂಡ
ಆ. 14 ದರ್ಶನ್‌ಗೆ ಮತ್ತೆ ಜೈಲು ದರ್ಶನ
ಆ. 17 ತಾಯ್ನಾಡಿಗೆ ಮರಳಿದ ಗಗನಯಾತ್ರಿ ಶುಭಾಂಶು ಶುಕ್ಲಾ
ಆ. 18 ಬ್ರಿಟನ್ ಪ್ರಧಾನಿ ರಿಷಿ ಸುನಕ್ ತಂದೆ-ತಾಯಿ ಮೈಸೂರಿಗೆ ಭೇಟಿ
ಆ. 22 ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟನೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕೃತ ಘೋಷಣೆ



ಆ. 23 ಬುರುಡೆ ಮಾಸ್ಕ್‌ಮ್ಯಾನ್ ಅಲಿಯಾಸ್ ಚಿನ್ನಯ್ಯ ಬಂಧನ
ಆ. 26 ನಮಾಮಿ ಗಂಗೆ ಮಾದರಿ ಕಾವೇರಿ ಶುದ್ಧೀಕರಣ : ಪ್ರಧಾನಿ ಮೋದಿ 3000 ಕೋಟಿ ರೂ. ಬಿಡುಗಡೆ

ಕುವೆಂಪು ಕೃತಿಗೆ ಮೊದಲು ಗೌರವ ಸಲ್ಲಿಸಿದ್ದು ಮಂಡ್ಯ


ಪತ್ರಕರ್ತರ ಭವನದಲ್ಲಿ ವಿಶ್ವಮಾನವ ದಿನಾಚರಣೆ ನಡೆಯಿತು.

ಮಂಡ್ಯ, ಡಿ.29– ರಾಷ್ಟ್ರಕವಿ ಕುವೆಂಪು ಅವರ ಕೃತಿಯನ್ನು ಮೆಚ್ಚಿ ಮೊದಲು ಗೌರವ ಸಲ್ಲಿಸಿದ್ದು ಮಂಡ್ಯ ಜನತೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಪಿ.ಜೆ.ಚೈತನ್ಯ ಕುಮಾರ್ ಹೆಮ್ಮೆಯಿಂದ ನುಡಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ವಿಶ್ವ ಮಾನವ ದಿನಾಚರಣೆಯಲ್ಲಿ ಕುವೆಂಪು ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, 1954ರಲ್ಲಿ ಕುವೆಂಪು ಅವರ ಕೃತಿಯನ್ನು ಮೆಚ್ಚಿದ ಮಂಡ್ಯ ಜಿಲ್ಲೆಯ ಜನತೆ ಮೆರವಣಿಗೆ ಮಾಡಿ ಗೌರವ ಸಲ್ಲಿಸಿದ್ದರು. ಜಿಲ್ಲೆಯ ಅವರ ಸಮಕಾಲೀನರಾದ ಟಿ.ಮಲ್ಲಯ್ಯ, ಎಂ.ತಮ್ಮಯ್ಯ, ಆದಿಚುಂಚನಗಿರಿ ಪೀಠಾಧ್ಯಕ್ಷರಾಗಿದ್ದ ಚಂದ್ರಶೇಖರಾನಂದನಾಥ ಸ್ವಾಮೀಜಿ ಕುವೆಂಪು ಅವರ ಸಹಪಾಠಿಗಳಾಗಿದ್ದರು. ಕುವೆಂಪು ಅವರಿಗೆ ಮಂಡ್ಯ ಜಿಲ್ಲೆಯ ಒಡನಾಟ ಹೆಚ್ಚಿತ್ತು ಎಂದರು.

ಅಧ್ಯಕ್ಷ ಕೆ.ಎನ್.ರಾಘವೇಂದ್ರ ಮಾತನಾಡಿ, ದೇಶಕ್ಕೆ ಕೊಡುಗೆ ನೀಡಿದ ಮಹನೀಯರನ್ನು ಸ್ಮರಿಸುವ ಕೆಲಸಕ್ಕೆ ನೂತನ ಆಡಳಿತ ಮಂಡಳಿ ಮುಂದಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ ನಿರಂತರ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗುವುದು ಎಂದರು.

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಮಾತನಾಡಿ, ಕುವೆಂಪು ಅವರು ಮನುಜಮತ ವಿಶ್ವಪಥ ಸಂದೇಶವನ್ನು ಇಡೀ ವಿಶ್ವಕ್ಕೆ ಸಾರಿದರು. ಅವರ ಆಚಾರ ವಿಚಾರಗಳನ್ನು ನಾವೆಲ್ಲಾ ಪಾಲಿಸಬೇಕು ಎಂದರು.

ಉಪಾಧ್ಯಕ್ಷ ಕೆ.ಸಿ.ಮಂಜುನಾಥ್ ಮಾತನಾಡಿ, ಕುವೆಂಪು ಅವರು ಕನ್ನಡ ಸಾಹಿತ್ಯದಲ್ಲಿ ಅಗ್ರಗಣ್ಯ ಕವಿಯಾಗಿದ್ದಾರೆ. ಸಾಹಿತ್ಯದ ವಿವಿಧ ಮಜಲುಗಳ ಮೂಲಕ ಭಾಷೆ ಸಮೃದ್ಧವಾಗಿ ಬೆಳೆಯಲು ಶ್ರಮಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬ ನಾಣ್ನುಡಿಯಂತೆ ಕುವೆಂಪು ಅವರು ಮೈಸೂರು ವಿವಿ ಸೇರಿದಂತೆ ಕೈಯಾಡಿಸದ ಕ್ಷೇತ್ರವಿಲ್ಲ ಎಂದು ಸ್ಮರಿಸಿದರು.

ರಾಷ್ಟ್ರೀಯ ಸಮಿತಿ ಸದಸ್ಯ ಬಸವರಾಜ ಹೆಗ್ಗಡೆ, ಎಂ.ಎಸ್.ಶಿವಪ್ರಕಾಶ್, ಪ್ರಧಾನ ಕಾರ್ಯದರ್ಶಿ ಡಿ.ಶಶಿಧರ, ಉಪಾಧ್ಯಕ್ಷರಾದ ರವಿ, ಲೋಕೇಶ್ ಚಿನಕುರಳಿ, ನಿಕಟಪೂರ್ವ ಅಧ್ಯಕ್ಷ ಕೆ.ಎನ್. ನವೀನ್ ಕುಮಾರ್, ಕಾರ್ಯದರ್ಶಿ ಹೆಚ್.ಶಿವರಾಜು, ಖಜಾಂಚಿ ನಂಜುಂಡಸ್ವಾಮಿ ಇತರರಿದ್ದರು.

ಕುವೆಂಪು ಅವರಿಗೆ ಭಾರತ ರತ್ನ ನೀಡಲು ಒತ್ತಾಯ


ಶ್ರೀರಂಗಪಟ್ಟಣದಲ್ಲಿ ನಡೆದ ಕುವೆಂಪು ಜಯಂತಿಯಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಶ್ರೀರಂಗಪಟ್ಟಣ, ಡಿ.29– ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯಿಕ ಸಾಧನೆ ಹಾಗೂ ಅವರು ಸಾರಿದ ವಿಶ್ವಮಾನವ ಸಂದೇಶ ಗುರುತಿಸಿ ಕೇಂದ್ರ ಸರ್ಕಾರ ಅವರಿಗೆ ಮರಣೋತ್ತರವಾಗಿ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಪೀಠದ ಪೀಠಾಧ್ಯಕ್ಷ ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ಒತ್ತಾಯಿಸಿದರು.

ಪಟ್ಟಣದ ಕುವೆಂಪು ಪ್ರತಿಮೆ ಆವರಣದಲ್ಲಿ ಆಯೋಜಿಸಿದ್ದ ಕುವೆಂಪು ಜಯಂತಿಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಕುವೆಂಪು ಅವರು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾದವರಲ್ಲ. ಅವರು ವಿಶ್ವಮಾನವ. ಅವರ ಆಲೋಚನೆ ಮತ್ತು ವಿಚಾರಧಾರೆಗಳನ್ನು ಅಳವಡಿಸಿಕೊಂಡರೆ ದೇಶದಲ್ಲಿ ಸಮಾನತೆ ನೆಲೆಸಲು ಸಾಧ್ಯ. ಭಾರತೀಯರ ಮಾನವೀಯ ಶ್ರೇಷ್ಠ ಗುಣಗಳು ವಿಶ್ವಗುಣವಾಗಬೇಕು ಎಂದು ಆಶಿಸಿದ ಮಹಾನ್ ಚೇತನಕ್ಕೆ ಭಾರತ ರತ್ನ ನೀಡುವುದು ಹೆಮ್ಮೆಯ ವಿಷಯ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಶಾಸಕಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಕುವೆಂಪು ಅವರಂತೆ ಸರಳ ಚಿಂತನೆ ಮತ್ತು ಜೀವನ ಅಳವಡಿಸಿಕೊಂಡರೆ ಬದುಕು ಸಾರ್ಥಕವಾಗುತ್ತದೆ. ಸರ್ವ ಧರ್ಮ ಸಮನ್ವಯದ ಶಾಂತಿಯ ತೋಟವನ್ನು ನಾವೆಲ್ಲರೂ ಸೇರಿ ಉಳಿಸಿ ಬೆಳೆಸಬೇಕಿದೆ ಎಂದರು.

ಗಾಂಧಿವಾದಿ ಡಾ.ಸುಜಯಕುಮಾರ್ ಕುವೆಂಪು ಸಾಹಿತ್ಯದ ವಿಶ್ವಮಾನವ ಪ್ರಜ್ಞೆ ಕುರಿತು ಪ್ರಧಾನ ಭಾಷಣ ಮಾಡಿದರು. ಕಾರ್ಯಕ್ರಮಕ್ಕೂ ಮುನ್ನಾ ತಾಲೂಕು ಕಚೇರಿಯಿಂದ ಕುವೆಂಪು ಅವರ ಭಾವಚಿತ್ರವನ್ನು ಅಲಂಕೃತ ಬೆಳ್ಳಿರಥದಲ್ಲಿ ಇರಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಗೌರವಿಸಲಾಯಿತು.

ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಸಿ.ಸ್ವಾಮಿಗೌಡ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಲ್.ದಿನೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ನಾಗರಾಜು, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಚಲುವೇಗೌಡ, ಕಸಾಪ ಅಧ್ಯಕ್ಷ ಸಿದ್ದಲಿಂಗು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಶಾಲೆಗಳ ಉನ್ನತೀಕರಣಕ್ಕೆ ಶ್ರಮಿಸಿ: ಸಿಎಸ್‌ಪಿ ಸಲಹೆ



ಸಮಾರೋಪ ಸಮಾರಂಭದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ಪಾಂಡವಪುರ, ಡಿ.29– ಗ್ರಾಮೀಣ ಸರ್ಕಾರಿ ಶಾಲೆಗಳ ಉನ್ನತೀಕರಣಕ್ಕೆ ಹಿರಿಯ ವಿದ್ಯಾರ್ಥಿಗಳು, ಪೋಷಕರು ಹಾಗೂ ಗ್ರಾಮಸ್ಥರು ಸೇರಿದಂತೆ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ಬನ್ನಂಗಾಡಿ ಗ್ರಾಮದಲ್ಲಿ ನಡೆದ ಸರ್ಕಾರಿ ಶಾಲೆ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮದ ಸಮಾರೋಪ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮದ ಸರ್ಕಾರಿ ಶಾಲೆ ಶತಮಾನೋತ್ಸವ ಪೂರೈಸಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು, ಮುಖಂಡರು, ಹಿರಿಯ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಎಲ್ಲರೂ ಜೊತೆಗೂಡಿ ಊರ ಹಬ್ಬದಂತೆ ಸಂಭ್ರಮದಿಂದ ಶತಮಾನೋತ್ಸವ ಕಾರ್ಯಕ್ರಮ ನಡೆಸುತ್ತಿರುವುದು ಶ್ಲಾಘನೀಯ. ಕಾರ್ಯಕ್ರಮಕ್ಕಾಗಿ ನಾನೂ ಸಹ ಆರ್ಥಿಕ ನೆರವು ನೀಡಿದ್ದೇನೆ. ನಮ್ಮ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದರು.

ಬನ್ನಂಗಾಡಿಗೂ ನಮ್ಮ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. ನಾನು ಶಾಸಕ, ಸಚಿವನಾಗಿ ಕೆಲಸ ಮಾಡುವಾಗ ಮತ್ತು ನಮ್ಮ ಶ್ರೀಮತಿ ನಾಗಮ್ಮ, ಅಣ್ಣನ ಮಗ ಅಶೋಕ್ ಜಿಪಂ ಸದಸ್ಯರಾಗಿ ಕೆಲಸ ಮಾಡುವ ಸಂದರ್ಭ ಈ ಭಾಗದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದೇವೆ. ಶತಮಾನೋತ್ಸವ ಸಂಭ್ರಮದ ನೆನಪಿಗಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಅನುದಾನದಲ್ಲಿ ಕಲಾ ಭವನ ನಿರ್ಮಾಣ ಮಾಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದ ಅವರು ಜೊತೆಗೆ ಶಾಲೆ ನಿರ್ಮಾಣಕ್ಕೆ ಭೂಮಿ ದಾನ ನೀಡಿದ ದಾನಿಗಳ ಹೆಸರು ಶಾಶ್ವತವಾಗಿ ನೆಲೆಸುವಂತಹ ಕೆಲಸ ಗ್ರಾಮಸ್ಥರು ಮಾಡಬೇಕು ಎಂದರು.

ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿದರು. ಇದೇ ವೇಳೆ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿ ಬಂದವು. ಸಮಾರಂಭದಲ್ಲಿ ತಾಪಂ ಮಾಜಿ ಅಧ್ಯಕ್ಷ ಬಿ.ಡಿ.ಹುಚ್ಚೇಗೌಡ, ತಾಪಂ ಮಾಜಿ ಸದಸ್ಯ ಬಿ.ಪಿ.ಶ್ರೀನಿವಾಸ್, ನಿವೃತ್ತ ಶಿಕ್ಷಕ ಶಿವೇಗೌಡ, ಜಿಲ್ಲಾ ಕುರುಬ ಸಮಾಜದ ಉಪಾಧ್ಯಕ್ಷ ಬಿ.ಕೆ. ರೇವಣ್ಣ, ವೀರಶೈವ ಮುಖಂಡ ಸಾಹಿತಿ ಸಿದ್ದಲಿಂಗಪ್ಪ, ಮುಖ್ಯ ಶಿಕ್ಷಕಿ ಸುಲೋಚನಾ, ಡೈರಿ ಅಧ್ಯಕ್ಷ ಧನಂಜಯ್ಯ, ಯಜಮಾನ್ ಕರೀಗೌಡ, ಬಿ.ಜಿ.ಪ್ರಕಾಶ್, ಲೋಕೇಶ್, ರಾಮೇಗೌಡ, ಗ್ರಾಪಂ ಮಾಜಿ ಅಧ್ಯಕ್ಷರಾದ ಪ್ರಭಾಕರ್, ಗಾಡಿಯೋಗಣ್ಣ, ಸಿಡಿಸಿ ಉಪಾಧ್ಯಕ್ಷ ಬಿ.ಕೆ.ಶ್ರೀನಿವಾಸ್, ಮುಂಖಡರಾದ ಬಿ.ಆರ್.ಪ್ರಸನ್ನ, ಅಣ್ಣಯ್ಯ, ವಿಶ್ವ, ದೇವರಾಜು, ಧನಂಜಯ್, ಸುರೇಶ್, ಬಿ.ಜೆ.ಸ್ವಾಮಿ, ವಿ.ಎ.ದಿನೇಶ್, ಐ.ಸಿ.ಪ್ರಸನ್ನ, ನಂದೀಶ್, ಕೇಬಲ್ ರವಿ, ವಾಸು, ಸಂತು ಸೇರಿದಂತೆ ಇತರರಿದ್ದರು.

ನಾಗಮಂಗಲ: ಟಿಪ್ಪರ್ ಚಾಲಕನ ಶವ ಪತ್ತೆ

ನಾಗಮಂಗಲ, ಡಿ.29– ಸೈಜುಗಲ್ಲು ಸಾಗಿಸುತ್ತಿದ್ದ ಟಿಪ್ಪರ್ ಮಗುಚಿ ಬಿದ್ದು ಜಲಸಮಾಧಿಯಾಗಿದ್ದ ಚಾಲಕನ ಶವ ಸೋಮವಾರ ಪತ್ತೆಯಾಗಿದೆ.

ತಾಲೂಕಿನ ದುಮ್ಮಸಂದ್ರ ಗ್ರಾಮದ ನಿವಾಸಿ ಲಕ್ಷ್ಮಣ್ ಶವ ಪತ್ತೆಯಾಗಿದ್ದು, ಬುಧವಾರ ರಾತ್ರಿ ದೊಡ್ಡಜಟಕ ಒಡೆಯರ ಮರದ ಬಳಿಯ ಕಲ್ಲು ಕ್ವಾರೆ ಮತ್ತು ಜಲ್ಲಿ ಕ್ರಷರ್‌ನಿಂದ ಬಸವೇಶ್ವರ ಕ್ರಷರ್‌ಗೆ ಟಿಪ್ಪರ್‌ನಲ್ಲಿ ಕಲ್ಲು ಸಾಗಿಸುವ ವೇಳೆ 100 ಅಡಿ ಮೇಲಿಂದ ನಿಯಂತ್ರಣ ಕಳೆದು ಕೊಂಡ ಟಿಪ್ಪರ್ ಚಾಲಕನ ಸಮೇತ ಕ್ವಾರೆಗೆ ಬಿದ್ದಿತ್ತು. ಈ ವೇಳೆ ಹಳ್ಳದಲ್ಲಿ ನೀರು ಶೇಖರಣೆಯಾಗಿದ್ದರಿಂದ ಲಕ್ಷ್ಮಣ್ ಶವ ಪತ್ತೆಯಾಗಿರಲಿಲ್ಲ. ಆದರೆ ಬೆಳ್ಳೂರು ಎಸ್‌ಐ ರವಿ ಕುಮಾರ್ ಕಾರ್ಯಾಚರಣೆ ನಡೆಸಿ ಹಾಗೂ ಅಗ್ನಿಶಾಮಕ ಸಿಬ್ಬಂದಿ ನೇತೃತ್ವದಲ್ಲಿ ಶುಕ್ರವಾರ ಟಿಪ್ಪರ್ ಮೇಲೆತ್ತಲಾಗಿತ್ತು. ಬಳಿಕ ಹಳ್ಳದಿಂದ ನೀರು ಹೊರ ತೆಗೆಯಲಾಗುತ್ತಿತ್ತು ಆದರೆ ಸೋಮವಾರ ಲಕ್ಷ್ಮಣ್ ಶವ ನೀರಿನಲ್ಲಿ ತೇಲುತ್ತಿತ್ತು. ಶವವನ್ನು ಆದಿಚುಂಚನಗಿರಿ ಆಸ್ಪತ್ರೆಗೆ ರವಾನಿಸಿದ ಪೊಲೀಸರು ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು.

ಸರಳ ಜೀವನಕ್ಕೆ ಕುವೆಂಪು ಅವರ ಸಂದೇಶಗಳು ಸಹಕಾರಿ


ವಿಶ್ವಮಾನವ ದಿನಾಚರಣೆಯನ್ನು ಗಣ್ಯರು ಉದ್ಘಾಟಿಸಿದರು.

ಕೆ.ಆರ್.ಪೇಟೆ, ಡಿ.29– ರಾಷ್ಟ್ರಕವಿ ಕುವೆಂಪು ಅವರ ಜೀವನ ಸಂದೇಶಗಳು ಜಾತಿ ರಹಿತ ಸಮಸಮಾಜ ನಿರ್ಮಾಣ, ಮನುಷ್ಯನ ಸರಳ ಜೀವನಕ್ಕೆ ಸಹಕಾರಿ ಎಂದು ಮೈಸೂರು ಮಹಾರಾಜ ಕಾಲೇಜಿನ ಪ್ರಾಧ್ಯಾಪಕರು ಹಾಗೂ ಸಾಹಿತಿ ಡಾ.ಗಂಗಾಧರಶೆಟ್ಟಿ ತಿಳಿಸಿದರು.

ತಾಲೂಕಿನ ಚಿಲ್ಲದಹಳ್ಳಿ ಬಳಿಯ ಶ್ರೀ ಮರಡಿಲಿಂಗೇಶ್ವರ ಕ್ಷೇತ್ರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ತಾಲೂಕು ಕಸಾಪ ವತಿಯಿಂದ ನಡೆದ ವಿಶ್ವಮಾನವ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸಾಮಾಜಿಕ ಕಟ್ಟುಪಾಡು ಹಾಗೂ ಮೌಢ್ಯದ ವಿರುದ್ಧ ತಮ್ಮ ಬರವಣಿಗೆಯ ಸಾಮಾಜಿಕ ಸಂದೇಶ ನೀಡಿದ ಕುವೆಂಪು ಅವರು ಗುಡಿ, ಚರ್ಚು, ಮಸೀದಿಗಳಲ್ಲಿರುವ ಪೌರೋಹಿತಶಾಹಿ ವ್ಯವಸ್ಥೆ ವಿರುದ್ಧ ತಮ್ಮ ಸಾಹಿತ್ಯದ ಮೂಲಕ ಸಂಘರ್ಷ ನಡೆಸಿದರು. ಜಾತಿ ಪದ್ಧತಿ, ಸಾಮಾಜಿಕ ಅಸಮಾನತೆ ಹಾಗೂ ಶ್ರೇಣೀಕೃತ ವ್ಯವಸ್ಥೆ ವಿರುದ್ಧ ಹೋರಾಟ ನಡೆಸಿದರು. ಅಲ್ಲದೇ ಮನುಜ ಮತವೇ ವಿಶ್ವ ಪಥ ಎಂದು ಸಾರಿ ಪಂಚಮಂತ್ರಗಳು ಹಾಗೂ ಸಪ್ತ ಸೂತ್ರಗಳನ್ನು ನಮಗೆ ಕೊಡುಗೆ ನೀಡಿರುವ ಕುವೆಂಪು ಅವರು ಕನ್ನಡ ಸಾಹಿತ್ಯಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಮಹನೀಯರು ಎಂದರು.

ಬಿಇಒ ವೈ.ಕೆ.ತಿಮ್ಮೇಗೌಡ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರು ಆಡಂಬರದ ವಿವಾಹಗಳಿಗೆ ತಿಲಾಂಜಲಿ ನೀಡಿ ಮಂತ್ರ ಮಾಂಗಲ್ಯ ಹಾಗೂ ಸರಳ ಮದುವೆಗಳ ಪ್ರಯೋಜನವನ್ನು ಶ್ರೀಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟು ಅನ್ನದಾತ ರೈತನ್ನು ಉಳುವ ಯೋಗಿ ಎಂದು ಗುಣಗಾನ ಮಾಡಿದ್ದಾರೆ. ಕನ್ನಡಾಂಬೆಯ ಹೆಮ್ಮೆಯ ಪುತ್ರರಾದ ನಾವು ನಮ್ಮಲಿನ ಭಿನ್ನಮತ ಮರೆತು ಪರಸ್ಪರ ಒಂದಾಗಿ ಪ್ರೀತಿ ವಿಶ್ವಾಸದಿಂದ ಜೀವನ ನಡೆಸಬೇಕು ಎಂಬ ಶಾಂತಿ ಮಂತ್ರದ ಸಂದೇಶ ನೀಡಿದ್ದಾರೆ. ಪ್ರಸ್ತುತ ಕುವೆಂಪು ಅವರ ಸಾಮಾಜಿಕ ಸಂದೇಶಗಳು ನೆಮ್ಮದಿ ಜೀವನಕ್ಕೆ ಸಹಕಾರಿ ಎಂದರು.

ಈ ವೇಳೆ ಪ್ರಗತಿಪರ ಕೃಷಿಕರಾದ ನಿಂಗೇಗೌಡ, ರಂಗಭೂಮಿ ಕಲಾವಿದ ಮಹದೇವೇಗೌಡ ಹಾಗೂ ಸಾಮಾಜಿಕ ಹೋರಾಟಗಾರ ಕೆ.ಆರ್.ವೆಂಕಟೇಶ್ ಅವರಿಗೆ ಕುವೆಂಪು ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಸತಿ ಶಾಲೆ ಪ್ರಾಂಶುಪಾಲ ಮಲ್ಲಿಕಾರ್ಜುನಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಕಸಾಪ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ಮಾಜಿ ಅಧ್ಯಕ್ಷರಾದ ಕೆ.ಆರ್.ನೀಲಕಂಠ, ಮಂಜುನಾಥ್, ಕೆ.ಎಸ್.ಸೋಮಶೇಖರ್, ತಾಲೂಕು ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಎಲ್.ಎಸ್.ಧರ್ಮಪ್ಪ ಶಿಕ್ಷಣ ಇಲಾಖೆ ನೌಕರರ ಪತ್ತಿನ ಸಹಕಾರ ಸಂಘದ ನಿರ್ದೇಶಕ ನಾಗೇಶ್, ಶಿಕ್ಷಕರಾದ ರವಿ, ಶಿವಕುಮಾರ್, ಪತ್ರಕರ್ತ ಚಂದ್ರು ಹಾಗೂ ಬೋಧಕ, ಬೋಧಕೇತರ ವರ್ಗದವರು ಇತರರಿದ್ದರು.

ಒಂದನೇ ಪುಟದಿಂದ

'ಕಿರುಕುಳ' ವ್ಯಾಪಾರ ವಹಿವಾಟು ತೆರವು


ಗೂಡಂಗಡಿಗಳ ವಸ್ತುಗಳನ್ನು ಒಂದೆಡೆ ಸಂಗ್ರಹಿಸಿರುವುದು.

ಇದ್ದ ಗೂಡಂಗಡಿ ಗಳನ್ನು ತೆರವು ಮಾಡಿಸಲಾಗಿದೆ. ಅಲ್ಲದೆ, ಮತ್ತೆ ವ್ಯಾಪಾರಿಗಳು ಗೂಡಂಗಡಿಗಳನ್ನು ಹಾಕದಂತೆ ತಡೆಗಟ್ಟಲು ಕಮಾಂಡೊ ಪಡೆ ನಿಯೋಜಿಸಲಾಗಿದೆ. ಗೂಡಂಗಡಿಗಳಿ ಗಾಗಿ ಬಳಸಿದ್ದ ಪರಿಕರಗಳ ಪಕ್ಕದ ಪಾರ್ಕಿಂಗ್ ಸ್ಥಳಕ್ಕೆ ಹೊಂದಿಕೊಂಡ ಸ್ಥಳದಲ್ಲಿ ಸುರಿಯಲಾಗಿದೆ. ಗೂಡಂಗಡಿ ತೆರವು ಮಾಡಿರುವುದರಿಂದ ಅರಮನೆಯ ವರಹಾ ದ್ವಾರದ ಮುಂಭಾಗ ಈಗ ವಿಶಾಲ, ಸ್ವಚ್ಛ ಸ್ಥಳವಾಗಿದೆ. ಪ್ರವಾಸಿಗರು ಸರಾಗ ವಾಗಿ ಓಡಾಡಲು ಅವಕಾಶ ಮಾಡಿ ಕೊಟ್ಟಂತಾಗಿದೆ.

ವ್ಯಾಪಾರಿಗರ ವಾಪಸ್ ಕಳುಹಿಸಿದ ಕಮಾಂಡೋ ಪಡೆ: ಭಾನುವಾರ ಗೂಡಂಗಡಿಗಳ ತೆರವುಗೊಳಿಸಲಾಗಿದ್ದು, ಇಂದು ಬೆಳಗ್ಗೆ ಕೆಲವರು ಮತ್ತೆ ವ್ಯಾಪಾರ ಮಾಡಲು ಬಂದರೂ ಅವರನ್ನು ತಡೆದ ಕಮಾಂಡೊ ಪಡೆ, ಇನ್ನು ಮುಂದೆ ವರಹಾ ಗೇಟ್ ಸೇರಿದಂತೆ ಅರಮನೆ ಸುತ್ತಮುತ್ತ ರಸ್ತೆ ಬದಿ ವ್ಯಾಪಾರ, ಗೂಡಂಗಡಿ ನಿರ್ಬಂಧಿಸಲಾಗಿದೆ ಎಂಬ ಮಾಹಿತಿ ನೀಡಿ, ವಾಪಸ್ ಕಳುಹಿಸಿದರು. ಆದರೂ ಕೆಲವು ವ್ಯಾಪಾರಿಗಳು ಟ್ರೇಗಳಲ್ಲಿ ಕೆಲ ಅಲಂಕಾರಿಕಾ ವಸ್ತುಗಳನ್ನು ಕಾಡ ಕಚೇರಿ ಕಾಂಪೌಂಡ್, ಇಂದಿರಾ ಕ್ಯಾಂಟೀನ್ ಮುಂಭಾಗ, ಗನ್‌ಹೌಸ್ ವೃತ್ತದ ಬಳಿ ಮಾರಾಟ ಮಾಡುತ್ತಿದ್ದ ದೃಶ್ಯ ಕಂಡು ಬಂದಿತು. ಸಂಜೆ ವೇಳೆಗೆ ಕಮಾಂಡೋ ಪಡೆ ಕೋಟೆ ಆಂಜನೇಯಸ್ವಾಮಿ ದೇವಾಲಯ ಹಾಗೂ ಜಯಮಾರ್ತಾಂಡ ದ್ವಾರದ ಬಳಿ ಪಹರೆ ಕಾರ್ಯನಿರ್ವಹಿಸಲಿದ್ದು, ಬೀದಿ ವ್ಯಾಪಾರ ನಡೆಯದಂತೆ ಹಾಗೂ ಜನ ಗುಂಪುಗೂಡದಂತೆ ನೋಡಿಕೊಳ್ಳಲಿದ್ದಾರೆ.

ಇಂಟರ್‌ಲಾಕ್ ಕಾಮಗಾರಿ: ಅರಮನೆಯ ವರಹಾ ಗೇಟ್ ಮುಂಭಾಗದ ಪಾದಚಾರಿ ಮಾರ್ಗವನ್ನು ಸೌಂದರ್ಯೀಕರಣ ಕ್ರಮ ಕೈಗೊಳ್ಳಲಾಗಿದೆ. ವರಹಾ ಗೇಟ್‌ನಿಂದ ಕಾಡ ಕಚೇರಿ ಮುಂಭಾಗದ ರಸ್ತೆ ಅಂಚಿನವರೆಗೆ ಇಂಟರ್‌ಲಾಕ್ ಅಳವಡಿಸಿ ಅಭಿವೃದ್ಧಿ ಮಾಡಲು ಕಾಮಗಾರಿ ಆರಂಭಿಸಲಾಗಿದೆ. ದ್ವಾರದ ಮುಂಭಾಗದ ಎರಡು ಪಥ ಹಾಗೂ ಗೂಡಂಗಡಿಗಳಿದ್ದ ಎರಡು ಪಥದಲ್ಲೂ ಇಂಟರ್‌ಲಾಕ್ ಅಳವಡಿಸುವ ಕಾಮಗಾರಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

ಆಕರ್ಷಕ ಸೆಲ್ಫಿ ಪಾಯಿಂಟ್: ಅರಮನೆ ವೀಕ್ಷಣೆಗೆ ಬರುವ ಪ್ರವಾಸಿಗರನ್ನು ಸೆಳೆಯಲು ವರಹಾ ಗೇಟ್ ಮುಂಭಾಗ ಪ್ರವಾಸೋದ್ಯಮ ಇಲಾಖೆ ವತಿಯಿಂದ 'ಮೈಸೂರು– ನಮ್ಮ ಪರಂಪರೆ–ನಿಮ್ಮ ತಾಣ' ಶೀರ್ಷಿಕೆಯಲ್ಲಿ ಸೆಲ್ಫಿ ಪಾಯಿಂಟ್ ನಿರ್ಮಿಸಲಾಗಿದೆ. ಈ ಫಲಕದ ಮುಂದೆ ಪ್ರವಾಸಿಗರು ಫೋಟೋ ತೆಗೆಸಿಕೊಡು ಸಂಭ್ರಮಿಸುತ್ತಿದ್ದಾರೆ. ಅಲ್ಲದೆ, ಫಲಕದ ಪಕ್ಕದಲ್ಲಿ ಅರಮನೆಯ ಇತಿಹಾಸದ ಮಾಹಿತಿಯುಳ್ಳ ಫಲಕ ಅಳವಡಿಸಲಾಗಿದೆ.

ತಂದೆ–ತಾಯಿ, ಮಗನಿಂದ ವ್ಯಾಪಾರಿ ಹತ್ಯೆ

ಬಳಿ ಪುಟ್ಟಸ್ವಾಮಿ ಗೌಡ ಲಕ್ಷ ರೂ. ಸಾಲ ಪಡೆದಿದ್ದ ಎಂದು ಹೇಳಲಾಗಿದೆ. ಈ ವಿಚಾರವಾಗಿ ಕಳೆದ ಎರಡು ದಿನಗಳ ಹಿಂದೆ ಇಬ್ಬರ ನಡುವೆ ಗಲಾಟೆ ನಡೆದಿದೆ. ಇಂದು ಬೆಳಗ್ಗೆ ಉಮೇಶ ತನ್ನ ಜಮೀನಿನ ಕಡೆ ಹೋಗುತ್ತಿದ್ದ ವೇಳೆ ಪುಟ್ಟಸ್ವಾಮಿಗೌಡ, ಆತನ ಪತ್ನಿ ಹಾಗೂ ಪುತ್ರ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಸಮೀಪದಲ್ಲೇ ಇದ್ದ ನಾಲೆಗೆ ತಳ್ಳಿದ್ದಾರೆ. ಅದನ್ನು ಕಂಡ ಗ್ರಾಮಸ್ಥರು ಪ್ರಶ್ನಿಸಿದಾಗ ಮೂವರು ಬೈಕ್ ಹತ್ತಿ ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಹೇಳಲಾಗಿದೆ. ತೀವ್ರವಾಗಿ ಗಾಯಗೊಂಡ ಉಮೇಶ್‌ನನ್ನು ಕೊಳ್ಳೇಗಾಲ ವಿಭಾಗೀಯ ಆಸ್ಪತ್ರೆಗೆ ಕರೆತರಲಾಗಿ, ಅಷ್ಟರಲ್ಲೇ ಆತ ಮೃತಪಟ್ಟಿದ್ದಾನೆ ಎಂದು ವೈದ್ಯರು ದೃಢಪಡಿಸಿದ್ದಾರೆ. ಘಟನಾ ಸ್ಥಳಕ್ಕೆ ಚಾಮರಾಜನಗರ ಜಿಲ್ಲಾ ಎಸ್ಪಿ ಕವಿತಾ, ಕೊಳ್ಳೇಗಾಲ ಡಿವೈಎಸ್‌ಪಿ ಧರ್ಮೇಂದ್ರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಎಸ್ಪಿ ಕವಿತಾ ಅವರು, ಹತ್ಯೆಗೀಡಾದ ಉಮೇಶ್ ಮತ್ತು ಪುಟ್ಟಸ್ವಾಮಿಗೌಡ ನಡುವೆ ಹಣಕಾಸಿನ ವ್ಯವಹಾರವಿತ್ತು. ಈ ಕಾರಣದಿಂದಲೇ ಹತ್ಯೆ ನಡೆದಿರಬಹುದು ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಆದರೂ ತನಿಖೆ ಮುಂದುವರೆದಿದ್ದು, ಹೆಚ್ಚಿನ ಮಾಹಿತಿ ತಿಳಿಯಲಿದೆ ಎಂದು ಹೇಳಿದರು.

ಯುವತಿ ನಾಪತ್ತೆ: ಪ್ರಿಯಕರ ನೇಣಿಗೆ ಶರಣು

ಎಂದು ಯುವತಿ ಸಂಬಂಧಿಕರು ಡಿ.26 ರಂದು ಬನ್ನೂರು ಠಾಣೆಗೆ ದೂರು ನೀಡಿದ್ದರು. ಬಳಿಕ ಅವರು ತಮ್ಮ ಮಗನೊಂದಿಗೆ ನಾಗೇಂದ್ರ ಅವರ ಮನೆಗೆ ಆಗಮಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಯುವತಿ ಬಗ್ಗೆ ಪ್ರಶ್ನಿಸಿದ್ದಾರೆ. ಈ ವೇಳೆ ನಾಗೇಂದ್ರ ನನಗೇನು ಗೊತ್ತಿಲ್ಲವೆಂದು ಹೇಳಿದ್ದು, ಇದರಿಂದ ಆಕ್ರೋಶಗೊಂಡ ಅವರು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಅಲ್ಲಿಂದ ತೆರಳಿದ್ದಾರೆ.

ಡಿ.27ರಂದು ಮಧ್ಯಾಹ್ನ ಬಿ.ಸೀಹಳ್ಳಿ ಗ್ರಾಪಂ ಅಧ್ಯಕ್ಷ ಜೈ ಕುಮಾರ ಹಾಗೂ ಮಂಜು ಎಂಬುವರು ನಾಗೇಂದ್ರನ ಮನೆಗೆ ಆಗಮಿಸಿ ಆತನನ್ನು ತಮ್ಮ ಬೈಕ್‌ನಲ್ಲಿ ಕೂರಿಸಿಕೊಂಡು ಜೈಕುಮಾರ ಅವರ ತೋಟದ ಮನೆಗೆ ಕರೆದೊಯ್ದು ಆತನನ್ನು ಕಂಬಕ್ಕೆ ಕಟ್ಟಿ ಹಾಕಿ ರಿಪೀಸ್ ಪಟ್ಟಿಯಿಂದ ಮನಸೋ ಇಚ್ಛೆ ಥಳಿಸಿ ಆತನ ಬಳಿ ಇದ್ದ 2 ಮೊಬೈಲ್‌ಗಳನ್ನು ಕಿತ್ತುಕೊಂಡಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ನಾಗೇಂದ್ರನ ತಾಯಿ ಮಂಜುಳಾ ತಿಳಿಸಿದ್ದಾರೆ.

ಈ ವೇಳೆ ತೋಟದ ಮನೆಗೆ ಹೋದ ಮಂಜುಳಾ ಜೈಕುಮಾರ, ಮಂಜು ಮತ್ತು ಯುವತಿ ತಾಯಿ, ದೊಡ್ಡಮ್ಮ ಮತ್ತು ಅವರ ಮಗ ಕಂಬಕ್ಕೆ ಕಟ್ಟಿ ಹಲ್ಲೆ ಮಾಡುತ್ತಿರುವುದನ್ನು ಗಮನಿಸಿ ನಿಮ್ಮ ಹುಡುಗಿ ನಾಪತ್ತೆಯಾಗಿರುವ ಕುರಿತು ಪೊಲೀಸರಿಗೆ ದೂರು ನೀಡಿದ್ದೀರಾ. ಅವರು ಆಕೆಯನ್ನು ಹುಡುಕುತ್ತಾರೆ. ನೀವ್ಯಾಕೆ ನನ್ನ ಮಗನಿಗೆ ಹೊಡೆಯುತ್ತಿದ್ದೀರಾ ಎಂದು ಪ್ರಶ್ನಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ಜೈಕುಮಾರ್ ಹಾಗೂ ಮಂಜು ನಾವು ಗ್ರಾಮದ ಮುಖಂಡರು ನಾವೇ ಸಮಸ್ಯೆ ಬಗೆಹರಿಸುತ್ತೇವೆ ಎಂದ ಅವರು ಈ ವಿಷಯ ಬೇರೆ ಕಡೆ ಬಾಯಿ ಬಿಟ್ಟರೆ ನಿಮ್ಮನ್ನು ಸಾಯಿಸುತ್ತೇವೆ ಎಂದು ಬೆದರಿಕೆಯೊಡ್ಡಿ ನಾಳೆಯಿಂದ ನೀವು ಊರಿನಲ್ಲಿ ಇರುವಂತಿಲ್ಲ ಮತ್ತೆ ಊರಲ್ಲಿ ನೋಡಿದರೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆಯೊಡ್ಡಿದ ಹಿನ್ನೆಲೆಯಲ್ಲಿ ಭಯಭೀತನಾದ ನಾಗೇಂದ್ರ ಹೆದರಿಕೆ ಯಿಂದ ತಮ್ಮ ಮನೆಯ ಕೊಟ್ಟಿಗೆಯಲ್ಲಿ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ. ನನ್ನ ಮಗನ ಸಾವಿಗೆ ಜೈಕುಮಾರ, ಮಂಜು, ಯುವತಿ ತಾಯಿ, ದೊಡ್ಡಮ್ಮ, ಅವರ ಮಗ ಕಾರಣ ಎಂದು ನಾಗೇಂದ್ರನ ತಾಯಿ ಮಂಜುಳಾ ದೂರು ನೀಡಿದ್ದು ಪ್ರಕರಣ ದಾಖಲಿಸಿಕೊಂಡಿ ರುವ ಬನ್ನೂರು ಪೊಲೀಸರು ಮುಂದಿನ ಕ್ರಮ ಜರುಗಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬನ್ನೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು.

ಲೂಟಿ; ಖದೀಮರಿಗೆ ತೀವ್ರ ಶೋಧ

ಮಳಿಗೆಯಲ್ಲೇ ಸಿಕ್ಕಿ ಬೀಳುವಂತೆ ಮಾಡಲು ಪ್ರಯತ್ನಿಸಿದರಾದರೂ, ಎಚ್ಚೆತ್ತುಕೊಂಡ ದುಷ್ಕರ್ಮಿಗಳು ಅಸ್ಗರ್‌ಗೆ ರಿವಾಲ್ವರ್ ತೋರಿಸಿ ಬೆದರಿಸಿ, ಮಳಿಗೆಯಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರ ವಿಚಾರಣೆ ವೇಳೆ ತಿಳಿದು ಬಂದಿದೆ.

ತೀವ್ರ ವಿಚಾರಣೆ: ಜಿಲ್ಲಾ ಎಸ್ಪಿ ವಿಷ್ಣುವರ್ಧನ ಅವರು ಸೋಮವಾರವೂ ಈ ಮಳಿಗೆಗೆ ಭೇಟಿ ನೀಡಿದ್ದು, ಮ್ಯಾನೇಜರ್ ಸೇರಿದಂತೆ ಎಲ್ಲಾ ಸಿಬ್ಬಂದಿಗಳನ್ನೂ ಮತ್ತೊಮ್ಮೆ ಸುದೀರ್ಘವಾಗಿ ವಿಚಾರಣೆಗೊಳಪಡಿಸಿದ್ದಾರೆ. ಅಲ್ಲದೇ ಎಲ್ಲಾ ಸಿಬ್ಬಂದಿಯ ಮೊಬೈಲ್ ನಂಬರ್‌ಗಳನ್ನು ತೆಗೆದುಕೊಂಡಿದ್ದು, ಅವರಿಗೆ ಬಂದಿರುವ ಹಾಗೂ ಅವರು ಮಾಡಿರುವ ಕರೆಗಳ ವಿವರವನ್ನು ಪೊಲೀಸರು ಸಂಗ್ರಹಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಐದು ವಿಶೇಷ ತಂಡ: ದುಷ್ಕರ್ಮಿಗಳ ಸೆರೆಗಾಗಿ ಡಿವೈಎಸ್‌ಪಿ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್‌ಗಳನ್ನೊಳಗೊಂಡ 5 ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಈ ತಂಡಗಳು ಕಾರ್ಯೋನ್ಮುಖವಾಗಿವೆ ಯಾದರೂ, ಈವರೆಗೂ ಯಾವುದೇ ಸುಳಿವು ಲಭ್ಯವಾಗಿಲ್ಲ. ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಗಮನಿಸಿದಾಗ ದುಷ್ಕರ್ಮಿಗಳು ಬಂದಿದ್ದ ಎರಡು ಬೈಕ್‌ಗಳಿಗೂ ನಂಬರ್ ಪ್ಲೇಟ್ ಇರಲಿಲ್ಲ ಎಂಬುದು ಗೊತ್ತಾಗಿದೆ.

ಆದರೆ ಬೈಕ್‌ಗಳ ವಿನ್ಯಾಸ ಹಾಗೂ ದುಷ್ಕರ್ಮಿ ಗಳ ದೇಹ ರಚನೆಯನ್ನು ಆಧರಿಸಿ, ಹುಣಸೂರಿನಿಂದ ಹೊರ ಹೋಗುವ ಎಲ್ಲಾ ರಸ್ತೆಗಳಲ್ಲೂ ಇರುವಂತಹ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪೊಲೀಸರು ಪರಿಶೀಲಿಸಿದ್ದಾರೆ.

ಕೆ.ಆರ್.ನಗರ ಕಡೆ ಪರಾರಿ: ದುಷ್ಕರ್ಮಿಗಳು ಮಳಿಗೆಯಿಂದ ಸುಮಾರು 2 ಕಿ.ಮೀ. ಅಂತರದಲ್ಲಿ ಕಾರನ್ನು ನಿಲ್ಲಿಸಿ ಕೊಂಡಿದ್ದರು. ದರೋಡೆ ನಂತರ ಚಿನ್ನಾಭರಣವನ್ನು ಕಾರಿನಲ್ಲಿಟ್ಟು ಕೆಲವರು ಅದರಲ್ಲಿ ಹೊರಟು ಹೋದರೆ, ಮತ್ತಿಬ್ಬರು ಬೈಕ್‌ಗಳಲ್ಲೇ ಹೋದರು ಎಂಬ ಮಾತುಗಳು ಭಾನುವಾರ ಕೇಳಿಬಂದಿದ್ದವು. ಆದರೆ ಪೊಲೀಸರ ಈವರೆಗಿನ ತನಿಖೆಯಲ್ಲಿ ಈ ಪ್ರಕರಣದಲ್ಲಿ ಕಾರು ಬಳಸಿರುವ ಬಗ್ಗೆ ಯಾವುದೇ ಸುಳಿವು ದೊರೆತಿಲ್ಲ. ಆದರೆ ಮೂವರು ದುಷ್ಕರ್ಮಿಗಳು 2 ಬೈಕ್‌ಗಳಲ್ಲಿ ಕೆ.ಆರ್.ನಗರ ಮಾರ್ಗವಾಗಿ ಹೋಗುತ್ತಿರುವ ದೃಶ್ಯ ಆ ರಸ್ತೆಯ ತೋಟದ ಮನೆಯೊಂದರಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಮೂವರು ದುಷ್ಕರ್ಮಿಗಳ ಮುಖ ಚಹರೆಗಳು ಮಳಿಗೆಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿರುವ ದೃಶ್ಯದಿಂದ ಪತ್ತೆಯಾಗಿದ್ದು, ಅವುಗಳನ್ನು ರಾಜ್ಯದ ಎಲ್ಲಾ ಠಾಣೆಗಳಿಗೂ ರವಾನಿಸಲಾಗಿದೆ.

ಪೂರ್ಣಗೊಂಡ ಯೋಜನಾ ಕಾಮಗಾರಿ ಬಿಲ್ ಪಾವತಿಗೆ ಅಧಿಕಾರಿಗಳಿಗೆ ಸಿಎಂ ಸೂಚನೆ

ಇದಕ್ಕಾಗಿ ಮೂಲ ಸೌಲಭ್ಯ ಅಭಿವೃದ್ಧಿ ಯೋಜನೆಗಳಡಿ ಸಾವಿರ ಕೋಟಿ ಬಿಡುಗಡೆ


ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು.

ಬೆಂಗಳೂರು, ಡಿ.29(ಕೆಎಂಶಿ)– ಪೂರ್ಣಗೊಂಡ ಯೋಜನಾ ಕಾಮಗಾರಿಗಳ ಬಿಲ್‌ಗಳ ಪಾವತಿಗೆ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಹಾಗೂ ರೈಲ್ವೆ ಯೋಜನೆಗಳ ಭೂಸ್ವಾಧೀನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಒಂದು ಸಾವಿರ ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದರು.

ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ, ಅನುದಾನ ಪಾವತಿಸುವುದು ಆಯಾ ಜಿಲ್ಲಾಧಿಕಾರಿಗಳ ಜವಾಬ್ದಾರಿಯಾಗಿದೆ, ಕಾಮಗಾರಿಗಳ ಗುಣಮಟ್ಟದಲ್ಲಿ ರಾಜೀ ಆಗಬಾರದು, ಜಿಲ್ಲಾ ಉಸ್ತುವಾರಿ ಸಚಿವರು ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಬೇಕು.

2024–25ರಲ್ಲಿ 205 ವಿಧಾನಸಭಾ ಕ್ಷೇತ್ರಗಳಿಗೆ ಮುಖ್ಯಮಂತ್ರಿ ವಿಶೇಷ ಅನುದಾನ ಯೋಜನೆಯಡಿ 8666.50 ಕೋಟಿ ರೂ. ಅನುದಾನ ಹಂಚಿಕೆ ಮಾಡಲಾಗಿದೆ. ಬಾಕಿಯಿರುವ 19 ಕ್ಷೇತ್ರಗಳಿಂದ ಪ್ರಸ್ತಾವನೆ ಪಡೆದ ನಂತರ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು, ಎಲ್ಲಾ ಟೆಂಡರ್ ಪ್ರಕ್ರಿಯೆಗಳನ್ನು ಜನವರಿ 10ರೊಳಗೆ ಪೂರ್ಣಗೊಳಿಸಬೇಕು.

ರೈಲ್ವೆ ಕಾಮಗಾರಿಗಳಿಗೆ ಬಾಕಿಯಿರುವ ಭೂಸ್ವಾಧೀನ ಪ್ರಕ್ರಿಯೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಬೇಕು. ಕುಡಚಿ–ಬಾಗಲಕೋಟೆ, ತುಮಕೂರು–ದಾವಣಗೆರೆ, ಬೇಲೂರು–ಹಾಸನ, ಶಿವಮೊಗ್ಗ–ರಾಣೆಬೆನ್ನೂರು, ಧಾರವಾಡ–ಬೆಳಗಾವಿ ರೈಲ್ವೆ ಮಾರ್ಗಗಳ ನಿರ್ಮಾಣ ಕಾಮಗಾರಿ ನಿಗದಿತ ಅವಧಿಯೊಳಗೆ ಕೈಗೊಳ್ಳಲು ಅಗತ್ಯ ಕ್ರಮಗಳನ್ನು ತ್ವರಿತಗೊಳಿಸಬೇಕು ಎಂದರು.

ಅನುಮೋದನೆಗೊಂಡಿರುವ ರಾಜ್ಯದ ಎಲ್ಲಾ ರೈಲು ಯೋಜನೆಗಳಿಗೆ ಒಟ್ಟು 16,554 ಎಕರೆ ಭೂಮಿ ಅಗತ್ಯವಿದ್ದು, ಈ ಪೈಕಿ ಶೇಕಡಾ 84ರಷ್ಟು ಭೂಸ್ವಾಧೀನ ಆಗಿದೆ. ಇನ್ನೂ 2,685 ಎಕರೆ ಭೂಸ್ವಾಧೀನ ಬಾಕಿ ಇದೆ. ಪ್ರಗತಿಯಲ್ಲಿರುವ ವಿವಿಧ ರೇಲ್ವೆ ಯೋಜನೆಗಳ ನಿರ್ಮಾಣ ಕಾಮಗಾರಿಗಳಿಗೆ 2581.67 ಕೋಟಿ ರೂ., ಭೂಸ್ವಾಧೀನ ಪ್ರಕ್ರಿಯೆಗೆ 2950.22 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ರಾಜ್ಯದಲ್ಲಿ 6 ವಿಮಾನ ನಿಲ್ದಾಣಗಳ ಕಾಮಗಾರಿ ಅನುಷ್ಠಾನದ ವಿವಿಧ ಹಂತದಲ್ಲಿವೆ. ಹಾಸನ ವಿಮಾನ ನಿಲ್ದಾಣ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ರೈತರಿಗೆ ಆದಷ್ಟು ಶೀಘ್ರ ಪರಿಹಾರ ವಿತರಿಸಬೇಕು. ಕಾಮಗಾರಿ ಪೂರ್ಣಗೊಳಿಸಲು ಎದುರಾಗಿರುವ ತಾಂತ್ರಿಕ ಅಡಚಣೆಗಳನ್ನು ನಿವಾರಿಸಬೇಕು ಎಂದು ಸೂಚಿಸಿದರು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 17,350 ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿ ಮಾಡಲಾಗಿದೆ. ಇನ್ನೂ 76,430 ಮೆಟ್ರಿಕ್ ಟನ್ ಖರೀದಿ ಬಾಕಿ ಇದೆ, ಒಟ್ಟು 93,782 ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿಗೆ ಇಂಡೆಂಟ್ ಪಡೆಯಲಾಗಿದ್ದು, ನಿಗದಿತ ಪ್ರಮಾಣದಲ್ಲಿ ಖರೀದಿಗೆ ಕ್ರಮ ಕೈಗೊಳ್ಳಬೇಕು.

ಎಥೆನಾಲ್ ಖರೀದಿ ಸಂಬಂಧ ಕೇಂದ್ರ ಸರ್ಕಾರಕ್ಕೆ ಮಾಡಿದ್ದ ಮನವಿಗೆ ಇದುವರೆಗೆ ಪ್ರತಿಕ್ರಿಯೆ ಬಂದಿಲ್ಲ, ಅಲ್ಲದೆ, ರಾಜ್ಯದ ಮೆಕ್ಕೆಜೋಳ ಬೆಳೆಗಾರರ ಕುರಿತು ನಕಾರಾತ್ಮಕ ಧೋರಣೆ ಮುಂದುವರೆಸಿದ್ದು, ಈ ಹಿನ್ನೆಲೆಯಲ್ಲಿ ಇಂಡೆಂಟ್ ನಿಗದಿಪಡಿಸಿರುವ ಪ್ರಮಾಣದ ಮೆಕ್ಕೆಜೋಳ ಖರೀದಿಗೆ ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ನಿಮ್ಮ ಸುರಕ್ಷೆ ನಮ್ಮ ಆದ್ಯತೆ

ವರ್ಷ ಆಚರಣೆಗೆ ಪೊಲೀಸ್ ಆಯುಕ್ತರ ಕಚೇರಿಯಿಂದ ಅನುಮತಿ ಪಡೆದು, ಮುಂಜಾಗ್ರತಾ ಕ್ರಮಗಳೊಂದಿಗೆ ಡಿ.31ರ ಮಧ್ಯರಾತ್ರಿ 1 ಗಂಟೆಯೊಳಗೆ ಕಡ್ಡಾಯವಾಗಿ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಬೇಕು. ಸಾರ್ವಜನಿಕರು ತಮ್ಮ ಮನೆ, ಅಂಗಡಿ ಇತ್ಯಾದಿ ಸ್ಥಳಗಳಲ್ಲಿ ಅಳವಡಿಸಿ ರುವ ಸಿಸಿಟಿವಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿ ಟ್ಟುಕೊಳ್ಳಬೇಕು. ಪೊಲೀಸ್ ಅನುಮತಿ ಯೊಂದಿಗೆ ತಮ್ಮ ಪ್ರದೇಶಕ್ಕೆ ಸೀಮಿತವಾಗಿ ರುವಂತೆ ನಿರ್ದಿಷ್ಟಪಡಿಸಿರುವ ಡೆಸಿಬಲ್‌ನಲ್ಲಿ ಧ್ವನಿವರ್ಧಕ ಬಳಸಬೇಕು. ಯಾವುದೇ ಕಾರಣಕ್ಕೂ ಡಿಜೆ ಬಳಸುವಂತಿಲ್ಲ. ಸಾಂಸ್ಕೃತಿಕ ಕಾರ್ಯಕ್ರಮ ನೆಪದಲ್ಲಿ ಅಶ್ಲೀಲ, ಅರಬೆತ್ತಲೆ, ಮಾದಕ ವಸ್ತುಗಳ ಸೇವನೆ, ಜೂಜಾಟ ನಡೆಸುವಂತಿಲ್ಲ. ರಸ್ತೆಯಲ್ಲಿ ಸಾರ್ವಜನಿಕ ರನ್ನು ಬಲವಂತವಾಗಿ ನಿಲ್ಲಿಸಿ, ಅವರ ಇಚ್ಛೆಗೆ ವಿರುದ್ಧವಾಗಿ ಶುಭಕೋರಿ ಕಿರಿಕಿರಿ ಉಂಟು ಮಾಡುವಂತಿಲ್ಲ. ನಿರ್ಜನ ರಸ್ತೆ, ಪ್ರದೇಶ, ಪಾರ್ಕ್, ರಿಂಗ್ ರಸ್ತೆ, ಹೈವೇಗಳಲ್ಲಿ ವಾಹನಗಳಲ್ಲಿ ಕುಳಿತು ಮದ್ಯಪಾನ ಮಾಡುವಂತಿಲ್ಲ. ಸಾಮಾಜಿಕ ಮಾಧ್ಯಮ ಜಾಲತಾಣಗಳಲ್ಲಿ ಸಾರ್ವಜನಿಕರಿಗೆ ಆತಂಕ ಮೂಡಿಸುವಂತಹ ಹಾಗೂ ಅಪಪ್ರಚಾರದ ಪೋಸ್ಟ್‌ಗಳನ್ನು ಹಾಕುವಂತಿಲ್ಲ. ಹೊಸವರ್ಷದ ನೆಪದಲ್ಲಿ ಅಪರಿಚಿತರು ಉಡುಗೊರೆ ನೀಡುವುದಾಗಿ ಅಥವಾ ಬಂದಿರುವುದಾಗಿ ಕಳುಹಿಸುವ ಲಿಂಕ್‌ಗಳ ಬಗ್ಗೆ ಎಚ್ಚರಿಕೆ ಇರಲಿ. ನಿಯಮ ಉಲ್ಲಂಘಿಸಿದರೆ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಆಯುಕ್ತರು ಎಚ್ಚರಿಸಿದ್ದಾರೆ.

ಮಾದಕ ವಸ್ತು ದಂಧೆಗೆ ಕಡಿವಾಣ ಹಾಕುವಲ್ಲಿ ಪೊಲೀಸರು ವಿಫಲ

ಬೆಂಗಳೂರು, ಡಿ.29(ಕೆಎಂಶಿ) – ಕರ್ನಾಟಕದಲ್ಲಿ ಮಾದಕವಸ್ತು ಕಳ್ಳಸಾಗಣೆ ದಂಧೆಗೆ ಕಡಿವಾಣ ಹಾಕುವಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದ್ದು, ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಎಚ್ಚರಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಮಹಾರಾಷ್ಟ್ರ ಪೊಲೀಸರು ಬೆಂಗಳೂರಿನಲ್ಲಿ ಕೋಟ್ಯಂತರ ರೂ. ಮೌಲ್ಯದ ಮಾದಕದ್ರವ್ಯ ಜಪ್ತಿ ಮಾಡಿರುವುದು ರಾಜ್ಯದಲ್ಲಿ ಎಗ್ಗಿಲ್ಲದೆ ಡ್ರಗ್ಸ್ ದಂಧೆ ನಡೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದಿದ್ದಾರೆ.

ಮೈಸೂರು ಮಿತ್ರ

ಮುಕ್ತ ವಿವಿಯಲ್ಲಿ ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆ

ಶ್ರೀಯುತರ ಸಾಹಿತ್ಯ ಅಧ್ಯಯನದಿಂದ ಭವಿಷ್ಯದ ಬದುಕು ಉಜ್ವಲ: ಪ್ರೊ.ಕೆಂಪೇಗೌಡ



ಕರ್ನಾಟಕ ರಾಜ್ಯ ಮುಕ್ತ ವಿವಿಯಲ್ಲಿ ಕುವೆಂಪು ಅವರ ಜನ್ಮದಿನಾಚರಣೆ ನಡೆಯಿತು.

ಮೈಸೂರು,ಡಿ.29(ಎಂಕೆ)–ರಾಷ್ಟ್ರಕವಿ ಕುವೆಂಪು ಅವರ ಪ್ರತಿಯೊಂದು ಅಕ್ಷರವೂ ಜ್ಞಾನದ ಸಂಕೇತವಾಗಿದ್ದು, ಅವರ ಸಾಹಿತ್ಯ ಅಧ್ಯಯನದಿಂದ ನಮ್ಮೆಲ್ಲರ ಭವಿಷ್ಯವನ್ನು ರೂಪಿಸಿಕೊಳ್ಳಬಹುದಾಗಿದೆ ಎಂದು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಪ್ರೊ.ಟಿ.ಕೆ.ಕೆಂಪೇಗೌಡ ಹೇಳಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಅವರ 122ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವಿಂದು ಪ್ರಕ್ಷುಬ್ಧ ಸ್ಥಿತಿಯಲ್ಲಿದ್ದು, ಹಿಂಸೆ, ಕ್ರೌರ್ಯ, ಯುದ್ಧದಿಂದಾಗಿ ಮನಃಶಾಂತಿ ಕಳೆದುಕೊಂಡು ಜೀವಿಸುತ್ತಿದ್ದೇವೆ. ಮತ್ತೆ ನಮ್ಮ ಜೀವನದಲ್ಲಿ ಪ್ರೀತಿ, ಸಹನೆ ಹಾಗೂ ಮನಃಶಾಂತಿ ದೊರೆಯಬೇಕಾದರೆ ಕುವೆಂಪು ಅವರ ಸಾಹಿತ್ಯದ ಕಡೆಗೆ ಹೋಗಬೇಕು ಎಂದು ಹೇಳಿದರು.

ರಾಷ್ಟ್ರಕವಿ ಕುವೆಂಪು ಅವರ ಬದುಕು ಮತ್ತು ಸಾಹಿತ್ಯ ನಮಗೆ ಪ್ರಶ್ನೆ ಮಾಡುವುದನ್ನು ಕಲಿಸಿದೆ. ಕುವೆಂಪು ಅವರ ಸಾಹಿತ್ಯವನ್ನು ಕಾಲದ ಕನ್ನಡಿ ಎಂತಲೂ ಕರೆಯುತ್ತಾರೆ. ಅಸ್ಪೃಶ್ಯತೆ, ಜಾತೀಯತೆ ಹೇಗೆ ತೊಲಗಬೇಕು ಎಂಬುದನ್ನು ಜಲಗಾರ ಹಾಗೂ ಶೂದ್ರ ತಪಸ್ವಿ ನಾಟಕದ ಮೂಲಕ ತೆರೆದಿಟ್ಟಿದ್ದಾರೆ. ಕುವೆಂಪು ಅವರು ಭವಿಷ್ಯದರ್ಶಿಯಾಗಿದ್ದು, ಭೂತಕಾಲವನ್ನು ಪರಿಶೀಲಿಸಿ, ವರ್ತಮಾನವನ್ನು ಸರಿಪಡಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳುವುದನ್ನು ಹೇಗೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ದಿನಮಾನದ ಎಲ್ಲಾ ಸಮಸ್ಯೆಗಳಿಗೆ ಕುವೆಂಪು ಅವರ ಸಾಹಿತ್ಯದಲ್ಲಿ ಉತ್ತರವಿದೆ. ಅನಾವಶ್ಯಕವಾದ ಮಾತುಗಳನ್ನು ಕುವೆಂಪು ಅವರು ಎಂದು ಆಡಿಲ್ಲ. ವಿಚಾರ ಇದ್ದರೆ ಮಾತ್ರ ಅವರು ಚರ್ಚಿಸುತ್ತಿದ್ದರು.

ನೋಟಿಸ್ ಕೊಡಿ...!

ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನಾಚರಣೆಗೆ ಹಾಜರಾಗದ ಮುಕ್ತ ವಿವಿ ಅಧ್ಯಾಪಕರು, ಅಧಿಕಾರಿಗಳಿಗೆ ನೋಟಿಸ್ ನೀಡಿ, ಸೂಕ್ತ ಕಾರಣ ಪಡೆಯುವಂತೆ ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್ ಅವರಿಗೆ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸೂಚನೆ ನೀಡಿದರು.

ಪ್ರಸ್ತುತ ಪ್ರಚಲಿತದಲ್ಲಿರುವ ಎಲ್ಲಾ ಧರ್ಮಗಳ ಸಾರವೂ ಅವರ ಸಾಹಿತ್ಯಲ್ಲಿದೆ. ಗಿಡ, ಮರಗಳಲ್ಲಿರುವ ಕೊಳಕನ್ನು ಹೇಗೆ ತೆಗೆಯುತ್ತೇವೋ ಹಾಗೆ ನಮ್ಮ ಮನಸ್ಸಿನಲ್ಲಿರುವ ಜಾತಿ, ಅಸ್ಪೃಶ್ಯತೆಯ ಮನೋಭಾವವನ್ನು ತೆಗೆದುಹಾಕಬೇಕು ಎಂದು ಪ್ರತಿಪಾದಿಸಿದ ಕುವೆಂಪು ವಿಶ್ವಮಟ್ಟಕ್ಕೆ ಏರಬಲ್ಲ ಕವಿ ಎಂದು ಸ್ಮರಿಸಿದರು.

ನಾಲ್ಕಾರು ಮಂದಿಗೆ ಮಾಡುತ್ತಿಲ್ಲ: ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನಾಚರಣೆಯನ್ನು ನಾಲ್ಕಾರು ಮಂದಿಗೆ ಮಾಡುತ್ತಿಲ್ಲ. ವಿವಿಯ ಎಲ್ಲಾ ಅಧ್ಯಾಪಕರಿಗಾಗಿ ಆಯೋಜನೆ ಮಾಡಿರುವ ಕಾರ್ಯಕ್ರಮ. ಸಾವಿರಾರು ಸಂಖ್ಯೆಯಲ್ಲಿ ಸೇರಬೇಕಾದ ಕಾರ್ಯಕ್ರಮಕ್ಕೆ ಬೆರಳಣಿಕೆಯಷ್ಟು ಮಂದಿ ಭಾಗವಹಿಸಿರುವುದು ಬೇಸರದ ಸಂಗತಿ ಎಂದರು.

ಮುಕ್ತ ವಿವಿ ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಡೀನ್(ಶೈಕ್ಷಣಿಕ) ಪ್ರೊ.ಎಂ.ರಾಮನಾಥಂ ನಾಯ್ಡು, ಕುಲಸಚಿವ(ಪರಿಕ್ಷಾಂಗ) ಡಾ.ಸಿ.ಎಸ್. ಆನಂದ್ ಕುಮಾರ್, ಸಂಯೋಜನಾಧಿಕಾರಿಗಳಾದ ಡಾ.ಎನ್.ಆರ್.ಚಂದ್ರೇಗೌಡ, ಡಾ.ಅವರೆಕಾಡು ವಿಜಯಕುಮಾರ್, ಸಹಾಯಕ ಪ್ರಾಧ್ಯಾಪಕಿ ಕೆ.ಎಸ್.ಮಮತಾ ಮತ್ತಿತರರಿದ್ದರು.

ಸರ್ವಜನಾಂಗದ ಶಾಂತಿಯ ಸಂದೇಶ ಸಾರಿದವರು ಕುವೆಂಪು

ಅವರ ಬದುಕು ನಮ್ಮೆಲ್ಲರಿಗೂ ಆದರ್ಶ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಮತ

ಮೈಸೂರು, ಡಿ.29(ಎಂಕೆ)– ಸರ್ವ ಜನಾಂಗವೂ ಶಾಂತಿ–ನೆಮ್ಮದಿಯಿಂದ ಬದುಕಬೇಕು ಎಂಬುದನ್ನು ಬರವಣಿಗೆ ಮೂಲಕ ತಿಳಿಸಿ, ಇಡೀ ಸಮಾಜವನ್ನು ತಿದ್ದಿದ ರಾಷ್ಟ್ರಕವಿ ಕುವೆಂಪು ಅವರ ವ್ಯಕ್ತಿತ್ವ ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸ್ಮರಿಸಿದರು.

ಮೈಸೂರಿನ ಕರ್ನಾಟಕ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ನಗರಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ವಿಶ್ವಮಾನವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಲೋಕಕ್ಕೆ ಕುವೆಂಪು ಅವರ ಕೊಡುಗೆ ಅಪಾರವಾಗಿದ್ದು, ಓದು ಮತ್ತು ಬರವಣಿಗೆಯಿಂದ ಮನುಷ್ಯ ಹೇಗೆ ಉನ್ನತ ಮಟ್ಟಕ್ಕೆ ಹೋಗಬಹುದು ಎಂಬುದನ್ನು ತಿಳಿಸಿಕೊಟ್ಟಂತಹ ಮಹಾನ್ ವ್ಯಕ್ತಿ ಕುವೆಂಪು ಎಂದು ತಿಳಿಸಿದರು.

ಶಾಲಾ–ಕಾಲೇಜು ವಿದ್ಯಾರ್ಥಿಗಳು ರಾಷ್ಟ್ರಕವಿ ಕುವೆಂಪು ಸೇರಿದಂತೆ ಕನ್ನಡ ಸಾಹಿತಿಗಳ ಪುಸ್ತಕಗಳನ್ನು ಓದುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಕುವೆಂಪು ಅವರ ಶಿಷ್ಯರಾಗಿ ಬೆಳೆಯಬೇಕು. ಅವರ ವಿಚಾರಧಾರೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತಮ್ಮದೇ ಕೊಡುಗೆಯನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡುವಂತಾಗಬೇಕು ಎಂದರು.



ವಿಶ್ವಮಾನವ ದಿನಾಚರಣೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ಭಾವಚಿತ್ರಕ್ಕೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪುಷ್ಪಾರ್ಚನೆ ಮಾಡಿದರು. ಸಾಹಿತಿ ಪ್ರೊ.ಸಿ.ನಾಗಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಉಪಸ್ಥಿತರಿದ್ದರು.

ಸಾಹಿತಿ ಪ್ರೊ.ಸಿ.ನಾಗಣ್ಣ ಮಾತನಾಡಿ, ಕುವೆಂಪು ಅವರ ವ್ಯಕ್ತಿತ್ವ ಬಹಳ ದೊಡ್ಡದು. ಅವರ ವಿಚಾರಧಾರೆಗಳು ಸರ್ವ ವ್ಯಾಪಿ ಹಾಗೂ ಸಮಗ್ರವಾದವು. ಆಧ್ಯಾತ್ಮಿಕ, ಭೌತಿಕ, ಲೌಕಿಕ, ಧಾರ್ಮಿಕ, ಸಾಮಾಜಿಕ, ವೈಜ್ಞಾನಿಕ, ಸಾಂಸಾರಿಕ, ಸನ್ಯಾಸಿಕ, ರಾಷ್ಟ್ರೀಯ ಜಾಗತಿಕ, ಶೈಕ್ಷಣಿಕ, ರಾಜಕೀಯ, ಪ್ರೇಮ, ನೀತಿ, ನಿಷ್ಠೆ, ನಾಡು–ನುಡಿಯಂತಹ ನೂರಾರು ವಿಷಯಗಳನ್ನು ಸಾಹಿತ್ಯದ ಮೂಲಕ ನೀಡಿದ್ದಾರೆ. ಹಾಗಾಗಿ ನಾವೆಲ್ಲರೂ ಕುವೆಂಪು, ಸಾಹಿತ್ಯವನ್ನು ಓದುವುದು ಅನಿವಾರ್ಯವೆಂದರು.

ಕುವೆಂಪು ಅವರು, ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದವರು. ಪ್ರಕೃತಿಯನ್ನು ಪ್ರಥಮ ಗುರುವಾಗಿ ಸ್ವೀಕರಿಸಿ, ಬಾಲ್ಯದಿಂದಲೇ ಅನೇಕ ಪದ್ಯಗಳನ್ನು ಬರೆಯಲು ಪ್ರಾರಂಭಿಸಿದರು. ದೇಶದಲ್ಲಿ ಶಾಂತಿ ಮತ್ತು ನೆಮ್ಮದಿ ನೆಲಸಲು ಅಗತ್ಯವಿರುವ ಮೂಲಭೂತ ತತ್ವಗಳನ್ನು ನೀಡಿದ್ದಾರೆ. ವಿದ್ಯಾರ್ಥಿಗಳಿಗಾಗಿ ವಿಶಾಲವಾದ ಸಾಹಿತ್ಯವನ್ನು ನೀಡಿದ್ದಾರೆ. ಅವುಗಳನ್ನೆಲ್ಲವನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು ಎಂದು ತಿಳಿಸಿದರು.

ನೀತಿ ಸಂಹಿತೆ: ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನವನ್ನು ನೀಡಿರುವಂತೆಯೇ ರಾಷ್ಟ್ರಕವಿ ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ಮನುಷ್ಯನಿಗೆ ನೀತಿ ಸಂಹಿತೆ ನೀಡಿದ್ದಾರೆ. ಅದನ್ನು ನಮ್ಮ ಜೀವನದಲ್ಲಿ ಅನುಷ್ಠಾನ ಮಾಡಿಕೊಳ್ಳಬೇಕು. ಅವರ ಸಾಹಿತ್ಯವನ್ನು ನಾವು ಹೆಚ್ಚು ಹೆಚ್ಚು ಓದಬೇಕು. ಕಾವ್ಯಗಳನ್ನು ಪಠಣ ಮಾಡಬೇಕು ಎಂದು ಕರೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ಜ.7ಕ್ಕೆ ಶ್ರೀ ತ್ಯಾಗರಾಜ ಆರಾಧನಾ ಮಹೋತ್ಸವ; ಪ್ರತಿಭಾ ಪುರಸ್ಕಾರ

ಮೈಸೂರು, ಡಿ.29(ಎಂಕೆ)– ನಯನಜ ಕ್ಷತ್ರೀಯ ಕನ್ನಡಿಗರ ಟ್ರಸ್ಟ್ ವತಿಯಿಂದ ಜ.7ರಂದು ಬೆಳಗ್ಗೆ 7.30ಕ್ಕೆ 176ನೇ ವರ್ಷದ ಶ್ರೀ ತ್ಯಾಗರಾಜ ಆರಾಧನಾ ಮಹೋತ್ಸವ ಏರ್ಪಡಿಸಿದ್ದು, ಮಹೋತ್ಸವದ ಅಂಗವಾಗಿ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕಗಳಿಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಟ್ರಸ್ಟ್ ಕಾರ್ಯದರ್ಶಿ ಎಸ್.ರವೀಂದ್ರ ತಿಳಿಸಿದ್ದಾರೆ. ನಯನಜ ಕ್ಷತ್ರೀಯ ಕನ್ನಡಿಗರ ಜನಾಂಗದ ಅರ್ಹ ವಿದ್ಯಾರ್ಥಿಗಳು ಜಾತಿ ಪ್ರಮಾಣ ಹಾಗೂ ಅಂಕಪಟ್ಟಿ, ಆಧಾರ್ ಜೆರಾಕ್ಸ್ ಪ್ರತಿ ಹಾಗೂ ಭಾವಚಿತ್ರದೊಂದಿಗೆ ಜ.6 ರೊಳಗೆ ಸಂಘದ ಕಚೇರಿಗೆ ನೀಡುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಥಮ ಜ್ಞಾನಪೀಠ ಪ್ರಶಸ್ತಿ ಪಡೆದ ಕುವೆಂಪುಗೆ 'ಭಾರತರತ್ನ' ದಕ್ಕಬೇಕಿದೆ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಪ್ರತಿಪಾದನೆ

ಮೈಸೂರು, ಡಿ.29(ಎಂಕೆ)– ಕನ್ನಡಕ್ಕೆ ಪ್ರಥಮ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಯುಗದ ಕವಿ, ಜಗದ ಕವಿ, ರಾಷ್ಟ್ರಕವಿ ಕುವೆಂಪು ಅವರಿಗೆ ಕೇಂದ್ರ ಸರ್ಕಾರ ಭಾರತ ರತ್ನ ಪ್ರಶಸ್ತಿ ನೀಡಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಮನವಿ ಮಾಡಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ಪ್ರವೇಶ ದ್ವಾರದ ಬಳಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುವೆಂಪು ಅವರ ಪ್ರತಿಮೆಗೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಕುವೆಂಪು ಅವರಿಗೆ ಭಾರತರತ್ನ ನೀಡಬೇಕು ಎಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಪ್ರಶಸ್ತಿ ಘೋಷಿಸಬೇಕು ಎಂದು ಕೋರಿದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮಾನಸಗಂಗೋತ್ರಿ ಕ್ಯಾಂಪಸ್ ಆರಂಭಕ್ಕೆ ಕುವೆಂಪು ಕಾರಣ. ಅವರು ಕಟ್ಟಿದ ಮೈಸೂರು ವಿವಿಯಲ್ಲಿ ನಾವೆಲ್ಲಾ ಓದಿ ಬದುಕು ಕಟ್ಟಿಕೊಂಡಿದ್ದೇವೆ. ಮೈಸೂರು ವಿವಿ ನೌಕರರಾಗಿದ್ದ ನಮ್ಮ ತಂದೆ ಕುವೆಂಪು ಅವರಿಗೆ ಆತ್ಮೀಯರಾಗಿದ್ದರು. ಚಿಕ್ಕವನಿದ್ದಾಗ ನಾನು ಕುವೆಂಪು ಅವರ ತೊಡೆಯ ಮೇಲೆ ಕುಳಿತಿದ್ದೆ ಎಂದು ಸ್ಮರಿಸಿದರು.



ಮೈಸೂರು ವಿವಿ ಮಾನಸಗಂಗೋತ್ರಿಯ ಪ್ರವೇಶ ದ್ವಾರದಲ್ಲಿರುವ ಕುವೆಂಪು ಅವರ ಪ್ರತಿಮೆಗೆ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ವತಿಯಿಂದ ಸೋಮವಾರ ಪುಷ್ಪಾರ್ಚನೆ ನೆರವೇರಿಸಲಾಯಿತು.

ಉಪ ಪೊಲೀಸ್ ಆಯುಕ್ತ ಕೆ.ಎಸ್. ಸಂದರರಾಜ್ ಮಾತನಾಡಿ, ಕುವೆಂಪು ಅವರ ವಿಶ್ವಮಾನವ ಸಂದೇಶ ಸಾರ್ವಕಾಲಿಕವಾದುದು. ವಿಶ್ವಮಾನವ ಚಿಂತನೆಯಲ್ಲಿ ನಾವೆಲ್ಲರು ಬದುಕು ಕಟ್ಟಿಕೊಳ್ಳಬೇಕು ಎಂದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಎಸಿಪಿ ಪಿ.ರವಿ ಪ್ರಸಾದ್, ವಕೀಲ ಎಸ್.ಉಮೇಶ್, ಮೈವಿವಿ ಸಿಂಡಿಕೇಟ್ ಸದಸ್ಯರಾದ ಸಿ.ಮಹದೇಶು, ಕ್ಯಾತನಹಳ್ಳಿ ಸಿ.ನಾಗರಾಜ್, ಡಾ.ಜೆ.ಶಿಲ್ಪಾ, ಡಾ.ನಟರಾಜ್ ಶಿವಣ್ಣ, ಗೋಕುಲ್ ಗೋವರ್ಧನ್, ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ಅಧ್ಯಕ್ಷ ಆರ್.ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್, ಡಾ.ನವೀನ್‌ಕುಮಾರ್, ವಿವೇಕ್, ಯೋಗೇಶ್, ಚಿದಾನಂದ, ಪ್ರಸಾದ್ ಮತ್ತಿತರರಿದ್ದರು.

ಬಿಜೆಪಿ ಕಚೇರಿಯಲ್ಲಿ ಕುವೆಂಪು ಜನ್ಮ ದಿನಾಚರಣೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ರಾಷ್ಟ್ರಕವಿ ಕುವೆಂಪು ಅವರ 121ನೇ ಜನ್ಮ ದಿನವನ್ನು ಆಚರಿಸಲಾಯಿತು.

ಮೈಸೂರು, ಡಿ.29(ಬಿಎಲ್‌ಯು)– ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ರಾಷ್ಟ್ರಕವಿ ಕುವೆಂಪು ಅವರ 121ನೇ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಅವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಪ್ರಾಧ್ಯಾಪಕ ಪ್ರೊ.ಪರಮೇಶ್, ಕುವೆಂಪು ಕರೆ ನೀಡಿರುವಂತೆ ವಿಶ್ವಮಾನವರಾಗಿ ಬಾಳಬೇಕು, ವಿಶ್ವಪಥದಲ್ಲಿ ಸಾಗಬೇಕು ಎಂದು ಸಲಹೆ ನೀಡಿದರು.

ನಮ್ಮ ತಾಯಿ ಭಾಷೆ ಕನ್ನಡದ ಬಗ್ಗೆ ಅಪಾರ ಪ್ರೀತಿ ಇರಬೇಕು. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯಲ್ಲಿ ಬರೆಯಬೇಕು, ಓದಬೇಕು ಎಂದು ಕಿವಿಮಾತು ಹೇಳಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಸುಬ್ಬಣ್ಣ, ಮುಖಂಡರಾದ ಫಣೀಶ್, ಮಂಗಳಾ ಸೋಮಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರು ಯುವ ವೇದಿಕೆ ವತಿಯಿಂದ ಡಿ.ದೇವರಾಜ ಅರಸು ಮುಖ್ಯ ರಸ್ತೆ ಬಳಿ ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಜಯಂತಿ ಅಂಗವಾಗಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಾಯಿತು. ಈ ವೇಳೆ ಮಾಜಿ ಸಂಸದ ಪ್ರತಾಪ ಸಿಂಹ, ಮೈಸೂರು ಯುವ ವೇದಿಕೆ ಸಂಚಾಲಕ ಪ್ರಮೋದ್‌ಗೌಡ, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾದ ವಸಂತ ಮುನೀಶ್, ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಕೆ.ಬಿ.ಲಿಂಗರಾಜು, ದಿನೇಶ್‌ಗೌಡ, ರಾಕೇಶ್‌ಭಟ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಮುಡಾ ಮಾಜಿ ಸದಸ್ಯ ನವೀನ್‌ಕುಮಾರ್, ಸಂದೇಶ್, ಗುರುರಾಜ್, ಮೋಹಿತ್‌ಗೌಡ ಇನ್ನಿತರರಿದ್ದರು.

ಇಂದು ವಿಷ್ಣು ಸ್ಮರಣೆ

ಮೈಸೂರು, ಡಿ.29– ಕರುಣಾಮಯಿ ವಿಷ್ಣುವರ್ಧನ್ ಅಭಿಮಾನಿ ಬಳಗದ ವತಿಯಿಂದ ಕರ್ನಾಟಕ ರತ್ನ, ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ 16ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಪೌರಕಾರ್ಮಿಕರಿಗೆ ಚಳಿಗಾಲದ ಟೋಪಿ, ಮಾಸ್ಕ್ ವಿತರಿಸುವ ಮೂಲಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಜಗನ್ಮೋಹನ ಅರಮನೆಯ ಮುಂಭಾಗ ಡಿ.30ರಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಅಧ್ಯಕ್ಷ ಎಸ್.ಎನ್.ರಾಜೇಶ್ ಮನವಿ ಮಾಡಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶಾಸಕ ಹರೀಶ್‌ಗೌಡ, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಅಭಿಮಾನಿ ಬಳಗದ ಒಕ್ಕೂಟದ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಇನ್ನಿತರರು ಭಾಗವಹಿಸಲಿದ್ದಾರೆ.

ಜ.11ರಿಂದ ಡಾ.ಅಂಬೇಡ್ಕರ್ ಚಿಂತನೆ ಆಧಾರಿತ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಎಡಿಸಿ ಡಾ.ಶಿವರಾಜು ಸಲಹೆ





ಮೈಸೂರು,ಡಿ.29(ಎಂಕೆ)–ಮೈಸೂರು ರಂಗಾಯಣದಲ್ಲಿ ಜ.11ರಿಂದ 18ರವರೆಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳ ಕುರಿತ 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ' ನಡೆಯಲಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸೂಚಿಸಿದರು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಂಗಾಯಣದಲ್ಲಿ ಈ ಬಾರಿ 25ನೇ ವರ್ಷದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ನಡೆಯುತ್ತಿದೆ. ಅದರಲ್ಲೂ ಅಂಬೇಡ್ಕರ್ ಅವರ ಚಿಂತನೆಗಳ ಕುರಿತು ನಾಟಕೋತ್ಸವ ನಡೆಯುವುದು ವಿಶೇಷ ಎಂದರು.

ಬಹುರೂಪಿ ನಾಟಕೋತ್ಸವದ ಯಶಸ್ಸಿಗಾಗಿ ರಂಗಾಯಣದ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆಗೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಬೇಕು. ಕುಡಿಯುವ ನೀರಿನ ಟ್ಯಾಂಕರ್ ವ್ಯವಸ್ಥೆ ಮಾಡಬೇಕು. ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ನೋಡಲ್ ಅಧಿಕಾರಿಯನ್ನು ನಿಯೋಜಿಸುವಂತೆ ತಿಳಿಸಿದರಲ್ಲದೆ, ಬೆಳಗ್ಗೆಯಿಂದ ಸಂಜೆವರೆಗೆ ಮಕ್ಕಳ ಬಹುರೂಪಿ ಕಾರ್ಯಕ್ರಮಗಳು ಇರುವುದರಿಂದ ಶಿಕ್ಷಣ ಇಲಾಖೆಯಿಂದ ಹೆಚ್ಚು ಮಕ್ಕಳು ಪಾಲ್ಗೊಳ್ಳುವಂತೆ ಮಾಡಬೇಕು ಎಂದರು.

24 ನಾಟಕಗಳು: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದಿಂದ ಪ್ರತಿಯೊಬ್ಬರು ಸಮಾನತೆಯಿಂದ ಬದುಕುವ ಅವಕಾಶ ದೊರಕಿದೆ. ಅವರ ಬಗ್ಗೆ ಹಲವಾರು ಸಂಶೋಧನೆಗಳು ನಡೆದಿವೆ ಮತ್ತು ನಡೆಯುತ್ತಲೂ ಇವೆ. ಹಾಗಾಗಿ ಅವರಿಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಬಹುರೂಪಿ ನಾಟಕೋತ್ಸವ ಆಯೋಜಿಸಲಾಗುವುದು. ವಿವಿಧ ಭಾಷೆಗಳ 24 ನಾಟಕ ಹಾಗೂ ಮಕ್ಕಳ 6 ನಾಟಕಗಳು, ವಿಚಾರ ಸಂಕಿರಣ ಸೇರಿದಂತೆ ಹತ್ತು–ಹಲವು ಕಾರ್ಯಕ್ರಮಗಳು ಇರಲಿವೆ ಎಂದರು. ಸಭೆಯಲ್ಲಿ ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣದ ಉಪ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ದೇಶ - ವಿದೇಶ

ರಷ್ಯಾ ಸೇನೆಗೆ ಸೇರಿದ್ದ 10 ಭಾರತೀಯರ ಸಾವು

ಮಾಸ್ಕೋ: ರಷ್ಯಾ–ಉಕ್ರೇನ್ ಯುದ್ಧ ನಡುವೆಯೇ ರಷ್ಯಾ ಸೇನೆಗೆ ಸೇರಿದ್ದ 10 ಭಾರತೀಯರ ಹತ್ಯೆಯಾಗಿದ್ದು ನಾಲ್ವರು ನಾಪತ್ತೆಯಾಗಿದ್ದಾರೆ ಎಂದು ವರದಿಯೊಂದು ತಿಳಿಸಿದೆ.



ಈ ಕುರಿತು ರಷ್ಯಾಗೆ ತೆರಳಿದ್ದ ಭಾರತ ಮೂಲದ ವ್ಯಕ್ತಿಯೊಬ್ಬರು ಮಾಹಿತಿ ನೀಡಿದ್ದು, ಅವರು ರಷ್ಯಾಗೆ ತೆರಳಿ ನಾಪತ್ತೆಯಾಗಿದ್ದ ತಮ್ಮ ಸಹೋದರನ ಪತ್ತೆಗಾಗಿ ತೆರಳಿದ್ದರು. ರಷ್ಯಾ ಸೇನೆಯಲ್ಲಿದ್ದ ಸುಮಾರು 10 ಮಂದಿ ಭಾರತ ಮೂಲದವರು ಉಕ್ರೇನ್ ಜೊತೆಗಿನ ಯುದ್ಧದಲ್ಲಿ ಸಾವನ್ನಪ್ಪಿದ್ದಾರೆ. ಇದು ರಷ್ಯಾ ಸೇನೆಯಲ್ಲಿರುವ ಇತರೆ ಭಾರತೀಯ ಸಮುದಾಯದಲ್ಲಿ ಆತಂಕ ಸೃಷ್ಟಿಯಾಗಿದೆ ಎಂದು ಹೇಳಿದ್ದಾರೆ.

ರಷ್ಯಾದಲ್ಲಿ ಮೃತಪಟ್ಟ 10 ಮಂದಿಯ ಪೈಕಿ ಮೂವರು ಪಂಜಾಬ್‌ನವರು. ಉಳಿದವರು ಜಮ್ಮು ಹಾಗೂ ಉತ್ತರ ಪ್ರದೇಶದವರು ಎಂದು ತಿಳಿಸಿದ್ದಾರೆ. ಆದರೆ, ಈ ಬಗ್ಗೆ ಅಧಿಕೃತ ಮಾಹಿತಿ ಇಲ್ಲ. ಯಾವ ಕಾರಣಕ್ಕಾಗಿ ಹತ್ಯೆಯಾಗಿದ್ದಾರೆ ಎನ್ನುವುದು ಇನ್ನಷ್ಟೇ ತಿಳಿಯಬೇಕಾಗಿದೆ.

ಭಾರತೀಯ ಸೇನೆಗೆ 79,000 ಕೋಟಿ ಮೌಲ್ಯದ ಆಧುನಿಕ ಶಸ್ತ್ರಾಸ್ತ್ರ ಖರೀದಿಗೆ ಡಿಎಸಿ ಅನುಮೋದನೆ

ನವದೆಹಲಿ: ಸೇನೆಯ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸಲು 79,000 ಕೋಟಿ ರೂ. ಮೌಲ್ಯದ ದೀರ್ಘ ಶ್ರೇಣಿಯ ರಾಕೆಟ್‌ಗಳು, ಕ್ಷಿಪಣಿಗಳು, ರಾಡಾರ್ ವ್ಯವಸ್ಥೆಗಳು ಸೇರಿದಂತೆ ವಿವಿಧ ಮಿಲಿಟರಿ ಸಲಕರಣೆಗಳ ಖರೀದಿಗೆ ರಕ್ಷಣಾ ಸಚಿವಾಲಯ ಅನುಮೋದನೆ ನೀಡಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ರಕ್ಷಣಾ ಸ್ವಾಧೀನ ಮಂಡಳಿ (ಡಿಸಿಎ) ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದೆ.



ಭಾರತೀಯ ಸೇನೆಯ ಆರ್ಟಿಲರಿ ರೆಜಿಮೆಂಟ್‌ಗಳಿಗೆ 'ಲಾಯ್ಟರ್ ಮ್ಯೂನಿಷನ್ ಸಿಸ್ಟಮ್' ಖರೀದಿಗೆ ಅನುಮೋದನೆ ದೊರೆತಿದೆ. ಇದು ಯುದ್ಧದ ವೇಳೆ ಗುರಿಗಳನ್ನು ನಿಖರವಾಗಿ ಹೊಡೆದುರುಳಿಸಲು ಸಹಕಾರಿಯಾಗಲಿದೆ. ಇದರೊಂದಿಗೆ, ಚಿಕ್ಕ ಗಾತ್ರದ ಹಾಗೂ ಕಡಿಮೆ ಎತ್ತರದಲ್ಲಿ ಹಾರುವ ಡ್ರೋನ್‌ಗಳನ್ನು ಪತ್ತೆಹಚ್ಚಲು 'ಲೋ ಲೆವೆಲ್ ಲೈಟ್ ವೇಟ್ ರಾಡಾರ್'ಗಳನ್ನು ಖರೀದಿಸಲಾಗುತ್ತದೆ. ಅಲ್ಲದೆ, ಪಿನಾಕಾ ರಾಕೆಟ್ ವ್ಯವಸ್ಥೆಯ ವ್ಯಾಪ್ತಿ ಮತ್ತು ನಿಖರತೆಯನ್ನು ಹೆಚ್ಚಿಸಲು 'ಲಾಂಗ್ ರೇಂಜ್ ಗೈಡೆಡ್ ರಾಕೆಟ್'ಗಳ ಖರೀದಿಗೆ ಅನುಮೋದನೆ ನೀಡಲಾಗಿದೆ.

ತೈವಾನ್ ಸುತ್ತಲೂ ಸಮರಾಭ್ಯಾಸಕ್ಕೆ ಸಜ್ಜಾದ ಚೀನಾ

ಬೀಜಿಂಗ್: ಸ್ವಾತಂತ್ರ್ಯದತ್ತ ಹೆಜ್ಜೆ ಇಡುತ್ತಿರುವ ತೈವಾನ್‌ಗೆ ಕಠಿಣ ಎಚ್ಚರಿಕೆ ನೀಡುವ ಉದ್ದೇಶದಿಂದ ಮತ್ತು ಯುದ್ಧ ಸನ್ನದ್ಧತೆಯನ್ನು ಪರೀಕ್ಷಿಸುವ ಸಲುವಾಗಿ ಚೀನಾ ತನ್ನ ಸೇನೆ, ನೌಕಾಪಡೆ, ವಾಯುಪಡೆಗಳನ್ನು ತೈವಾನ್ ಸುತ್ತಲೂ ನಿಯೋಜಿಸಿದೆ. ತೈವಾನ್ ಸುತ್ತಲಿನ ಐದು ವಲಯಗಳಲ್ಲಿ ನಾಳೆ (ಮಂಗಳವಾರ) ಬೆಳಗ್ಗೆ 8.30ರಿಂದ ಸಮುದ್ರ ಹಾಗೂ ವಾಯುಪ್ರದೇಶಗಲ್ಲಿ ಕವಾಯತು ನಡೆಸಲಾಗುವುದು ಎಂದು ಈಸ್ಟರ್ನ್ ಥಿಯೇಟರ್ ಕಮಾಂಡ್ ಹೇಳಿಕೆ ಬಿಡುಗಡೆ ಮಾಡಿದೆ. ಅಮೆರಿಕದ ಪ್ರಜಾ ಪ್ರತಿನಿಧಿ ಸಭೆಯ ಸ್ಪೀಕರ್ ಆಗಿದ್ದ ನ್ಯಾನ್ಸಿ ಪೆಲೊಸಿ ಅವರು 2022ರಲ್ಲಿ ತೈವಾನ್‌ಗೆ ಭೇಟಿ ನೀಡಿದಾಗಿನಿಂದ ಚೀನಾ ನಡೆಸುತ್ತಿರುವ ಆರನೇ ಪ್ರಮುಖ ಸಮರಾಭ್ಯಾಸ ಇದಾ ಗಿದೆ. ಈ ಸಮರಾಭ್ಯಾಸವು ಸ್ವತಂತ್ರ ತೈವಾನ್ ಪ್ರತ್ಯೇಕ ವಾದಿ ಶಕ್ತಿಗಳು ಮತ್ತು ಬಾಹ್ಯ ಹಸ್ತಕ್ಷೇಪಗಳಿಗೆ ಗಂಭೀರ ಎಚ್ಚರಿಕೆಯಾಗಲಿದೆ ಎಂದು ಚೀನಾದ ಈಸ್ಟರ್ನ್ ಥಿಯೇಟರ್ ಕಮಾಂಡ್ ವಕ್ತಾರ ಶಿ ಯಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ದೆಹಲಿ ವಾಯು ಗುಣಮಟ್ಟ ಅತ್ಯಂತ ಗಂಭೀರ; 128 ವಿಮಾನಗಳು ರದ್ದು

ನವದೆಹಲಿ: ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ದತ್ತಾಂಶದ ಪ್ರಕಾರ ಪೂರ್ವ ದೆಹಲಿಯ ವಿವೇಕ್ ವಿಹಾರ್ 456ರ AQI ಯೊಂದಿಗೆ ಅತ್ಯಂತ ಕೆಟ್ಟ ಗಾಳಿಯ ಗುಣಮಟ್ಟವನ್ನು ವರದಿ ಮಾಡಿದೆ. ಸಿಪಿಸಿಬಿ ಮಾನದಂಡಗಳ ಪ್ರಕಾರ 401 ಮತ್ತು 500ರ ನಡುವಿನ ವಾಯು ಗುಣಮಟ್ಟ ಗಂಭೀರ ವರ್ಗಕ್ಕೆ ಸೇರುತ್ತದೆ. ಇದು ಗಂಭೀರ ಆರೋಗ್ಯ ಅಪಾಯಗಳನ್ನುಂಟುಮಾಡುತ್ತದೆ.



ಮುಂದಿನ 3 ದಿನಗಳಲ್ಲಿ ನಗರದ ಗಾಳಿಯ ಗುಣಮಟ್ಟವು ತುಂಬಾ ಕಳಪೆಯಾಗಿ ಉಳಿಯುವ ನಿರೀಕ್ಷೆಯಿದೆ. ಮುಂದಿನ ಆರು ದಿನಗಳಲ್ಲಿ ಪರಿಸ್ಥಿತಿ ತುಂಬಾ ಕಳಪೆ ಮತ್ತು ಗಂಭೀರ ನಡುವೆ ಏರಿಳಿತಗೊಳ್ಳುವ ಸಾಧ್ಯತೆಯಿದೆ ಎಂದು ಎಚ್ಚರಿಕೆ ನೀಡಲಾಗಿದೆ. ಹದಗೆಡುತ್ತಿರುವ ಹವಾಮಾನ ಪರಿಸ್ಥಿತಿಯಿಂದಾಗಿ ದೆಹಲಿ ವಿಮಾನ ನಿಲ್ದಾಣದಿಂದ ನಿರ್ಗಮಿಸುವ ಮತ್ತು ಆಗಮಿಸುವ ಕನಿಷ್ಠ 128 ವಿಮಾನಗಳನ್ನು ರದ್ದುಗೊಳಿಸಲಾಗಿದೆ ಮತ್ತು ಎಂಟು ವಿಮಾನಗಳನ್ನು ಬೇರೆಡೆಗೆ ತಿರುಗಿಸಲಾಗಿದೆ. ಅಲ್ಲದೆ ಸುಮಾರು 200 ವಿಮಾನಗಳ ಸೇವೆ ವಿಳಂಬವಾಗಿದೆ.

ಉಕ್ರೇನ್–ರಷ್ಯಾ ಸಮರ ಕೊನೆಗೊಳಿಸಲು ಟ್ರಂಪ್‌ಗೆ 50 ವರ್ಷಗಳ ಭದ್ರತಾ ಗ್ಯಾರಂಟಿ ಕೇಳಿದ ಝೆಲೆನ್ಸ್ಕಿ

ಫ್ಲೋರಿಡಾ: ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧ ಕೊನೆಗೊಳಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರು ಭಾನುವಾರ ಫ್ಲೋರಿಡಾದ ಪಾಮ್ ಬೀಚ್‌ನಲ್ಲಿ ಸಭೆ ನಡೆಸಿದ್ದಾರೆ.



ಉಕ್ರೇನ್‌ಗಾಗಿ 20 ಅಂಶಗಳ ಶಾಂತಿ ಪ್ರಸ್ತಾವನೆಯ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮಗೆ ಮಾಹಿತಿ ನೀಡಿದ್ದಾರೆ ಎಂದು ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಸೋಮವಾರ ಹೇಳಿದ್ದಾರೆ. ಅಲ್ಲದೆ ಈ ಕುರಿತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಟ್ರಂಪ್ ಚರ್ಚಿಸಿದ್ದಾರೆ ಎಂದು ತಿಳಿಸಿದ್ದಾರೆ. ಸಭೆಯಲ್ಲಿ, ಮುಂದಿನ 50 ವರ್ಷಗಳವರೆಗೆ ವಿಸ್ತರಿಸುವ ದೀರ್ಘಾವಧಿಯ ಭದ್ರತಾ ಖಾತರಿ ನೀಡುವಂತೆ ಅಮೆರಿಕ ಅಧ್ಯಕ್ಷರಿಗೆ ಒತ್ತಾಯಿಸಿರುವು ದಾಗಿ ಝೆಲೆನ್ಸ್ಕಿ ತಿಳಿಸಿದ್ದಾರೆ. ಪ್ರಸ್ತಾವಿತ ಶಾಂತಿ ಚೌಕಟ್ಟಿನ ಕುರಿತು ಕೈವ್‌ನ ನಿಲುವನ್ನು ವಿವರಿಸುತ್ತಾ, ಉಕ್ರೇನ್, ಯುನೈಟೆಡ್ ಸ್ಟೇಟ್ಸ್ ಮತ್ತು ಯುರೋಪ್‌ನ ರಾಷ್ಟ್ರೀಯ ಭದ್ರತಾ ಸಲಹೆಗಾರರು ಮುಂದಿನ ದಿನಗಳಲ್ಲಿ ಭೇಟಿಯಾಗಬೇಕೆಂದು ಝೆಲೆನ್ಸ್ಕಿ ಹೇಳಿದರು.

ಕಾಡಾನೆಗಳ ದಾಂಧಲೆಯಿಂದ ಎರಡು ಆಟೋ, ಬೈಕ್ ಜಖಂ




ಕಾಡಾನೆಗಳ ದಾಂಧಲೆಯಿಂದ ಆಟೊ, ಬೈಕ್‌ಗಳಿಗೆ ಹಾನಿಯಾಗಿರುವುದು

ಮಡಿಕೇರಿ, ಡಿ.29–ಕಾಡಾನೆಗಳ ದಾಂಧಲೆಯಿಂದ ವಾಹನಗಳಿಗೆ ಹಾನಿಯಾಗಿರುವ ಘಟನೆ ನಾಪೋಕ್ಲು ಸಮೀಪದ ಬಲ್ಲಮಾವಟಿ ಗ್ರಾಮದ ಮಂಜಾಟ್ ಗಿರಿಜನ ಕಾಲೋನಿಯಲ್ಲಿ ನಡೆದಿದೆ.

ಮಂಜಾಟ್ ಗಿರಿಜನ ಕಾಲೋನಿಗೆ ಭಾನುವಾರ ರಾತ್ರಿ ದಾಳಿ ನಡೆಸಿದ ಕಾಡಾನೆಗಳ ಹಿಂಡು ಎರಡು ಆಟೋರಿಕ್ಷಾ ಹಾಗೂ ಬೈಕ್‌ಗಳಿಗೆ ಹಾನಿ ಮಾಡಿವೆ. ಕೆ.ಕೆ ಅರ್ಜುನ ಹಾಗೂ ಕೆ.ಪಿ ಪೂವಯ್ಯ ಎಂಬವರಿಗೆ ಸೇರಿದ ಎರಡು ಆಟೋ ಮತ್ತು ಪಿ.ಎಂ ಪೂಣಚ್ಚ ಎಂಬವರ ಬೈಕ್ (ಕೆಎ 12, ವಿ–6324)ಸೇರಿದಂತೆ ಒಟ್ಟು ಮೂರು ವಾಹನಗಳು ಹಾನಿಗೆ ಒಳಗಾಗಿವೆ. ಈ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು ಬೊಟ್ಟೋಳಂಡ, ಮೂವೇರಾ ಕುಟುಂಬಸ್ಥರಿಗೆ ಸೇರಿದ ಭತ್ತದ ಗದ್ದೆ ಸೇರಿದಂತೆ ಕಾಫಿ ತೋಟಗಳಿಗೂ ಹಾನಿಪಡಿಸಿವೆ.

ಇದೀಗ ಕಾಫಿ ತೋಟಗಳಲ್ಲಿ ಕಾಫಿ ಕೊಯ್ಲಿನ ಸಮಯವಾಗಿರುವುದರಿಂದ ಕೂಲಿ ಕಾರ್ಮಿಕರು ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಮಾತ್ರ ವಲ್ಲದೆ ವಿದ್ಯಾರ್ಥಿಗಳಿಗೆ ಶಾಲೆಗೆ ತೆರಳಲು ಸಮಸ್ಯೆ ಎದುರಾಗಿದ್ದು ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಈ ಕುರಿತು ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಂಡು ತಕ್ಷಣವೇ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಕೊಡವ ಅಭಿವೃದ್ಧಿ ನಿಗಮ ಸ್ಥಾಪನೆಗೆ
ಶಾಸಕರೊಂದಿಗೆ ಯುಕೊ ಸಂಘಟನೆ ಸಮಾಲೋಚನೆ



ಯುಕೊ ಸಂಘಟನೆಯ ನಿಯೋಗದ ಸದಸ್ಯರು ಶಾಸಕ ಎ.ಎಸ್.ಪೊನ್ನಣ್ಣರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಮಡಿಕೇರಿ, ಡಿ.29–ಕೊಡವ ಅಭಿವೃದ್ಧಿ ನಿಗಮ ಸ್ಥಾಪನೆ ಕುರಿತಂತೆ ಕೊಕ್ಕಲೆ ಮಾಡ ಮಂಜು ಚಿಣ್ಣಪ್ಪ ನೇತೃತ್ವದ ಯುಕೊ ಸಂಘಟನೆಯ ನಿಯೋಗ ಶಾಸಕ ಎ. ಎಸ್. ಪೊನ್ನಣ್ಣರನ್ನು ಭೇಟಿ ಮಾಡಿ ಚರ್ಚೆ ನಡೆಸಿತು.

ಪ್ರಸ್ತುತ ಸರ್ಕಾರದ ಯಾವುದೇ ಸವಲತ್ತುಗಳು ಸಮಗ್ರವಾಗಿ ತಲುಪಲು ಸಾಧ್ಯವಾಗುತ್ತಿಲ್ಲ. ಕೊಡವರಲ್ಲಿ ಶೇ.60ರಷ್ಟು ಹಿಂದುಳಿದವರಿದ್ದಾರೆ. ಶೇ.30ರಷ್ಟು ಮಂದಿ ಬಡತನ ರೇಖೆಗೂ ಕೆಳಗಿದ್ದಾರೆ. ಸರಕಾರ ಕೊಡವರಂತಹ ಅಲ್ಪಸಂಖ್ಯಾತರ ಸಮಗ್ರ ಏಳಿಗೆಯ ಬಗ್ಗೆ ಗಮನ ಹರಿಸುವುದು ಅನಿವಾರ್ಯವಾಗುತ್ತದೆ ಎಂದರು. ಈ ನಿಟ್ಟಿನಲ್ಲಿ ಸರ್ಕಾರ ಜನಾಂಗದ ಶ್ರೇಯೋಭಿವೃದ್ಧಿ ಹಿತದೃಷ್ಟಿಯಿಂದ ಮುಂಬರುವ ಬಜೆಟ್‌ನಲ್ಲಿಯೇ ಕೊಡವ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವಂತೆ ಶಾಸಕರನ್ನು ಯುಕೊ ಅಧ್ಯಕ್ಷ ಕೊಕ್ಕಲೆ ಮಾಡ ಮಂಜು ಚಿಣ್ಣಪ್ಪ, ಒತ್ತಾಯಿಸಿದರು.

ಮುಖ್ಯಮಂತ್ರಿಗಳೊಂದಿಗೆ ಈಗಾಗಲೇ ಕೊಡವ ಜನಾಂಗಕ್ಕೆ ನಿಗಮ ಸ್ಥಾಪಿಸುವ ಅನಿವಾರ್ಯತೆ ಬಗ್ಗೆ ಮನವರಿಕೆ ಮಾಡಲಾಗಿದೆ. ಇದಕ್ಕೆ ಅವರೂ ಕೂಡ ಪೂರಕವಾಗಿ ಸ್ಪಂದಿಸಿದ್ದಾರೆ. ಮುಂದಿನ ದಿನಗಳಲ್ಲಿ ಸೂಕ್ತ ಅನುದಾನ ಮೀಸಲಿರಿಸಿ ನೂತನವಾಗಿ ಕೊಡವ ಅಭಿವೃದ್ಧಿ ನಿಗಮ ಶೀಘ್ರದಲ್ಲೇ ಘೋಷಣೆಯಾಗುವ ವಿಶ್ವಾಸವಿದೆ ಎಂದು ಶಾಸಕ ಪೊನ್ನಣ್ಣ ಭರವಸೆ ನೀಡಿದರು.

ಕೊಡವರೂ ಸೇರಿದಂತೆ ಎಲ್ಲಾ ಜನಾಂಗದ ಹಿತ ಕಾಪಾಡುವ ನಿಟ್ಟಿನಲ್ಲಿ ಯಾವುದೇ ರಾಜಿಯಿಲ್ಲ. ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ಮಾಡುವುದಿಲ್ಲ. ಕೊಡಗಿನ ಸಮಗ್ರ ಅಭಿವೃದ್ಧಿಯ ಚಿಂತನೆ ಯೊಂದಿಗೆ ಸೇವೆಯನ್ನು ಯಾವುದೇ ತಾರತಮ್ಯವಿಲ್ಲದೆ ನಿರ್ವಹಿಸುವುದಾಗಿ ಪೊನ್ನಣ್ಣ ತಿಳಿಸಿದರು.

ಚೆಪ್ಪುಡಿರ ಸುಜು ಕರುಂಬಯ್ಯ, ನೆಲ್ಲಮಕ್ಕಡ ಜೆಫ್ರಿ ಮಾದಯ್ಯ, ಅಪ್ಪಾರಂಡ ವೇಣು ಪೊನ್ನಪ್ಪ, ಪುದಿಯೊಕ್ಕಡ ದಿನೇಶ್, ಅಜ್ಜಿನಿಕಂಡ ಸೂರಜ್ ತಿಮ್ಮಯ್ಯ, ತೀತಿಮಾಡ ಬೋಸ್ ಅಯ್ಯಪ್ಪ, ಮಚ್ಚಾಮಾಡ ರಮೇಶ್, ಬಾದುಮಂಡ ವಿಷ್ಣು ಕಾರ್ಯಪ್ಪ, ಕಾವಡಿಚಂಡ ದೀಪು ಉತ್ತಯ್ಯ, ಕಡೇಮಾಡ ತಿಮ್ಮಯ್ಯ, ಚೆಪ್ಪುಡಿರ ಪ್ರತಿಮ ಕರುಂಬಯ್ಯ, ಬೊಳ್ಳಚೆಟ್ಟಿರ ಮೈನ ಕಾಳಪ್ಪ, ಕಳ್ಳಿಚಂಡ ದೀನ ಉತ್ತಪ್ಪ, ತನ್ವಿ ಉತ್ತಪ್ಪ, ಕುಂಜಿಲಂಡ ಗ್ರೇಸಿ ಪೂಣಚ್ಚ, ಕೊಣಿಯಂಡ ಕಾವ್ಯ ಸೋಮಯ್ಯ ಉಪಸ್ಥಿತರಿದ್ದರು.

ಜಿಲ್ಲಾ ಯೋಜನಾ ಸಮಿತಿಗೆ ಸದಸ್ಯರ ಆಯ್ಕೆಗೆ ಜ.2 ರಂದು ನಾಮಪತ್ರ ಸಲ್ಲಿಕೆ

ಮಡಿಕೇರಿ,ಡಿ.29–ಜಿಲ್ಲಾ ಯೋಜನಾ ಸಮಿತಿಗೆ ಚುನಾವಣೆ ಮೂಲಕ ಸದಸ್ಯರ ಆಯ್ಕೆಗಾಗಿ ಜ. 2ರಿಂದ ಚುನಾವಣಾ ಪ್ರಕ್ರಿಯೆ ಆರಂಭಗೊಳ್ಳಲಿದೆ ಎಂದು ಚುನಾವಣಾಧಿಕಾರಿಯಾಗಿರುವ ಜಿಪಂ ಸಿಇಓ ಆನಂದ ಪ್ರಕಾಶ್ ಮೀನಾ ತಿಳಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಪೈಕಿ ಜಿಲ್ಲಾ ಯೋಜನಾ ಸಮಿತಿಗೆ ಎಂಟು ಮಂದಿಯನ್ನು ಆಯ್ಕೆ ಮಾಡಲು ಅವಕಾಶವಿದ್ದು, ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ತಮ್ಮ ನಾಮನಿರ್ದೇಶನ ಪತ್ರವನ್ನು ನಿಗದಿತ ನಮೂನೆ–1ರಲ್ಲಿ ಜ.2ರ ಬೆಳಗ್ಗೆ 11ರಿಂದ ಮಧ್ಯಾಹ್ನ 3 ಗಂಟೆವರೆಗೆ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಬಹುದಾಗಿದೆ.

ಅದೇ ಮಧ್ಯಾಹ್ನ 4 ಗಂಟೆಯಿಂದ 5.30 ಗಂಟೆವರೆಗೆ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರಗಳನ್ನು ಹಿಂಪ ಡೆದುಕೊಳ್ಳಲು ಜ.3ರ ಬೆಳಗ್ಗೆ 11ರಿಂದ 1 ಗಂಟೆಯವರೆಗೆ ಅವಕಾಶವಿರುತ್ತದೆ. ಮತದಾನ ಅವಶ್ಯವಿದ್ದರೆ ಜ.5ರ ಬೆಳಿಗ್ಗೆ 11ರಿಂದ 1.30ರವರೆಗೆ ಜಿಪಂ ಕೆಡಿಪಿ ಸಭಾಂಗಣದಲ್ಲಿ ಮತದಾನ ನಡೆಯಲಿದೆ. ಅಂದೇ ಮಧ್ಯಾಹ್ನ 3ರಿಂದ 5 ಗಂಟೆಯವರೆಗೆ ಮತಗಳ ಎಣಿಕೆ ನಡೆಯಲಿದೆ ಚುನಾವಣಾ ಅಧಿಕಾರಿಗಳಿಗೆ ಸಹಕರಿಸಲು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರನ್ನು ಸಹಾಯಕ ಚುನಾವಣಾಧಿಕಾರಿಯಾಗಿ ನೇಮಿಸಲಾಗಿದೆ ಎಂದು ಆನಂದ ಪ್ರಕಾಶ್ ಮೀನಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಉದ್ಯಮಗಳ ಕಾರ್ಯಾಗಾರ

ಮಡಿಕೇರಿ, ಡಿ.29–ಕೇಂದ್ರ ಮತ್ತು ರಾಜ್ಯ ಸರ್ಕಾರದ ಪುರಸ್ಕೃತವಾದ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಕಾರ್ಯಕ್ಷಮತೆ ಹೆಚ್ಚಿಸುವುದು ಹಾಗೂ ವೇಗಗೊಳಿಸುವುದು(ರ್‍ಯಾಂಪ್) ಯೋಜನೆಯಡಿ ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿಗೆ ಪಾಲುದಾರರಾದ ವಿವಿಧ ಇಲಾಖಾ ಅಧಿಕಾರಿಗಳಿಗೆ ಹಾಗೂ ಕೈಗಾರಿಕಾ ಸಂಘ–ಸಂಸ್ಥೆಗಳಿಗೆ know your msme eco system ಕಾರ್ಯಾಗಾರವು ಡಿ.30ರ ಬೆಳಗ್ಗೆ 10 ಗಂಟೆಗೆ ನಗರದ ಹೋಟೆಲ್ ರಾಜ್‌ದರ್ಶನ್ ಹಾಲ್‌ನಲ್ಲಿ ನಡೆಯಲಿದೆ.

ಅರೇಮೇರಿ ಎಸ್‌ಎಂಎಸ್ ವಿದ್ಯಾಪೀಠ ಶಾಲೆಯ ವಾರ್ಷಿಕೋತ್ಸವ



ಅರೇಮೇರಿ ಎಸ್‌ಎಂಎಸ್ ಶಾಲೆಯ ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಗಣ್ಯರು

ವಿರಾಜಪೇಟೆ: ತಾಲೂಕಿನ ಅರೇಮೇರಿ ಎಸ್‌ಎಂಎಸ್ ವಿದ್ಯಾಪೀಠ ಶಾಲೆಯಲ್ಲಿ ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಪೊನ್ನಣ್ಣ, ವಸುದೈವ ಕುಟುಂಬಕಂ ಎಂಬ ಧ್ಯೇಯ ವಾಕ್ಯದೊಂದಿಗೆ ನಡೆಯುತ್ತಿರುವ ಈ ವಾರ್ಷಿಕೋತ್ಸವವು, ಸಂಸ್ಥೆಯ ವಿಶಾಲ ಮನೋಭಾವ, ಧ್ಯೇಯವನ್ನು ಸಾರುತ್ತದೆ ಪ್ರಪಂಚವೇ ಒಂದು ಕುಟುಂಬ ಎಂದು ಸಾರುವ ಈ ಧ್ಯೇಯ ವಾಕ್ಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದಶಕಗಳಿಂದ ಈ ವಿದ್ಯಾಸಂಸ್ಥೆ ವಿದ್ಯಾರ್ಥಿ ಗಳಿಗೆ ಉತ್ತಮ ಸೌಲಭ್ಯವನ್ನು ಒದಗಿಸುತ್ತ ಬಂದಿದೆ. ಇಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಈಗಾಗಲೇ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಹೆಸರನ್ನು ಪಡೆದು,ನಾಡಿನ ಒಳಿತಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವಂತೆ ಕಿವಿಮಾತು ಹೇಳಿದರು.

ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಉತ್ತಮ ಶಿಕ್ಷಣ ಸಂಸ್ಥೆಗಳಿಂದ ವಿದ್ಯೆ ಪಡೆದಾಗ ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಏರಲು ಸಹಕಾರವಾಗಲಿದೆ ಎಂದು ಶಿಕ್ಷಣ ಸಂಸ್ಥೆಗೆ ಶುಭ ಕೋರಿದರು. ಸಂಸ್ಥೆಯ ರೂವಾರಿ ಕಳಂಚೇರಿ ಮಠದ ಪೀಠಾಧಿಪತಿ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಅರಮೇರಿ ಎಂಬ ಚಿಕ್ಕ ಗ್ರಾಮದಲ್ಲಿ ಉತ್ತಮವಾದ ಶಿಕ್ಷಣ ಸಂಸ್ಥೆಯನ್ನು ಕಟ್ಟುವುದು ಸುಲಭದ ಮಾತಲ್ಲ. ಈ ನಿಟ್ಟಿನಲ್ಲಿ ಶಿಕ್ಷಕರ ಗ್ರಾಮಸ್ಥರ, ವಿದ್ಯಾರ್ಥಿಗಳ ಹಾಗೂ ಆಡಳಿತ ಮಂಡಳಿಯ ಸಹಕಾರದಿಂದ ಎಸ್‌ಎಂಎಸ್ ಎಂಬ ವಿದ್ಯಾಸಂಸ್ಥೆ ಇಂದು ಬೆಳೆದು ನಿಂತಿದೆ. ಈ ಎಲ್ಲಾ ಬೆಳವಣಿಗೆಗೆ ಲಿಂಗೈಕ್ಯ ಶ್ರೀ ಶ್ರೀ ಶಾಂತಮಲ್ಲ ಸ್ವಾಮೀಜಿಗಳೇ ಕಾರಣಕರ್ತರು ಎಂದರು.

ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡೀರ ಅರುಣ್ ಮಾಚಯ್ಯ, ಸಂಸ್ಥೆ ಕಾರ್ಯದರ್ಶಿ ವಿರೂಪಾಕ್ಷಯ್ಯ ಮಾತನಾಡಿದರು. ಪ್ರಾಂಶುಪಾಲರಾದ ಕುಸುಮ್ ಟಿಟ್ಟೋ ಶಾಲೆಯ ಪ್ರಾರಂಭ ಮತ್ತು ಪ್ರಸ್ತುತ ಶಾಲೆಯ ಕಾರ್ಯ ವೈಖರಿಗಳ ಬಗ್ಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ಪೂರ್ವ ವಿದ್ಯಾರ್ಥಿಗಳು ಉನ್ನತ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವುದನ್ನು ಮನಗಂಡು ಸಂಸ್ಥೆ ವತಿಯಿಂದ ಶಾಸಕ ಎ.ಎಸ್.ಪೊನ್ನಣ್ಣ, ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ, ಮತ್ತು ಸಂಸ್ಥೆಯ ಕಾರ್ಯದರ್ಶಿ ವಿರೂಪಾಕ್ಷಯ್ಯ ಅವರನ್ನು ಸನ್ಮಾನಿಸಲಾಯಿತು.

ಮೂರ್ನಾಡಿನಲ್ಲಿ ಇಂದು ಹಾಕಿ ಫೈನಲ್

ಮಡಿಕೇರಿ, ಡಿ.29–ಕೊಡವ ಹಾಕಿ ಅಕಾಡೆಮಿ ವತಿಯಿಂದ ಮೂರ್ನಾಡಿನ ಬಾಚೆಟ್ಟೀರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯಲ್ಲಿ ಚೆಪ್ಪುಡಿರ ಮತ್ತು ಕುಲ್ಲೇಟಿರ ತಂಡಗಳು ಫೈನಲ್ ಪ್ರವೇಶಿಸಿವೆ.

ಮೂರ್ನಾಡಿನ ಬಾಚೆಟ್ಟೀರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ಡಿ.30ರ ಬೆಳಿಗ್ಗೆ 10.30 ಗಂಟೆಗೆ ಅಂತಿಮ ಪಂದ್ಯ ನಡೆಯಲಿದೆ. ಇಂದು ನಡೆದ ಸೆಮಿಫೈನಲ್‌ನಲ್ಲಿ ಮಂಡೇಪಂಡ ಮತ್ತು ಚೆಪ್ಪುಡಿರ ನಡುವಿನ ಪಂದ್ಯದಲ್ಲಿ ಚೆಪ್ಪುಡಿರ ತಂಡ 4–3 ಗೋಲುಗಳ ಅಂತರದಲ್ಲಿ ಜಯ ದಾಖಲಿಸಿತು. ಚೆಪ್ಪುಡಿರ ಚೇತನ್ 2, ಪ್ರಣವ್ ಹಾಗೂ ಮಾದಪ್ಪ ತಲಾ 1 ಗೋಲು ಬಾರಿಸಿದರು. ಮಂಡೇಪಂಡ ಪರ ದಿಲನ್ ದೇವಯ್ಯ 2 ಹಾಗೂ ಚಂದನ್ ಕಾರ್ಯಪ್ಪ 1 ಗೋಲು ದಾಖಲಿಸಿದರು.

ಕುಲ್ಲೇಟಿರ ಮತ್ತು ಕುಪ್ಪಂಡ ತಂಡಗಳು ನಿಗದಿತ ಅವಧಿಯಲ್ಲಿ ಶೂನ್ಯ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ನಂತರ ನಡೆದ ಶೂಟ್ ಔಟ್‌ನಲ್ಲಿ 3–0 ಗೋಲುಗಳ ಅಂತರದಲ್ಲಿ ಕುಲ್ಲೇಟಿರ ಗೆಲುವು ಸಾಧಿಸಿತು.


ಪಾಡಿಯಮ್ಮಂಡ ಸುಬ್ಬಮ್ಮಯ್ಯ ನಿಧನ



ನಾಪೋಕ್ಲು, ಡಿ.29– ಮೂಲತಃ ನಾಪೋಕ್ಲು ಹಳೇ ತಾಲೂಕು ನಿವಾಸಿ ಮೈಸೂರು ವಿಜಯನಗರ ಎರಡನೇ ಬಡಾವಣೆಯಲ್ಲಿ ವಾಸವಾಗಿದ್ದ ಆರೋಗ್ಯ ಇಲಾಖೆಯ ನಿವೃತ್ತ ಉದ್ಯೋಗಿ ಪಾಡಿಯಮ್ಮಂಡ ಸುಬ್ಬಮ್ಮಯ್ಯ(92) ಸೋಮವಾರ ನಿಧನರಾದರು.

ಮೃತರು ಪತ್ನಿ ಇಬ್ಬರು ಪುತ್ರಿಯರು ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ. ಪಾಡಿಯಮ್ಮಂಡ ಸುಬ್ಬಮ್ಮಯ್ಯ ಅವರ ಅಂತ್ಯಕ್ರಿಯೆ ಮಂಗಳವಾರ ಮೈಸೂರಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸತೀಶ್ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಬೇತು ಗ್ರಾಮದ ನಿವಾಸಿ ಪಟ್ಟಣದಲ್ಲಿ ಹೇರ್ ಡ್ರೆಸ್ಸೆಸ್ ಮಳಿಗೆ ಮಾಲೀಕರಾಗಿದ್ದ ಸತೀಶ್ (47) ಹೃದಯಾಘಾತದಿಂದ ಸೋಮವಾರ ನಿಧನರಾದರು. ಮೃತರು ತಾಯಿ, ಪತ್ನಿ ಇಬ್ಬರು ಪುತ್ರಿಯರು, ಮಕ್ಕಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಇಲ್ಲಿನ ಹಿಂದೂ ರುದ್ರಭೂಮಿಯಲ್ಲಿ ಜರುಗಿತು.

ಕುವೆಂಪು ವಿಶ್ವ ಮಾನವ ಸಂದೇಶ ನಿತ್ಯನೂತನವಾಗಿರಲಿ



ವಡಗೆರೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಸೋಮವಾರ ನಡೆದ ಕುವೆಂಪು ಜನ್ಮದಿನಾಚರಣೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿದರು.

ಯಳಂದೂರು, ಡಿ.29(ವಿ.ಎನ್)–ಕುವೆಂಪು ಸಾರಿದ ವಿಶ್ವ ಮಾನವ ಸಂದೇಶ ನಿರಂತರವಾಗಿದ್ದು, ಅವರನ್ನು ನೆನಪಿಸಿಕೊಳ್ಳುವ ಕೆಲಸ ನಿತ್ಯ ನೂತನವಾಗಿರಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದ್ದಾರೆ. ತಾಲೂಕಿನ ವಡಗೆರೆ ಗ್ರಾಮದಲ್ಲಿ ತಾಲೂಕು ಕಸಾಪ, ಪ್ರತಿಧ್ವನಿ ಸಾಂಸ್ಕೃತಿಕ ಕಲಾವೇದಿಕೆ ಹಮ್ಮಿಕೊಂಡಿದ್ದ ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ ಹಾಗೂ ಸಂಚಿ ಹೊನ್ನಮ್ಮ ಸೇವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗುಡಿ, ಗೋಪುರ, ಚರ್ಚು, ಮಸೀದಿಗಳನ್ನು ಬಿಟ್ಟು ಹೊರಬನ್ನಿ, ಜಾತಿ, ಧರ್ಮದಿಂದ ದೂರವಿರಿ ಎಂದು ಕರೆ ನೀಡಿದ್ದರು ಎಂದರು.

ಸಾಹಿತಿ ಸೋಮಶೇಖರ ಬಿಸಲ್ವಾಡಿ ಮಾತನಾಡಿ, ಕುವೆಂಪು ಪಂಚಮಂತ್ರಗಳ ಮೂಲಕ ಜೀವನ ನಡೆಸುವ ನೀತಿ ಕಲಿಸಿದ ದಾರ್ಶನಿಕರಾಗಿದ್ದಾರೆ. ಮನುಜಮತ ವಿಶ್ವಪಥ ಎಂಬ ವಾಕ್ಯದೊಂದಿಗೆ ವಿಶ್ವ ಬಂಧುತ್ವಕ್ಕೆ ನಾಂದಿ ಹಾಡಿದ್ದರು. ಇವರನ್ನು ಅಭ್ಯಸಿಸುವ ಹಾಗೂ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳುವ ಕೆಲಸವನ್ನು ಇಂದಿನ ವಿದ್ಯಾರ್ಥಿಗಳು ಮಾಡಬೇಕು ಎಂದು ಸಲಹೆ ನೀಡಿದರು.

ವಿಶೇಷ ಚೇತನರ ಸೇವಾ ಕ್ಷೇತ್ರಕ್ಕೆ ಚಂಗಚಹಳ್ಳಿ ಮಹದೇವಪ್ಪ, ಶಿಕ್ಷಣ ಜನಪದ ಗಾಯನಕ್ಕೆ ಅಂಬಳೆ ನಂಜಮ್ಮಣಿ, ಪೌರ ಕಾರ್ಮಿಕೆ ಜ್ಯೋತಿರವರಿಗೆ ಸಂಚಿಹೊನ್ನಮ್ಮ ಸೇವಾ ಪ್ರಶಸ್ತಿ ಹಾಗೂ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಸವರಾಜು ಅವರನ್ನು ಸನ್ಮಾನಿಸಲಾಯಿತು. ಕಸಾಪ ಅಧ್ಯಕ್ಷ ಯರಿಯೂರು ಎನ್.ನಾಗೇಂದ್ರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರತಿಧ್ವನಿ ಸಾಂಸ್ಕೃತಿಕ ಕಲಾ ವೇದಿಕೆಯ ಎಸ್. ಜೈಗುರು ಮತ್ತು ತಂಡದವರು ಕುವೆಂಪು ಗೀತ ಗಾಯನ ನಡೆಸಿಕೊಟ್ಟರು.

ಗ್ರಾಪಂ ಅಧ್ಯಕ್ಷೆ ವಸಂತ, ವೈದ್ಯೆ ಡಾ. ಶಶಿಕಲಾ ರಮೇಶ್ ಉಡುಪ, ಬಿಳಿಗಿರಿ ರಂಗನಾಥಸ್ವಾಮಿ ದೇಗುಲ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ. ಶ್ರೀನಿವಾಸ್ ಸದಸ್ಯ ರಾಜಣ್ಣ, ಸಮಾಜ ಸೇವಕ ಲೋಕೇಶ್ ಸೀಗಡಿ, ಕಸಾಪ ಕೋಶಾಧ್ಯಕ್ಷ ಫೈರೋಜ್‌ಖಾನ್, ಜಿಪಂ ಮಾಜಿ ಸದಸ್ಯ ವಡಗೆರೆ ದಾಸ್, ತಾಪಂ ಮಾಜಿ ಸದಸ್ಯ ವೈ.ಕೆ. ಮೋಳೆ, ನಾಗರಾಜು, ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ಪಪಂ ನಾಮನಿರ್ದೇಶಿತ ಸದಸ್ಯ ಲಿಂಗರಾಜಮೂರ್ತಿ, ಶಾಲೆಯ ಪ್ರಾಂಶುಪಾಲ ಆರ್.ಬಸವಣ್ಣ ಸೇರಿದಂತೆ ಅನೇಕರು ಇದ್ದರು.

ಉಪ್ಪಾರ ಸಮಾಜದ ಯುವಕರು ದೇಶ, ವಿದೇಶಗಳಲ್ಲೂ ಉನ್ನತ ಹುದ್ದೆ ಅಲಂಕರಿಸಲಿ



ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮಕ್ಕಳನ್ನು ಅಭಿನಂದಿಸಲಾಯಿತು.

ಕೊಳ್ಳೇಗಾಲ, ಡಿ.29–ಉಪ್ಪಾರ ಸಮಾಜ ಶೈಕ್ಷಣಿಕವಾಗಿ ಸುಶಿಕ್ಷಿತರಾಗಿ ರಾಜ್ಯ ಮಾತ್ರವಲ್ಲ ದೇಶದಲ್ಲೂ ಉನ್ನತ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವಂತಾಗಬೇಕು ಎಂದು ಶಾಸಕ ಎ ಆರ್ ಕೃಷ್ಣಮೂರ್ತಿ ಹೇಳಿದ್ದಾರೆ.

ಕೊಳ್ಳೇಗಾಲ, ಹನೂರು ತಾಲೂಕು ಉಪ್ಪಾರ ಸರ್ಕಾರಿ ನೌಕರರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಕ್ಯಾಲೆಂಡರ್ ಬಿಡುಗಡೆ ಮಾಡಿದ ಅವರು, ಸುಶಿಕ್ಷಿತ ಸಮಾಜದ ಅಭ್ಯುದಯಕ್ಕೆ ಬದ್ಧನಾಗಿರುವುದಾಗಿ ಹೇಳಿದರು.

ಉಪ್ಪಾರ ಸಮಾಜ ರಾಜಕೀಯ ವ್ಯವಸ್ಥೆಯಲ್ಲಿ ಬಲಿಷ್ಠರಾಗಬೇಕು, ಸಮಾಜದ ಎಚ್‌ಸಿ ನೀರಾವರಿ ಅವರಿಗಾಗಿ ದೇವೇಗೌಡರ ಮಾತಿನ ಮೇರೆಗೆ ಅಂದು ನಾನು ವಿಧಾನ ಪರಿಷತ್ ಸದಸ್ಯ ತ್ಯಾಗ ಮಾಡಿದ್ದಾಗಿ ಮೆಲುಕು ಹಾಕಿದರು.

ನಾನು ಹಲವು ಸಭೆ ಸಮಾರಂಭಗಳಲ್ಲಿ ವಿಷಯಕ್ಕೆ ಅನುಗುಣವಾಗಿ ಮಾತನಾಡಿರುತ್ತೇನೆ, ಅದು ಯಾರನ್ನೊ ಉದ್ದೇಶಿಸಿ ಅಲ್ಲ, ಅಥವಾ ಯಾರನ್ನೊ ಓಲೈಸುವುದಕ್ಕಾಗಿ ಮಾತನಾಡಿಲ್ಲ, ಕೆಲವು ವೇಳೆ ಅರ್ಥೈಸಿಕೊಳ್ಳುವಲ್ಲಿ ಎಡವಿ ಮಾತನಾಡಿರಬಹುದು. ಆದರೆ ಇದಕ್ಕೆ ಮುಖಂಡರು ಅನ್ಯ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು ಬೇಡ ಎಂದರು.

ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಮಾದೇಶ್ ಮಾತನಾಡಿ ನಮ್ಮ ಸಂಘ ಸಮಾಜದ ಅಭ್ಯುದಯ ಕ್ಕಾಗಿ ಶ್ರಮಿಸುತ್ತಿದ್ದು, ಸಮಾಜದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಉನ್ನತ ಶಿಕ್ಷಣಕ್ಕಾಗಿ ಅನೇಕ ಕಾರ್ಯಕ್ರಮ ರೂಪಿಸಿ ಸ್ಪಂದಿಸುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಎಸ್.ಎಸ್. ಎಲ್.ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ 51 ಮಕ್ಕಳನ್ನು ನಗದು ಪುರಸ್ಕಾರದೊಂದಿಗೆ ಸನ್ಮಾನಿಸಲಾಯಿತು.

ನೌಕರರ ಸಂಘದ ಅಧ್ಯಕ್ಷ ಪ್ರಿಯಾಶಂಕರ್, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕುಂತೂರು ರಾಜೇಂದ್ರ, ಉಪ್ಪಾರ ನಿಗಮದ ಮಾಜಿ ರಾಜ್ಯಾಧ್ಯಕ್ಷ ಶಿವಕುಮಾರ್, ಜಿ.ಪಂ ಮಾಜಿ ಉಪಾಧ್ಯಕ್ಷ ಯೋಗೇಶ್, ಉಪ್ಪಾರ ಸಂಘದ ಅಧ್ಯಕ್ಷ ರಮೇಶ್, ಕಾರ್ಯದರ್ಶಿ ಸೋಮಣ್ಣ ಉಪ್ಪಾರ್, ತಾಪಂ ಮಾಜಿ ಸದಸ್ಯ ಮರಿಸ್ವಾಮಿ,, ರೇವಣ್ಣ, ರಾಜು, ಉಪ್ಪಾರ ನೌಕರರ ಸಂಘದ ಪದಾಧಿಕಾರಿಗಳು ಇದ್ದರು

ಭಗೀರಥ ಉಪ್ಪಾರ ನೌಕರರ ಸಂಘದ ಸಮಾರಂಭದಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಪ್ರಿಯಾಕೃಷ್ಣ ಮಾದೇಶ್, ಶಿವಕುಮಾರ್, ರಾಜು, ಸೋಮಣ್ಣ ಇನ್ನಿತರರಿದ್ದರು.

ಹೇಮಂತ್‌ಗೆ ಮಿಸ್ಟರ್ ಇಂಡಿಯಾ ಕಿರೀಟ

ಚಾಮರಾಜನಗರ, ಡಿ.29–ಮಿಸ್ಟರ್ ಇಂಡಿಯಾ ಸ್ಪರ್ಧೆಯಲ್ಲಿ ಕೋಡಿಮೋಳೆ ಬಸವನಪುರದ ವಿದ್ಯಾರ್ಥಿ ಬಿ.ಆರ್. ಹೇಮಂತ್ ಮಿಸ್ಟರ್ ಇಂಡಿಯಾ ತನ್ನ ಮುಡಿಗೇರಿಸಿಕೊಂಡು ಅಂತಾರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ



ಗೋವಾದಲ್ಲಿ ಶನಿವಾರ ಫಿಟ್ನೆಸ್ ಇಂಟರ್ ನ್ಯಾಷನಲ್ ಫೆಡರೇಷನ್ ವತಿಯಿಂದ ನಡೆದ ಮಿಸ್ಟರ್ ಇಂಡಿಯಾ ಸ್ಪರ್ಧೆಯಲ್ಲಿ ಹೇಮಂತ್ ಭಾಗವಹಿಸಿ ಫಿಜಿಕ್ಯೂ ಸೀನಿಯರ್ ಹಾಗೂ ಜೂನಿಯರ್ ಓವರಾಲ್ ಚಾಂಪಿಯನ್‌ಷಿಪ್ ತನ್ನದಾಗಿಸಿಕೊಂಡು ಮಿಂಚಿದ್ದಾರೆ. ಇವರು ಕೋಡಿಮೋಳೆ ಬಸವನಪುರ ಗ್ರಾಮದ ಬಿ.ಜಿ ರವಿಕುಮಾರ್ ಪುತ್ರ, ಎಂಬಿಎ ಪದವಿ ಮುಗಿಸಿ. ಮಂಗಳೂರಿನ ಜಿಮ್‌ವೊಂದರಲ್ಲಿ ವರ್ಕೌಟ್ ಮಾಡುತ್ತಾ ಉದ್ಯೋಗಕ್ಕಾಗಿ ಪ್ರಯತ್ನ ಮಾಡುತ್ತಿದ್ದಾರೆ.

ಸಂತಸ ತಂದಿದೆ: ಈ ಸ್ಪರ್ಧೆಯಲ್ಲಿ ಮಿಸ್ಟರ್ ಇಂಡಿಯಾ ಮುಡಿಗೇರಿಸಿಕೊಂಡಿರುವುದು ತುಂಬಾ ಸಂತಸವಾಗಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಗೆಲುವಿನ ನಗೆ ಬೀರುವ ಇಂಗಿತ ವ್ಯಕ್ತಪಡಿಸಿದರು.

ಅಭಿನಂದನೆ : ಮಿಸ್ಟರ್ ಇಂಡಿಯಾ ತನ್ನ ಮುಡಿಗೇರಿಸಿಕೊಂಡಿರುವ ಬಿ.ಆರ್. ಹೇಮಂತ್ ಅವರನ್ನು ಕಾಂಗ್ರೆಸ್ ಮುಖಂಡ ಜಡೇಸ್ವಾಮಿ, ಕೋಡಿಮೋಳೆ ಬಸವನಪುರ ಗ್ರಾಮಸ್ಥರು ಅಭಿನಂದಿಸಿದ್ದಾರೆ.


ಕೆಪಿಸಿಸಿ ಕಾನೂನು ವಿಭಾಗದ ರಾಜ್ಯ ಕಾರ್ಯದರ್ಶಿ ನೇಮಕ

ಚಾಮರಾಜನಗರ, ಡಿ.29– ಪ್ರದೇಶ ಕಾಂಗ್ರೆಸ್ ಸಮಿತಿಯ ಕಾನೂನು, ಮಾನವಹಕ್ಕುಗಳು ಹಾಗೂ ಮಾಹಿತಿ ಹಕ್ಕು ವಿಭಾಗದ ರಾಜ್ಯ ಕಾರ್ಯದರ್ಶಿಯಾಗಿ ಕನಿಷ್ಟ ವೇತನ ಸಲಹಾ ಮಂಡಳಿಯ ಮಾಜಿ ಅಧ್ಯಕ್ಷ ಹಿರಿಯ ವಕೀಲ ಎಂ. ಚಿನ್ನಸ್ವಾಮಿ ನೇಮಕಗೊಂಡಿದ್ದಾರೆ. ಬೆಂಗಳೂರಿನಲ್ಲಿರುವ ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಚಿನ್ನಸ್ವಾಮಿಗೆ ನೇಮ ಕಾತಿ ಪತ್ರ ನೀಡಿದರು. ಕೊಳ್ಳೇಗಾಲದ ಮಾಜಿ ಶಾಸಕ ಜಿ. ಎನ್. ನಂಜುಂಡಸ್ವಾಮಿ ಮತ್ತು ಮುಖಂಡರು ಉಪಸ್ಥಿತರಿದ್ದರು.



ಎಂ. ಚಿನ್ನಸ್ವಾಮಿ

ಗುಂಡ್ಲುಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳ ಅವಿರೋಧ ಆಯ್ಕೆ



ಗುಂಡ್ಲುಪೇಟೆ, ಡಿ.29(ಸೋಮ್. ಜಿ)–ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಬಸವರಾಜು, ಪ್ರಧಾನ ಕಾರ್ಯದರ್ಶಿಯಾಗಿ ಚಂದ್ರು ಹಾಗೂ ಇನ್ನಿತರೆ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪಟ್ಟಣದ ಪ್ರವಾಸಿಮಂದಿರದಲ್ಲಿ ನಡೆದ ಸಭೆಯಲ್ಲಿ ಸಂಘದ ಪದಾಧಿಕಾರಿಗಳ ಅವಿರೋಧ ಆಯ್ಕೆಯನ್ನು ಮುಖ್ಯ ಚುನಾವಣಾಧಿಕಾರಿ ಎಂ.ಇ. ಮಂಜುನಾಥ್ ಘೋಷಣೆ ಮಾಡಿದರು. ಸಹಾಯಕ ಚುನಾವಣಾಧಿಕಾರಿಗಳಾಗಿ ಸಿ.ಮಹೇಂದ್ರ, ವಿಜಯ ಕುಮಾರ್ ಕರ್ತವ್ಯ ನಿರ್ವಹಿಸಿದರು. ಆಯ್ಕೆಯಾದ ನೂತನ ಪದಾಧಿಕಾರಿಗಳಿಗೆ ಚುನಾವಣಾಧಿಕಾರಿಗಳು ಪ್ರಮಾಣಪತ್ರ ವಿತರಿಸಿದರು. ಉಪಾಧ್ಯಕ್ಷರಾಗಿ ರಾಜೇಶ್‌ಕೃಷ್ಣ, ಗೋಪಾಲಸ್ವಾಮಿ, ಕಾರ್ಯದರ್ಶಿಗಳಾಗಿ ಜನಾರ್ಧನ್, ಶೇಖರ್ ಖಜಾಂಚಿಯಾಗಿ ಮಣಿಕಂಠ ಅವಿರೋಧವಾಗಿ ಆಯ್ಕೆಯಾದರು.

ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದಲಿಂಗಸ್ವಾಮಿ ಮಾತನಾಡಿ, ಜಿಲ್ಲೆಯ ನಾಲ್ಕು ತಾಲೂಕು ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿರುವುದು ವಿಶೇಷವಾಗಿದ್ದು ರಾಜ್ಯ ಸಮಿತಿಯ ನಿರ್ದೇಶನದಂತೆ ಪಾರದರ್ಶಕವಾಗಿ ಲಿಖಿತವಾಗಿ ಚುನಾವಣಾ ನಡೆಸಲಾಗಿದೆ ಎಂದರು

ಜಿಲ್ಲಾ ಚುನಾವಣಾ ಸಮಯದಲ್ಲಿ ನೀಡಿದ ಭರವಸೆಯಂತೆ ಪತ್ರಕರ್ತರಿಗೆ ಆರ್ಥಿಕವಾಗಿ ನೆರವು ನೀಡುವ ಉದ್ದೇಶದಿಂದ ಕ್ಷೇಮಾಭಿವೃದ್ಧಿ ಸ್ಥಾಪನೆ ಹಾಗೂ ತಾಲೂಕು ಕೇಂದ್ರಗಳಲ್ಲಿ ಪತ್ರ ಕರ್ತರ ಭವನ ನಿರ್ಮಾಣ ಮಾಡಲು ಮುಂದಾಗುವುದಾಗಿ ಹೇಳಿದರು. ಜಿಲ್ಲಾ ಕಾರ್ಯಕಾರಣಿ ಸಮಿತಿಯ ಸದಸ್ಯರಾದ ಮಹೇಶ್, ಎಂ.ಮಲ್ಲೇಶ್, ತಾಲೂಕು ಪತ್ರಕರ್ತರ ಸಂಘದ ಸದಸ್ಯರು ಇದ್ದರು.

ಸಂತೇಮರಹಳ್ಳಿ ಎಎಸ್‌ಐ ನಿಧನ

ಯಳಂದೂರು, ಡಿ.29–ಸಮೀಪದ ಸಂತೇಮರಹಳ್ಳಿ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ನಾಗನಾಯಕ (51) ಹೃದಯಾಘಾತದಿಂದ ಸೋಮವಾರ ನಿಧನರಾದರು.



ನಾಗನಾಯಕ ಅವರು ಕಸ್ತೂರು ಬಂಡಿ ಜಾತ್ರೆ ಹಿನ್ನೆಲೆಯಲ್ಲಿ ಕೆಲ್ಲಂಬಳ್ಳಿ ಗ್ರಾಮದಲ್ಲಿ ರಾತ್ರಿ ಬಂದೋಬಸ್ತ್ ಕರ್ತವ್ಯ ಮುಗಿಸಿ ಇಂದು ಬೆಳಗ್ಗೆ ತಾನೆ ಮನೆಗೆ ಬಂದಿದ್ದರು. ಮನೆಗೆ ಬಂದ ಕೆಲ ಹೊತ್ತಿನಲ್ಲೇ ಎದೆ ನೋವು ಕಾಣಿಸಿಕೊಂಡಿದ್ದು ಕೂಡಲೇ ನಗರದ ಜೆಎಸ್‌ಎಸ್ ಆಸ್ಪತ್ರೆಗೆ ತೆರಳಿದ್ದು ಆಸ್ಪತ್ರೆಯಲ್ಲಿಯೇ ಮೃತಪಟ್ಟಿದ್ದಾರೆ. ನಾಗ ನಾಯಕ ಅವರು ತಾಲೂಕಿನ ಯರಗಂಬಳ್ಳಿ ಗ್ರಾಮದವರಾಗಿದ್ದು, ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು.

ಏತ ನೀರಾವರಿ ಮೂಲಕ ಕೆರೆ-ಕಟ್ಟೆ ತುಂಬಿಸುವ ಪ್ರಾಮಾಣಿಕ ಯತ್ನ

● ಶಾಸಕ ಜಿ.ಟಿ.ದೇವೇಗೌಡರ ಭರವಸೆ ● ಪುನಶ್ಚೇತನಗೊಂಡ ಸಂಗಾತಿಕಟ್ಟೆ ಕೆರೆ ಹಸ್ತಾಂತರ ● ಉಂಡುವಾಡಿ ಯೋಜನೆಯಿಂದ ಸದ್ಯವೇ ಸಮೃದ್ಧ ನೀರು

ಮೈಸೂರು, ಡಿ.29– ಸಣ್ಣ ನೀರಾವರಿ ಇಲಾಖೆಯಿಂದ ಏತ ನೀರಾವರಿ ಮೂಲಕ ಕೆರೆಕಟ್ಟೆಗಳನ್ನು ತುಂಬಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರು ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಮದಲ್ಲಿ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಕೆರೆ ಅಭಿವೃದ್ಧಿ ಸಮಿತಿ ಸಹಯೋಗದಲ್ಲಿ 787ನೇ 'ನಮ್ಮೂರ ನಮ್ಮ ಕೆರೆ' ಕಾರ್ಯಕ್ರಮದಡಿ ಪುನಶ್ಚೇತನಗೊಳಿಸಲಾದ ಸಂಗಾತಿಕಟ್ಟೆ ಕೆರೆ ಹಸ್ತಾಂತರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಳೆ ಬಾರದೆ ಅನೇಕ ಕೆರೆ ಕಟ್ಟೆಗಳು ಪಾಳು ಬಿದ್ದಿವೆ. ಜಮೀನಿನ ಬೆಲೆ ಹೆಚ್ಚಾದ ಬಳಿಕ ಕೆರೆಗಳ ಒತ್ತುವರಿ ಹೆಚ್ಚಾಗಿದೆ. ಇದನ್ನು ಮನಗಂಡು ಸರ್ಕಾರಿ ಕೆರೆ-ಕಟ್ಟೆಗಳ ಒತ್ತುವರಿ ತೆರವುಗೊಳಿಸಿ ನೀರು ತುಂಬಿಸುವ ಕೆಲಸ ಆರಂಭಿಸಲಾಗಿದೆ. ಏತ ನೀರಾವರಿ ಮೂಲಕ ಶಾಶ್ವತವಾಗಿ ಕೆರೆಕಟ್ಟೆಗಳನ್ನು ತುಂಬಿಸಲು ಯೋಜನೆ ರೂಪಿಸಲಾಗಿದೆ. ಅನಾದಿ ಕಾಲದಿಂದಲೂ ಜೀವಜಲವಾಗಿರುವ ಕೆರೆಗಳನ್ನು ತುಂಬಿಸಿದರೆ ಅಂತರ್ಜಲ ಹೆಚ್ಚಾಗಿ, ಬೋರ್‌ವೆಲ್‌ಗಳು ಬತ್ತುವುದಿಲ್ಲ. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಈ ಬಗ್ಗೆ ಸಣ್ಣ ನೀರಾವರಿ ಸಚಿವರು ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ತರುವುದರ ಜೊತೆಗೆ ಪದೇ ಪದೆ ಒತ್ತಾಯಿಸುತ್ತಿದ್ದೇನೆ. ಈ ಕಾರ್ಯಕ್ಕೆ ಸರ್ಕಾರ ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡುವ ವಿಶ್ವಾಸವಿದೆ ಎಂದು ತಿಳಿಸಿದರು.

ಸದ್ಯದಲ್ಲೇ ಸಮೃದ್ಧ ನೀರು: ಹಳೆಯ ಉಂಡುವಾಡಿ ಯೋಜನೆ ಇನ್ನು ಮೂರ್ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಈಗಾಗಲೇ ಪೈಪ್‌ಲೈನ್ ಅಳವಡಿಕೆ, 26 ಕಡೆಗಳಲ್ಲಿ ದೊಡ್ಡ ಟ್ಯಾಂಕ್ ನಿರ್ಮಿಸಿದ್ದು, ಕಾಮಗಾರಿ ಪೂರ್ಣಗೊಂಡ ಬಳಿಕ 24 ಗಂಟೆ ಶುದ್ಧ ಕುಡಿಯುವ ನೀರು ಪೂರೈಕೆಯಾಗಲಿದೆ. ದೊಡ್ಡಮಾರಗೌಡನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳ ರಸ್ತೆಗಳ ಸುಧಾರಣೆಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಶಾಸಕರ ನಿಧಿಯಿಂದಲೂ ಅನೇಕ ರಸ್ತೆಗಳಿಗೆ ಅನುದಾನ ನೀಡಲಾಗಿದೆ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯವರ ಸಾಮಾಜಿಕ ಸೇವಾ ಕಾರ್ಯಗಳು ಸಾಕಷ್ಟು ಬದಲಾವಣೆಗೆ ನಾಂದಿಯಾಗಿವೆ. ಮಹಿಳಾ ಸ್ವಸಹಾಯ ಸಂಘಗಳನ್ನು ರಚನೆ ಮಾಡಿದ್ದರಿಂದ ಅವರ ಆರ್ಥಿಕ ಶಕ್ತಿ ಹೆಚ್ಚಿದೆ. ಆರ್ಥಿಕ ಶಿಸ್ತು ಇದ್ದರೆ ಸಂಘಗಳು ಬಲಿಷ್ಠವಾಗಿ ಬೆಳೆಯುತ್ತವೆ. ಉಳಿತಾಯ ಮಾಡಿದ ಹಣವನ್ನು ಅಗತ್ಯವಿರುವವರ ಸಾಲ ಸೌಲಭ್ಯಕ್ಕೆ ಬಳಸಬೇಕು. ಗುಡಿ ಕೈಗಾರಿಕೆಗಳ ಸ್ಥಾಪನೆಗೆ ಗಮನಹರಿಸಬೇಕು. ಸ್ಥಳೀಯವಾಗಿ ಮಹಿಳೆಯರು ಉತ್ಪಾದಿಸಿದ ವಸ್ತುಗಳ ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಮುಖ್ಯವಾಗಿದೆ ಎಂದು ಹೇಳಿದರು.

ರಾಜ್ಯಾದ್ಯಂತ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ 787 ಕೆರೆಗಳನ್ನು ಪುನಶ್ಚೇತನಗೊಳಿಸಿ, ಕೆರೆ ನಿರ್ವಹಣೆ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ಹಸ್ತಾಂತರಿಸಿರುವುದು ಶ್ಲಾಘನೀಯ. ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗ ಧರ್ಮಸ್ಥಳದ ಧರ್ಮಾಧಿಕಾರಿಗಳು ನನ್ನನ್ನು ಆಹ್ವಾನಿಸಿ ನನ್ನಿಂದಲೇ ವಿದ್ಯಾನಿಧಿ, ಪ್ರೋತ್ಸಾಹ ಧನ ಯೋಜನೆ ಆರಂಭಕ್ಕೆ ಚಾಲನೆ ಕೊಡಿಸಿದ್ದರು. ಆ ಯೋಜನೆಯಿಂದ ಸಾವಿರಾರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತಿದೆ. ನಾನೂ ನನ್ನ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದು, ಎಲ್ಲಾ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಸಹಕಾರ ನೀಡುತ್ತಿದ್ದಾರೆ. ಹೀಗೆ ಒಟ್ಟಾಗಿ ಕೆಲಸ ಮಾಡಿದರೆ ಎಲ್ಲವನ್ನೂ ಸಾಧಿಸಬಹುದು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಶಿವನಂಜೇಗೌಡ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಜಿಲ್ಲಾ ನಿರ್ದೇಶಕ ವಿ.ವಿಜಯಕುಮಾರ್ ನಾಗನಾಳ, ಪಿಡಿಓ ರುಕ್ಮಾಂಗದ, ಗ್ರಾಪಂ ಅಧ್ಯಕ್ಷೆ ಲತಾ ಪ್ರಸನ್ನಚಾರಿ, ಉಪಾಧ್ಯಕ್ಷ ದಾಸಯ್ಯ, ಮುಖಂಡರಾದ ಟಿ.ಕೃಷ್ಣಪ್ಪ, ನಾಗರಾಜು, ಶಂಕರ್, ಬಸವರಾಜು, ಪುಟ್ಟೇಗೌಡ, ಭಗವಂತಸ್ವಾಮಿ, ದೊಡ್ಡೇಗೌಡ, ಡಿ.ಪಿ.ಕುಮಾರ್, ಡಿ.ರವಿ, ಡಿ.ಪಿ.ಶಂಕರ್, ಮಹದೇವ, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಮದಲ್ಲಿ 'ನಮ್ಮೂರ ನಮ್ಮ ಕೆರೆ' ಕಾರ್ಯಕ್ರಮದಡಿ ಪುನಶ್ಚೇತನಗೊಳಿಸಲಾದ ಸಂಗಾತಿಕಟ್ಟೆ ಕೆರೆ ಹಸ್ತಾಂತರ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಪ್ರಧಾನಿ ಮೋದಿಯವರ 'ಮನ್‌ಕೀ ಬಾತ್' ದೇಶದ ಜನಮನ ಮುಟ್ಟಿದೆ: ಸಿಂಹ



ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ಮುಖಂಡ ದಿನೇಶ್‌ಗೌಡ ಮತ್ತಿತರರು ಪ್ರಧಾನಿ ಮೋದಿ ಅವರ 'ಮನ್ ಕೀ ಬಾತ್' ಆಲಿಸುತ್ತಿರುವುದು.

ಮೈಸೂರು, ಡಿ.29– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಮನ್‌ಕೀ ಬಾತ್' ಮೂಲಕ ದೇಶದ ಮಹತ್ವದ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದು, ಈ ಕಾರ್ಯಕ್ರಮವು ಜನಮನ ಮುಟ್ಟುವಲ್ಲಿ ಯಶಸ್ವಿಯಾಗಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಅಭಿಪ್ರಾಯಿಸಿದರು.

ಪ್ರಸಕ್ತ ವರ್ಷದ ಕೊನೆಯ ಭಾನುವಾರ ಪ್ರಸಾರವಾದ ಪ್ರಧಾನಿಗಳ 129ನೇ 'ಮನ್‌ಕೀ ಬಾತ್' ಕಾರ್ಯಕ್ರಮವನ್ನು ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್‌ಗೌಡ ಮತ್ತಿತರರ ಮುಖಂಡರು ಹಾಗೂ ಸಾರ್ವಜನಿಕರೊಂದಿಗೆ ಆಲಿಸಿದ ಬಳಿಕ ಅವರು ಪ್ರತಿಕ್ರಿಯಿಸಿದರು.

ಪ್ರಧಾನಿ ಮೋದಿ ಅವರು, 2025ನ್ನು ಭಾರತಕ್ಕಾಗಿ ಅತ್ಯಂತ ಗರ್ವದ ಕ್ಷಣಗಳು ನೀಡಿದ ವರ್ಷ ಎಂದು ಉಲ್ಲೇಖಿಸಿ, ಈ ಬಗ್ಗೆ ಭಾರತೀಯರು ಹೆಮ್ಮೆಪಡುವಂತೆ ಹೇಳಿದ್ದಾರೆ. ರಾಷ್ಟ್ರೀಯ ಭದ್ರತೆ ಮತ್ತು ಆಪರೇಶನ್ ಸಿಂಧೂರ್ ರಾಷ್ಟ್ರದ ಭದ್ರತೆ ಮತ್ತು ಸಮಗ್ರ ಶಕ್ತಿಯ ಪ್ರತೀಕ ಎಂದು ಬಣ್ಣಿಸಿದ್ದಾರೆ. ಶುಭಾಂಶು ಶುಕ್ಲಾ ಇಂಟರ್‌ನ್ಯಾಷನಲ್ ಸ್ಪೇಸ್ ಸ್ಟೇಷನ್(ಐಎಸ್‌ಎಸ್) ತಲುಪಿದ ಮೊದಲ ಭಾರತೀಯ ಎಂಬ ಸಂತಸದ ಸಂಗತಿ ಜೊತೆಗೆ ವಿಜ್ಞಾನ ಹಾಗೂ ಅಂತರಿಕ್ಷ ಸಾಧನೆಗಳು, ಮಹಿಳಾ ಕ್ರಿಕೆಟ್ ಹಾಗೂ ಇತರ ಕ್ರೀಡಾ ಸಾಧನೆಗಳು, ವನ್ಯಜೀವಿ ಸಂರಕ್ಷಣೆಯಲ್ಲಿ ದೇಶದ ಯಶಸ್ಸು, ಪ್ರಯಾಗರಾಜ್ ಮಹಾಕುಂಭಮೇಳ, ಅಯೋಧ್ಯೆ ರಾಮ ಮಂದಿರದಲ್ಲಿ ಧ್ವಜಾರೋಹಣ ಸೇರಿದಂತೆ ಹಲವು ಮಹತ್ವದ ಸಂಗತಿಗಳನ್ನು ಉಲ್ಲೇಖಿಸಿ ಪ್ರಧಾನಿ ಸಂತಸ ವ್ಯಕ್ತಪಡಿಸಿದ್ದಾರೆ.

ಭಾಷಾ ವೈವಿಧ್ಯತೆ, ಕನ್ನಡ ಭಾಷೆ ಮತ್ತು ಕನ್ನಡ ಪಾಠಶಾಲೆ ಬಗ್ಗೆ ಸೊಗಸಾಗಿ ಮಾತನಾಡಿರುವ ಮೋದಿ ಅವರು, ಹೊಸವರ್ಷ 2026ರಲ್ಲಿ ಯುವ ನಾಯಕತ್ವ, ನವೋದ್ಯಮ ಮತ್ತು ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾತನಾಡುವ ಮೂಲಕ ಯುವ ಸಮೂಹವನ್ನು ಪ್ರೋತ್ಸಾಹಿಸಿದ್ದಾರೆ. ಮಹತ್ವದ ಮಾಹಿತಿಯನ್ನೊಳಗೊಂಡ ಪ್ರಧಾನಿ ಮೋದಿ ಅವರ 'ಮನ್ ಕೀ ಬಾತ್' ಕಾರ್ಯಕ್ರಮವನ್ನು ಒಮ್ಮೆಯೂ ತಪ್ಪದಂತೆ ದಿನೇಶ್‌ಗೌಡ ಹಾಗೂ ಸ್ನೇಹಿತರು ಆಲಿಸಿಕೊಂಡು ಬಂದಿರುವುದು ಅಭಿನಂದನಾರ್ಹ ಎಂದು ಬಣ್ಣಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ತಳ್ಳುಗಾಡಿ ವಿತರಿಸಿ ರಾಕೇಶ್ ಪಾಪಣ್ಣರ ಹುಟ್ಟುಹಬ್ಬ ಆಚರಣೆ








ಬೋಗಾದಿ ಗ್ರಾಮದ ಕಾಂಗ್ರೆಸ್ ಯುವ ಮುಖಂಡ ಪೈಲ್ವಾನ್ ತ್ಯಾಗರಾಜು ಮತ್ತು ಗ್ರಾಮಸ್ಥರು ಬಡ ಬೀದಿ ವ್ಯಾಪಾರಿಗಳಿಗೆ ತಳ್ಳುಗಾಡಿಗಳನ್ನು ವಿತರಿಸುವ ಮೂಲಕ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರ ಹುಟ್ಟು ಹಬ್ಬ ಆಚರಿಸಿದರು. ಈ ವೇಳೆ ಪೈಲ್ವಾನ್ ತ್ಯಾಗರಾಜು ಹೆಚ್.ಸ್ವಾಮಿ, ಹೊನ್ನಗಿರಿಗೌಡ, ಪೈಲ್ವಾನ್ ಕೃಷ್ಣಪ್ಪ, ಸವಿತಾ ನಾಯಕ್, ಕಮಲಮ್ಮ, ಆನಂದಿ, ಭಾಸ್ಕರ್, ರಾಕೇಶ್, ಸೋಮಶೇಖರ್, ರಾಜೇಶ್ ಶೆಟ್ಟಿ, ಪ್ರೇಮಕುಮಾರ್, ರಾಮು, ತಿಲಕ್, ಚಿದು, ರಾಖಿ, ಜಯಂತ್, ಕಿರಣ್ ಹೊನ್ನಗಿರಿಗೌಡ, ಸಂತೋಷ್, ರೇವಣ್ಣ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ನಗರ ಬಿಜೆಪಿ ಪದಾಧಿಕಾರಿಗಳ ಪರಿಷ್ಕೃತ ಪಟ್ಟಿ ಪ್ರಕಟ

ಮೈಸೂರು, ಡಿ.29– ಬಿಜೆಪಿ ಮೈಸೂರು ಮಹಾನಗರದ ಪರಿಷ್ಕೃತ ಪದಾಧಿಕಾರಿಗಳ ಪಟ್ಟಿ ಪ್ರಕಟಿಸಲಾಗಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಸೂಚನೆ ಮೇರೆಗೆ ಪಕ್ಷದ ಸಂಘಟನಾತ್ಮಕ ದೃಷ್ಟಿಯಿಂದ ಮೈಸೂರು ನಗರ ಜಿಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಪಕ್ಷದ ನಗರಾಧ್ಯಕ್ಷರಾದ ಮಾಜಿ ಶಾಸಕ ಎಲ್.ನಾಗೇಂದ್ರ, ಪರಿಷ್ಕೃತ ಪಟ್ಟಿ ಪ್ರಕಟಿಸಿದ್ದಾರೆ.

ಪರಿಷ್ಕೃತ ಪಟ್ಟಿ ಉಪಾಧ್ಯಕ್ಷರು– ಎಂ.ಆರ್.ಬಾಲಕೃಷ್ಣ ಮೈ.ಪು.ರಾಜೇಶ್, ವಿಶ್ವೇಶ್ವರಯ್ಯ, ಶ್ರೀಮತಿ ಟಿ.ಎನ್.ಶಾಂತ, ಕೆ.ಸೋಮಶೇಖರ್ ರಾಜು, ಎನ್.ಅರುಣ್‌ಕುಮಾರ್ ಗೌಡ, ಸು.ಮುರುಳಿ, ಈ.ರಮೇಶ್. **ಪ್ರಧಾನ ಕಾರ್ಯದರ್ಶಿಗಳು:** ವಿ.ಸೋಮಸುಂದರ, ಬಿ.ಎಂ.ರಘು, ಸಿ.ಕೆ.ರುದ್ರಮೂರ್ತಿ. **ಕಾರ್ಯದರ್ಶಿಗಳು:** ಪಿ.ಪ್ರಶಾಂತ್ ಗೌಡ, ನಾಗೇಂದ್ರಕುಮಾರ್, ಎಂ.ಎಸ್.ಪುನೀತ್, ಶ್ರೀಕಂಠಮೂರ್ತಿ, ಎಂ.ಭದ್ರೀಶ್, ಶ್ರೀಮತಿ ಮೋನಿಕಾ, ವೇಲು ಆರ್ಮುಗಂ, ಮರಿಸ್ವಾಮಿನಾಯಕ. **ಕೋಶಾಧ್ಯಕ್ಷ:** ಮಹಾವೀರ್ ಜೈನ್. **ವಕ್ತಾರ:** ಎಂ.ಎ.ಮೋಹನ್. **ಮಾಧ್ಯಮ ಪ್ರಮುಖ್:** ಮಹೇಶ್ ರಾಜೇ ಅರಸ್. **ಕಾರ್ಯಾಲಯ ಕಾರ್ಯದರ್ಶಿ:** ಎಸ್.ನಂದಕುಮಾರ್.

ಮಾಲಾರ್ಪಣೆ



ಮೈಸೂರಿನ ಗನ್‌ಹೌಸ್ ಸಮೀಪದ ಕುವೆಂಪು ಉದ್ಯಾನವನದಲ್ಲಿ ಸೋಮವಾರ ಶಾಸಕ ಟಿ.ಎಸ್.ಶ್ರೀವತ್ಸ ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಮಹಾಕವಿ ಕುವೆಂಪು ಮನೆ ಮುಂದೆಯೇ ಅವರ 122ನೇ ಜನ್ಮ ದಿನಾಚರಣೆ



ಮೈಸೂರಿನ 'ಉದಯರವಿ' ನಿವಾಸದಲ್ಲಿ ಕುವೆಂಪು ಅಭಿಮಾನಿಗಳ ಬಳಗದ ವತಿಯಿಂದ ಕುವೆಂಪು ಜಯಂತಿ ಆಚರಿಸಲಾಯಿತು.


ಮೈಸೂರು, ಡಿ.29– ರಾಷ್ಟ್ರಕವಿ ಕುವೆಂಪು ಅವರ 122ನೇ ಜಯಂತಿ ಕಾರ್ಯಕ್ರಮವನ್ನು ಅವರ ಮೈಸೂರು ನಿವಾಸದ ಬಳಿ ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು.

ಗೋಕುಲಂ ಬಡಾವಣೆಯಲ್ಲಿರುವ ಕುವೆಂಪು ಅವರ 'ಉದಯರವಿ' ನಿವಾಸದ ಬಳಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ನೇತೃತ್ವದಲ್ಲಿ ಕುವೆಂಪು ಅಭಿಮಾನಿಗಳ ಬಳಗದ ವತಿಯಿಂದ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಕುವೆಂಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಈ ವೇಳೆ ಶಾಸಕ ಹರೀಶ್‌ಗೌಡ ಮಾತನಾಡಿ, ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಅವರು ಸೂರ್ಯ-ಚಂದ್ರ ಇರುವವರೆಗೂ ಅಜರಾಮರರಾಗಿರುತ್ತಾರೆ. ಬಾಲ್ಯದಲ್ಲಿ ನನ್ನ ತಂದೆಯೊಂದಿಗೆ ಕುವೆಂಪುರವರ ಮನೆಗೆ ಬರುತ್ತಿದ್ದ ದಿನಗಳನ್ನು ಸದಾ ಸ್ಮರಿಸಿಕೊಳ್ಳುತ್ತೇನೆ. ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿ ಸಲ್ಲಬೇಕಿದ್ದು, ಈ ಸಂಬಂಧ ರಾಜ್ಯ ಸರ್ಕಾರವು ಕೇಂದ್ರಕ್ಕೆ ಒತ್ತಾಯಿಸಿದೆ. ನಾಡಿನ ಜನರ ಈ ಬೇಡಿಕೆ ಮುಂದಿನ ಜಯಂತಿ ವೇಳೆಗೆ ಈಡೇರುವುದೆಂಬ ವಿಶ್ವಾಸವಿದೆ. ಕುವೆಂಪು ಅವರ ಸಾಹಿತ್ಯ, ಜೀವನವನ್ನು ಅಧ್ಯಯನ ಮಾಡುವುದರ ಜೊತೆಗೆ ಅವರ ತತ್ವ-ಸಿದ್ಧಾಂತಗಳನ್ನು ನಾವೆಲ್ಲರೂ ಅನುಸರಿಸಬೇಕು ಎಂದರು.

ಈ ವೇಳೆ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಹಿಮಾಂಶು ಪಡುವಾರಹಳ್ಳಿ, ಯೋಗೀಶ್, ಗುರುರಾಜ, ಎ.ರವಿ, ನಿಶಾಂತ್, ಲಕ್ಷ್ಮೀ, ಶಿವರಾಜು, ಗಾಯತ್ರಿ, ನಾರಾಯಣಗೌಡ, ಪಾಪಣ್ಣ, ಶಿವಪ್ರಕಾಶ್, ಸತೀಶ್ ಗೋಕುಲಂ, ರಾಮು ಸೇರಿದಂತೆ ಕುವೆಂಪು ಅವರ ಅನೇಕ ಅಭಿಮಾನಿಗಳು ಉಪಸ್ಥಿತರಿದ್ದರು.

ಸಾರ್ವಜನಿಕರಿಗೆ ಕನಿಷ್ಠ ಸೌಕರ್ಯ ಕಲ್ಪಿಸಲು ಸಾಧ್ಯವಾಗದೇ ಇರುವಾಗ ಭಾರೀ ಯೋಜನೆ ಘೋಷಣೆ ತರವೇ?



ಶಿಥಿಲಾವಸ್ಥೆಯಲ್ಲಿರುವ ಬೆಮೆಲ್‌ನಗರದ ಪ್ರಯಾಣಿಕರ ತಂಗುದಾಣ.

ಮೈಸೂರು, ಡಿ.29– ಗ್ರೇಟರ್ ಮೈಸೂರು, ಟೌನ್‌ಶಿಪ್, ಪೆರಿಫೆರಲ್ ರಿಂಗ್ ರಸ್ತೆ ಫ್ಲೈಓವರ್‌ಗಳಂತಹ ಬೃಹತ್ ಯೋಜನೆಗಳ ಚಿಂತನೆ ನಡೆದಿದೆ. ಆದರೆ ಸಾರ್ವಜನಿಕರಿಗೆ ಕನಿಷ್ಠ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಆಡಳಿತ ವ್ಯವಸ್ಥೆ ನಿರ್ಲಕ್ಷ್ಯ ವಹಿಸಿದೆ.

ಬಿಇಎಂಎಲ್(ಬೆಮೆಲ್) ನಗರ ಹಾಗೂ ಶ್ರೀರಾಂಪುರದಲ್ಲಿರುವ ಪ್ರಯಾಣಿಕರ ತಂಗುದಾಣಗಳ ದುಸ್ಥಿತಿ, ಸುಂದರ ನಗರಿಯ ನಿಜಸ್ವರೂಪಕ್ಕೆ ಸಾಕ್ಷಿಯಾಗಿವೆ. ಸ್ಥಳೀಯ ಸಂಸ್ಥೆ ಹಾಗೂ ಸಾರಿಗೆ ಸಂಸ್ಥೆ ಅಧಿಕಾರಿಗಳಿಗೆ ಪ್ರಯಾಣಿಕರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂಬುದನ್ನು ಸಾರಿ ಹೇಳುತ್ತಿವೆ.

ಬೆಮೆಲ್ ನಗರದ ಪ್ರಯಾಣಿಕರ ತಂಗುದಾಣದ ಸ್ಥಿತಿಯಂತೂ ಶೋಚನೀಯವಾಗಿದೆ. ಇಡೀ ಕಟ್ಟಡವೇ ಶಿಥಿಲಾವಸ್ಥೆಯಲ್ಲಿದ್ದು, ಒಂದು ಭಾಗದ ಗೋಡೆ ವಾಲಿದ್ದು, ಯಾವಾಗಲಾದರೂ ನೆಲಕ್ಕುರುಳುವಂತಿದೆ. ತಂಗುದಾಣದಲ್ಲಿ ಕುಳಿತುಕೊಳ್ಳುವುದಿರಲಿ, ಅದರ ಪಕ್ಕ ನಿಲ್ಲುವುದೂ ಅಪಾಯಕಾರಿಯಾಗಿದೆ. ಯಾರಾದರೂ ನಿರಾಶ್ರಿತರು ಹಾಗೂ ಭಿಕ್ಷುಕರು, ತಂಗುದಾಣದ ದುಸ್ಥಿತಿ ಬಗ್ಗೆ ಅರಿವಿಲ್ಲದೆ ಇಲ್ಲಿ ಆಶ್ರಯ ಪಡೆಯುವ ಸಾಧ್ಯತೆ ಇರುತ್ತದೆ. ಆ ವೇಳೆ ಏನಾದರೂ ಅವಘಡ ಸಂಭವಿಸಿದರೆ ಯಾರು ಹೊಣೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

> ಸಂಚಾರಕ್ಕೆ ಸಾರಿಗೆ ಸಂಸ್ಥೆ ಬಸ್‌ಗಳನ್ನೇ ಅವಲಂಬಿಸಿರುವವರು ಬಹಳಷ್ಟಿದ್ದಾರೆ. ಆದರೆ ತಂಗುದಾಣಗಳ ದುಸ್ಥಿತಿಯಿಂದಾಗಿ ಪ್ರಯಾಣಿಕರು ರಸ್ತೆ ಬದಿ ನಿಂತು ಬಸ್ ಬರುವವರೆಗೆ ಕಾಯಬೇಕು. ಪ್ರಯಾಣಿಕರಿಗೆ ಉತ್ತಮ ತಂಗುದಾಣ, ಬೆಳಕಿನ ವ್ಯವಸ್ಥೆ ಜೊತೆಗೆ ಸುರಕ್ಷತೆಗಾಗಿ ಸಿಸಿಟಿವಿ ಕ್ಯಾಮರಾ, ಪೊಲೀಸ್ ಬೀಟ್ ವ್ಯವಸ್ಥೆ ಮಾಡಬೇಕು.
> -ಸುರೇಶ್, ಸ್ಥಳೀಯರು

ಇನ್ನು ಶ್ರೀರಾಂಪುರ ಎರಡನೇ ಹಂತದಲ್ಲಿರುವ ಪ್ರಯಾಣಿಕರ ತಂಗುದಾಣದ ಸ್ಥಿತಿಯೂ ಭಿನ್ನವಾಗಿಲ್ಲ. ಇಲ್ಲಿ ಪ್ರಯಾಣಿಕರು ಕುಳಿತುಕೊಳ್ಳಲು ಸ್ಥಳಾವಕಾಶವೇ ಇರುವುದಿಲ್ಲ. ಸದಾ ಬೀದಿ ನಾಯಿಗಳ ಹಿಂಡು ಇಲ್ಲಿ ತಂಗಿರುತ್ತವೆ. ಎಲ್ಲೆಡೆ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವುದರಿಂದ ಅವುಗಳನ್ನು ಓಡಿಸಲು ಯಾರೂ ಧೈರ್ಯ ಮಾಡುವುದಿಲ್ಲ. ಮೊದಲೇ ನಿರ್ವಹಣೆ ಇಲ್ಲದೆ ಅಧ್ವಾನವಾಗಿದ್ದ ಈ ತಂಗುದಾಣ, ಬೀದಿನಾಯಿಗಳು, ಪುಂಡಪೋಕರಿಗಳಿಗೆ ಸೂಕ್ತವಾಗಿದೆ ಎಂದು ಜನ ಸುಮ್ಮನಾಗಿದ್ದಾರೆ.

ಈ ತಂಗುದಾಣಗಳ ಬಳಿ ಸಂಜೆ ನಂತರ ನಿಲ್ಲುವುದಕ್ಕೂ ಭಯವಾಗುತ್ತದೆ. ತಂಗುದಾಣಕ್ಕಿರಲಿ ಅದರ ಆಸುಪಾಸಿನ ವಿದ್ಯುತ್ ಕಂಬಗಳಲ್ಲೂ ದೀಪಗಳು ಸರಿಯಾಗಿ ಉರಿಯುವುದಿಲ್ಲ. ಅಕ್ಕಪಕ್ಕದಲ್ಲಿ ಎಲ್ಲಿಯೂ ಸಿಸಿಟಿವಿ ಕ್ಯಾಮರಾಗಳಿಲ್ಲ. ಕಳ್ಳರಿಗೆ ಪ್ರಶಸ್ತವಾದ ವಾತಾವರಣವಿರುವುದರಿಂದ ಯಾವ ಸಮಯದಲ್ಲಿ ಏನಾದರೂ ಆಗಬಹುದು. ಒಟ್ಟಾರೆ ಇಲ್ಲಿ ಪ್ರಯಾಣಿಕರಿಗೆ ಯಾವುದೇ ಸುರಕ್ಷೆ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.



ಶ್ರೀರಾಂಪುರ 2ನೇ ಹಂತದ ತಂಗುದಾಣದ ದುಸ್ಥಿತಿ.

ಗಿರಣಿ ತಂತ್ರಜ್ಞಾನ ಕೋರ್ಸ್ ಮಾಡಿದ ವಿದ್ಯಾರ್ಥಿಗಳಿಗೆ ವಿಶ್ವಾದ್ಯಂತ ಉದ್ಯಮ ಆರಂಭಿಸುವ ಅವಕಾಶ

ಸಿಎಫ್‌ಟಿಆರ್‌ಐ ವಿಜ್ಞಾನಿ ಡಾ. ಶೈಲಜಾ ಡೊನೆಂಪುಡಿ ಅಭಿಮತ

ಮೈಸೂರು,ಡಿ.29(ಎಂಟಿವೈ)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಗಿರಣಿ ತಂತ್ರಜ್ಞಾನ ಕೋರ್ಸ್ ಕಲಿತ ವಿದ್ಯಾರ್ಥಿಗಳು ಭಾರತ ಸೇರಿದಂತೆ ಹೊರ ದೇಶಗಳಲ್ಲೂ ಉದ್ಯಮ ಆರಂಭಿಸಬಹುದು ಎಂದು ನವದೆಹಲಿಯ ಸಿಎಸ್‌ಐಆರ್ ವಿಜ್ಞಾನಿ, ವ್ಯವಹಾರ ಅಭಿವೃದ್ಧಿ ಗುಂಪಿನ ಮುಖ್ಯಸ್ಥರಾದ ಡಾ.ಶೈಲಜಾ ಡೊನೆಂಪುಡಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ(ಸಿಎಫ್‌ಟಿಆರ್‌ಐ) ಸೋಮವಾರ ಆಯೋಜಿಸಿದ್ದ 44ನೇ ಐಎಸ್‌ಎಂಟಿ ಕೋರ್ಸ್‌ನ ಸಮಾರೋಪದಲ್ಲಿ ಮಾತನಾಡಿದ ಅವರು, ಸಾಂಪ್ರದಾಯಿಕವಾಗಿ ತಮ್ಮ ಕುಟುಂಬದ ವ್ಯವಹಾರವನ್ನು ಮುಂದುವರಿಸುವವರು ತಮ್ಮ ಉದ್ಯಮದ ಮೌಲ್ಯವರ್ಧನೆಗೆ ಒತ್ತು ನೀಡಬೇಕು. ಹೊಸದಾಗಿ ಉದ್ಯಮ ಆರಂಭಿಸುವವರು ಆತ್ಮವಿಶ್ವಾಸದಿಂದ ಸ್ಟಾರ್ಟ್‌ಅಪ್‌ಗಳನ್ನು ಪ್ರಾರಂಭಿಸಬೇಕು. ಸಿಎಫ್‌ಟಿಆರ್‌ಐನಲ್ಲಿ ಗಿರಣಿ ತಂತ್ರಜ್ಞಾನ ಕೋರ್ಸ್ ಕಲಿತವರು ವಿವಿಧ ದೇಶಗಳಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಹಿಟ್ಟಿನ ಗಿರಣಿ ತಂತ್ರಜ್ಞಾನ (ಫ್ಲೋರ್ ಮಿಲ್ಲಿಂಗ್ ಟೆಕ್ನಾಲಜಿ) ಕೋರ್ಸ್‌ಗಳಿಗೆ ಆಫ್ರಿಕಾ ಖಂಡದಲ್ಲಿ ಹೆಚ್ಚಿನ ಬೇಡಿಕೆ ಇದೆ. ಶೈಕ್ಷಣಿಕ ಒಪ್ಪಂದದಿಂದ ಹೊಸ ಅವಕಾಶಗಳು ತೆರೆದುಕೊಳ್ಳುತ್ತವೆ. ಈ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಬಲಸಂವರ್ಧನೆಗೂ ನೆರವಾಗಲಿದೆ. ಅದಕ್ಕಾಗಿ ಹೊರದೇಶಗಳಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಹಿಟ್ಟಿನ ಗಿರಣಿ ಉದ್ಯಮದಲ್ಲಿ ಉದ್ಯೋಗ ಅವಕಾಶಗಳ ವಿಫುಲವಾಗಿವೆ. ಇದು ಭಾರತವಷ್ಟೇ ಅಲ್ಲ, ದುಬೈ ಸೇರಿದಂತೆ ಮಧ್ಯಪ್ರಾಚ್ಯ, ಯುರೋಪ್ ಸೇರಿದಂತೆ ವಿದೇಶಗಳಲ್ಲಿ ಹಿಟ್ಟಿನ ಗಿರಣಿ ತಂತ್ರಜ್ಞಾನ ಕೋರ್ಸ್ ಕಲಿತ ವಿದ್ಯಾರ್ಥಿಗಳಿಗೆ ಬೇಡಿಕೆ ಇದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಇದೀಗ ಆಹಾರ ಒಂದು ಭಾವನಾತ್ಮಕ ಉತ್ಪನ್ನವಾಗಿದೆ. ಇದು ಗಿರಣಿ ಉದ್ಯಮ ಬೆಳವಣಿಗೆಗೆ ಪೂರಕ ಅಂಶವಾಗಿದೆ. ಈ ಕ್ಷೇತ್ರದಲ್ಲಿ ಹೊಸ ಅನ್ವೇಷಣೆ, ಕೌಶಲದೊಂದಿಗೆ ಹೊಸತನ ಸೃಷ್ಟಿಸಬೇಕು.. ಹೊಸ ನವೋದ್ಯಮ ಸ್ಥಾಪನೆಗೆ ಮುದ್ರಾದಂತಹ ಸಾಲ ಸೌಲಭ್ಯವನ್ನು ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಆಹಾರ ಕ್ಷೇತ್ರದಲ್ಲಿ ಹೊಸ ಉದ್ದಿಮೆ ಆರಂಭಿಸಲು ವಿಫುಲ ಅವಕಾಶಗಳಿವೆ. ಇಂದು ಆಹಾರ ಕೇವಲ ವಸ್ತುವಾಗಿರದೇ ಒಂದು ಭಾವನೆಯಾಗಿ ಮಾರ್ಪಾಡಾಗುತ್ತಿದೆ. ಸಿಎಫ್‌ಟಿಆರ್‌ಐ ನಂತಹ ಸಂಸ್ಥೆಗಳ ತಜ್ಞರಿಂದ ಒದಗಿಸಿದ ವೈಜ್ಞಾನಿಕ ಜ್ಞಾನದಿಂದ ಈ ಕ್ಷೇತ್ರ ಮತ್ತಷ್ಟು ಮಹತ್ವ ಪಡೆದುಕೊಳ್ಳುತ್ತಿದೆ ಎಂದರು.

ಇದೇ ಸಿಎಫ್‌ಟಿಆರ್‌ಐನಲ್ಲಿರುವ ಅಂತಾರಾಷ್ಟ್ರೀಯ ಮಿಲ್ಲಿಂಗ್ ತಂತ್ರಜ್ಞಾನ ಶಾಲೆಯ ಪ್ರಾಂಶುಪಾಲರಾದ ಡಾ.ಸುರೇಶ್ ಡಿ.ಸಖರೆ ಮಾತನಾಡಿ, ಸಿಎಫ್‌ಟಿಆರ್‌ಐ 1981ರಲ್ಲಿ ಗಿರಣಿ ತಂತ್ರಜ್ಞಾನ ಕೋರ್ಸ್ ಆರಂಭಿಸಲಾಯಿತು. ಕೇಂದ್ರ ಸರ್ಕಾರ ಮತ್ತು ಸ್ವಿಟ್ಜರ್‌ಲ್ಯಾಂಡ್ ನಡುವೆ ಒಡಂಬಡಿಕೆಯೊಂದಿಗೆ ಕಾರ್ಯಾರಂಭಗೊಂಡಿತು. ಗಿರಣಿ ಕೈಗಾರಿಕೆ ಅಗತ್ಯಕ್ಕೆ ತಕ್ಕಂತೆ ಕೋರ್ಸ್ ಅಭಿವೃದ್ಧಿಪಡಿಸಲಾಗಿದೆ. ಉತ್ತಮ ತಾಂತ್ರಿಕ ಪರಿಣಿತಿ, ನಿರ್ವಹಣೆ ಅಗತ್ಯತೆಯನ್ನು ಪೂರೈಸುವುದರೊಂದಿಗೆ ಕೌಶಲ ಕಲಿಸಲಾಗುತ್ತಿದೆ. ಇದರೊಂದಿಗೆ ಆಧುನಿಕ ಗಿರಣಿ ಕ್ಷೇತ್ರದಲ್ಲಿ ಸವಾಲು ನಿರ್ವಹಣೆಗೆ ಸಜ್ಜುಗೊಳಿಸಲಾಗುವುದು ಎಂದರು.

ಹಿಟ್ಟಿನ ಗಿರಣಿ ಕ್ಷೇತ್ರದಲ್ಲಿನ ಮಹತ್ವದ ಬದಲಾವಣೆಯಲ್ಲಿ ಸಿಎಫ್‌ಟಿಆರ್‌ಐ ದೊಡ್ಡ ಕೊಡುಗೆ ಇದೆ. ಇಲ್ಲಿ ಈ ಕೋರ್ಸ್ ಕಲಿತ 900 ವಿದ್ಯಾರ್ಥಿಗಳು ಬಾಂಗ್ಲಾದೇಶ, ಕಾಂಬೋಡಿಯಾ, ಘಾನಾ, ಜೋರ್ಡಾನ್, ಕೀನ್ಯಾ, ಲಿಬಿಯಾ, ನೇಪಾಲ್, ಮಂಗೋಲಿಯಾ, ಒಮನ್, ಶ್ರೀಲಂಕಾ, ಸಿರಿಯಾ, ಯುಎಸಿ ಸೇರಿದಂತೆ 120 ದೇಶಗಳಲ್ಲಿ ಕೆಲಸ ಮಾಡುವ ಆ ದೇಶ ಆಹಾರ ಸ್ವಾವಲಂಬನೆ ಸಾಧಿಸಲು ನೆರವಾಗಿದ್ದಾರೆ. ಜೊತೆಗೆ, ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಂದ ಗಿರಣಿ ಕೈಗಾರಿಕಾ ಕ್ಷೇತ್ರದಲ್ಲೂ ಗುಣಮಟ್ಟ ವೃದ್ಧಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಿಎಫ್‌ಟಿಆರ್‌ಐ ಸಂಸ್ಥೆಯ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ವಿಜ್ಞಾನಿ ಡಾ.ರೇವತಿ ಭಾಸ್ಕರನ್, ಸಂಚಾಲಕ ಎಂ.ಶರವಣ್ ಉಪಸ್ಥಿತರಿದ್ದರು.



ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಸಭಾಂಗಣದಲ್ಲಿ ಸೋಮವಾರ ನಡೆದ 44ನೇ ಐಎಸ್‌ಎಂಟಿ ಕೋರ್ಸ್‌ನ ಸಮಾರೋಪದಲ್ಲಿ ಹಿಟ್ಟಿನ ಗಿರಣಿ ತಂತ್ರಜ್ಞಾನ (ಫ್ಲೋರ್ ಮಿಲ್ಲಿಂಗ್ ಟೆಕ್ನಾಲಜಿ) ಕೋರ್ಸ್ ಪಡೆದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಕುವೆಂಪು ಜನ್ಮದಿನಾಚರಣೆ



ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನದ ಅಂಗವಾಗಿ ಸ್ಮರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ವೇಳೆ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ, ಮುಡಾ ಮಾಜಿ ಸದಸ್ಯ ಕೆ.ಮಾದೇಶ್, ನಾರಾಯಣ, ಮಹದೇವಸ್ವಾಮಿ, ಚಿತ್ರ ನಟ ಮಲ್ಲೇಶ್, ಸೋಮಣ್ಣ, ಗಂಗಣ್ಣ, ಮಹದೇವು, ಸುಮಿತ್ರ, ಗಾಯತ್ರಿ ಇತರರಿದ್ದಾರೆ.

ಮೈಸೂರು ಮಿತ್ರ

ಜ.21ರಿಂದ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ಜಾತ್ರಾ ಮಹೋತ್ಸವ

ಭಕ್ತರಿಗೆ ಅಗತ್ಯ ಸೌಲಭ್ಯ ಕಲ್ಪಿಸಿ, ಜಾತ್ರೆ ಯಶಸ್ವಿಗೊಳಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ



ಮುಡುಕುತೊರೆ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಸಚಿವ ಮಹದೇವಪ್ಪ ಮಾತನಾಡಿದರು.

ತಿ.ನರಸೀಪುರ, ಡಿ.29– ಸ್ವಚ್ಛತೆ ಮತ್ತು ನೈರ್ಮಲ್ಯಕ್ಕೆ ಹೆಚ್ಚಿನ ಒತ್ತು ನೀಡಿ ಜ.21ರಿಂದ ಆರಂಭವಾಗುವ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ಜಾತ್ರೆಗೆ ಬರುವ ಭಕ್ತರಿಗೆ ಅಗತ್ಯ ಸೌಲಭ್ಯ ಕಲ್ಪಿಸುವ ಮೂಲಕ ಜಾತ್ರೆ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಸೂಚಿಸಿದರು.



ತಾಲೂಕಿನ ಮುಡುಕುತೊರೆಯ ಜೆಎಸ್‌ಎಸ್ ಕಲ್ಯಾಣ ಮಂಟಪದಲ್ಲಿ ನಡೆದ ಮುಡುಕು ತೊರೆ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಡುಕುತೊರೆ ಮಲ್ಲಿಕಾರ್ಜುನ ಸ್ವಾಮಿ ಜಾತ್ರೆ ಪ್ರಸಿದ್ಧ ಜಾತ್ರೆಯಾಗಿರುವುದರಿಂದ ಜಾನುವಾರು ಜಾತ್ರೆ ಹಾಗೂ ರಥೋ ತ್ಸವಕ್ಕೆ ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಮೂಲ ಸೌಕರ್ಯ ಕಲ್ಪಿಸಲು ಮುಂಜಾಗ್ರತೆ ಕೈಗೊಳ್ಳಬೇಕು ಎಂದರು.

ಜಾತ್ರೆ ಹಿನ್ನೆಲೆಯಲ್ಲಿ ರಸ್ತೆ ದುರಸ್ತಿ, ಶುದ್ಧ ಕುಡಿಯುವ ನೀರು, ವಿದ್ಯುತ್, ಮಹಿಳೆಯರಿಗೆ ಬಟ್ಟೆ ಬದಲಿಸುವ ಕೇಂದ್ರಗಳು ಸೇರಿದಂತೆ ಇತರೆ ಮೂಲ ಸೌಕರ್ಯಕ್ಕೆ ಆದ್ಯತೆ ನೀಡಬೇಕು. ಈ ಬಾರಿ ಜಾತ್ರೆ ಜ.21 ರಿಂದ 30ರವರೆಗೆ ನಡೆಯಲಿದೆ. ಕಳೆದ ಬಾರಿ ಜಾತ್ರೆಗೆ 19 ಲಕ್ಷ ವೆಚ್ಚವಾಗಿದ್ದು, ಅಧಿಕಾರಿಗಳ ಮಾಹಿತಿಯನ್ವಯ ಈ ಬಾರಿ 21 ಲಕ್ಷ ರೂ. ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ ಎಂದರು.

ಇಲ್ಲಿನ ಜಾನುವಾರು ಜಾತ್ರೆ ಸಹ ವಿಶೇಷತೆ ಪಡೆದಿದ್ದು, ಸಾವಿರಾರು ಜಾನುವಾರುಗಳು ಜಾತ್ರೆಗೆ ಆಗಮಿಸುವ ಹಿನ್ನೆಲೆಯಲ್ಲಿ ಪಶುವೈದ್ಯ ಇಲಾಖೆ ಜಾನುವಾರುಗಳಿಗೆ ಸಾಂಕ್ರಮಿಕ ರೋಗ ಹರಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ. ವಿದ್ಯುತ್ ಇಲಾಖೆ ಜಾತ್ರೆ ಆರಂಭದಿಂದ ಮುಗಿಯುವವರೆಗೂ ನಿರಂತರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಮಾಡಬೇಕು. ರಾಮಸ್ವಾಮಿ ನಾಲೆಗೆ ನೀರು ಬಿಡಲು ನೀರಾವರಿ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಬೇಕು. ಜಾತ್ರೆಯಲ್ಲಿ ತಾತ್ಕಾಲಿಕ ಆಸ್ಪತ್ರೆ ತೆರೆದು ಯಾವುದೇ ಆರೋಗ್ಯ ಸಮಸ್ಯೆ ಉಂಟಾಗದಂತೆ ಆರೋಗ್ಯ ಇಲಾಖೆ ಹಾಗೂ ಜಾತ್ರೆಗೆ ಬರುವ ಜನ ದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆ ಅಗತ್ಯ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು. ಆ ಮೂಲಕ ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಕಣ್ಗಾವಲು ಹಾಕಬೇಕು ಎಂದರು.

ಮುಡುಕುತೊರೆ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧ: ಮುಡುಕುತೊರೆ ಪ್ರಸಿದ್ಧ ಧಾರ್ಮಿಕ ಸ್ಥಳವಾಗಿದ್ದು, ಪ್ರವಾಸೋದ್ಯಮ ಕೇಂದ್ರವೂ ಆಗಿದೆ. ಈ ಹಿನ್ನೆಲೆಯಲ್ಲಿ ಈ ಭಾಗವನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಗುವುದು. ಈಗಾಗಲೇ ವಸತಿ ಶಾಲೆ ನಿರ್ಮಾಣ, ಏತ ನೀರಾವರಿ ಯೋಜನೆ, ರಸ್ತೆಗಳ ನಿರ್ಮಾಣ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ನನ್ನ ಮತ ಕ್ಷೇತ್ರದ ಪ್ರತಿಯೊಂದು ಗ್ರಾಮವೂ ಸಂಪೂರ್ಣವಾಗಿ ಅಭಿವೃದ್ಧಿಯಾಗಬೇಕು. ಈ ಗ್ರಾಮಕ್ಕೆ ಡಿಪ್ಲೊಮಾ ಕಾಲೇಜು, ಬಸ್ ನಿಲ್ದಾಣ, ಆಸ್ಪತ್ರೆ, ನೀರಾವರಿ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಕ್ಕೆ ಅನುಮೋದನೆ ನೀಡಲಾಗಿದೆ ಎಂದರು.

ಗ್ರಾಪಂ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಗ್ರಾಮಸ್ಥರು ಸಚಿವರ ಗಮನಕ್ಕೆ ತಂದ ವೇಳೆ ಸಚಿವರು ಜಿಪಂ ಸಿಇಓಗೆ ಕರೆ ಮಾಡಿ, ಗ್ರಾಮಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆ ಬಗೆಹರಿಸುವಂತೆ ತಿಳಿಸಿದರು.

ಇದೇ ವೇಳೆ ಮುಡುಕುತೊರೆ ಸುತ್ತೂರು ಮಠದಿಂದ ಸಚಿವ ಮಹದೇವಪ್ಪನವರಿಗೆ ಗೌರವ ಸಮರ್ಪಿಸಲಾಯಿತು. ಮುಡುಕುತೊರೆ ಏತ ನೀರಾವರಿ ಯೋಜನೆ ನವೀಕರಣ ಕಾಮಗಾರಿ ಹಾಗೂ ಟಿ.ಬೆಟ್ಟಹಳ್ಳಿಯಲ್ಲಿ ಆಯುಷ್ಮಾನ್ ಆಸ್ಪತ್ರೆ ನಿರ್ಮಾಣಕ್ಕೆ ಸಚಿವರು ಗುದ್ದಲಿ ಪೂಜೆ ನೆರವೇರಿಸಿದರು.

ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ತಲಕಾಡು ವೈದ್ಯನಾಥೇಶ್ವರ ಸಮೂಹ ದೇವಾಲಯ ಸಮಿತಿ ಅಧ್ಯಕ್ಷ ಬೆಟ್ಟಹಳ್ಳಿ ನಾಗರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಬಿ.ಶೆಟ್ಟಹಳ್ಳಿ ಗ್ರಾಪಂ ಅಧ್ಯಕ್ಷೆ ಪುಟ್ಟಮ್ಮ, ಉಪಾಧ್ಯಕ್ಷ ದಕ್ಷಿಣಾಮೂರ್ತಿ, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಗೋಪಾಲ್, ರವಿಕುಮಾರ್, ಆಪ್ತ ಸಹಾಯಕರಾದ ಬಸವರಾಜು, ಶ್ರೀನಿವಾಸ್, ತಹಸೀಲ್ದಾರ್ ಸುರೇಶ್ ಆಚಾರ್, ಮುಖಂಡರಾದ ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್, ನರಸಿಂಹಮಾದನಾಯಕ, ದೊಡ್ಡೇಬಾಗಿಲು ಮಲ್ಲಿಕಾರ್ಜುನಸ್ವಾಮಿ, ಪ್ರಸನ್ನ, ಮಲ್ಲಾಜಮ್ಮ, ಕೋಕಿಲ, ಸಿದ್ದರಾಜು, ಕೊಳತ್ತೂರು ಕುಮಾರ್, ರಂಗರಾಜಪುರ ರಾಜೇಶ್, ಗುತ್ತಿಗೆದಾರ ಚಂದ್ರು, ಇಲಾಖೆ ಅಧಿಕಾರಿಗಳು ಇದ್ದರು.

ಶಿಷ್ಟಾಚಾರ ಉಲ್ಲಂಘನೆಗೆ ಗರಂ

ಮುಡುಕುತೊರೆ ಜಾತ್ರೆ ಆಹ್ವಾನ ಪತ್ರಿಕೆಯಲ್ಲಿ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ತಾಪಂ ಮಾಜಿ ಸದಸ್ಯ ನರಸಿಂಹ ಮಾದನಾಯಕ ಮುಡುಕುತೊರೆ ದೇವಸ್ಥಾನ ಇಓ ವೆಂಕಟೇಶ್ ಪ್ರಸಾದ್ ಮೇಲೆ ಗರಂ ಆದರು. ಆಹ್ವಾನ ಪತ್ರಿಕೆಯಲ್ಲಿ ತಲಕಾಡು ಗ್ರಾಪಂ ಹೆಸರು ಮುದ್ರಣ ಮಾಡದೇ ವೆಂಕಟೇಶ್ ಉದ್ದಟತನ ತೋರಿದ್ದಾರೆ ಎಂದು ಸಚಿವ ಮಹದೇವಪ್ಪರ ಎದುರೇ ತರಾಟೆಗೆ ತೆಗೆದುಕೊಂಡರು. ಇದರಿಂದ ವಿಚಲಿತರಾದ ವೆಂಕಟೇಶ್ ಯಾವುದೇ ಪ್ರತಿಕ್ರಿಯೆ ನೀಡದೇ ಮೌನ ವಹಿಸಿದಾಗ ಮಧ್ಯ ಪ್ರವೇಶಿಸಿದ ಮಹದೇವಪ್ಪ ತಲಕಾಡು ಗ್ರಾಪಂ ಬೇರೆ ಅಲ್ಲ ವಡೆಯಾಂದಹಳ್ಳಿ ಗ್ರಾಪಂ ಬೇರೆ ಅಲ್ಲ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ವೆಂಕಟೇಶ್ ಅವರಿಗೆ ತಿಳಿ ಹೇಳಿದರು.

ಪ್ರತಿಯೊಬ್ಬರೂ ಕುವೆಂಪು ಅವರ ತತ್ವಾದರ್ಶ ಅಳವಡಿಸಿಕೊಳ್ಳಿ

ತಹಸೀಲ್ದಾರ್ ಶ್ರೀನಿವಾಸ್



ಹೆಚ್.ಡಿ.ಕೋಟೆಯಲ್ಲಿ ಕುವೆಂಪು ಜಯಂತಿ ನಡೆಯಿತು.

ಹೆಚ್.ಡಿ.ಕೋಟೆ, ಡಿ.29– ನಮ್ಮಲ್ಲಿ ಯಾವುದೇ ಮತಬೇಧವಿಲ್ಲ. ನಾವೆಲ್ಲಾ ಒಂದೇ ಎಂದು ಜಗತ್ತಿಗೆ ವಿಶ್ವಮಾನವ ಸಂದೇಶ ಸಾರಿದವರು ಕುವೆಂಪು ಎಂದು ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ವಿಶ್ವಮಾನವ ದಿನಾಚರಣೆಯಲ್ಲಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಕುವೆಂಪು ಅವರು ವಿಶ್ವಮಾನವ ಸಂದೇಶವನ್ನು 5 ಬಗೆಯಲ್ಲಿ ವರ್ಣಿಸಿದರು. ಈ ಪೈಕಿ ಮನುಜ ಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣ ದೃಷ್ಟಿಯಾಗಿದೆ ಎಂದರು.

ಬುದ್ಧ, ಬಸವಣ್ಣ, ಅಂಬೇಡ್ಕರ್, ಕುವೆಂಪು ಅವರು ಜಗತ್ತಿಗೆ ವಿಶ್ವಮಾನವ ಸಂದೇಶ ಸಾರಿದ್ದು, ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದ ಅವರು, ಕುವೆಂಪು ಅವರ ಎಲ್ಲಾ ಸಾಹಿತ್ಯದ ಪ್ರಕಾರಗಳನ್ನು ಓದಿದರೆ ಸಾಕು ಕುವೆಂಪು ಅರ್ಥವಾಗುತ್ತಾರೆ. ಹಾಗೇಯೆ ಮೌಢ್ಯ, ಕಂದಾಚಾರಗಳನ್ನು ತಮ್ಮ ಸಾಹಿತ್ಯದ ಮೂಲಕ ವಿರೋಧಿಸಿದ ಮೊದಲ ಕವಿ ಕುವೆಂಪು ಎಂದರು.

ಮುಖ್ಯ ಭಾಷಣಕಾರ, ಶಿಕ್ಷಕ ರಂಗನಾಥ್ ಮಾತನಾಡಿ, ನವೋದಯದ ಕಾಲ ಸಂಕ್ರಮಣದ ಕಾಲವಾಗಿದ್ದು, 20ನೇ ಶತಮಾನದಲ್ಲಿ ಕುವೆಂಪು ಸಾಹಿತ್ಯ ಕೃಷಿ ಮಾಡಿದರು. ಕನ್ನಡ ಸಾಹಿತ್ಯದ ಮೇರು ಶಿಖರವಾಗಿದ್ದ ಕುವೆಂಪು ಅವರು ಬದುಕಿನುದ್ದಕ್ಕೂ ವಿಶ್ವಮಾನವ ಸಂದೇಶ ಸಾರಿದರು. ಅಲ್ಲದೇ ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟರು. ಕುಲಪತಿಯಾಗಿದ್ದ ವೇಳೆ ಉನ್ನತ ಶಿಕ್ಷಣ ಪಡೆಯಲು ಮಾನಸ ಗಂಗೋತ್ರಿ ಪ್ರಾರಂಭಿಸಿದರು. ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿ ಆಗಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಅಧಿಕಾರಿಗಳಾದ ಡಾ.ರವಿಕುಮಾರ್, ಕೃಷ್ಣಯ್ಯ, ಮಹೇಶ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಹರೀಶ್‌ಗೌಡ, ಗೌರವಾಧ್ಯಕ್ಷ ಕೃಷ್ಣೇಗೌಡ, ನರಸಿಂಹೇಗೌಡ, ಶಿವರಾಜು, ಜಯಶಂಕರ್, ನಟರಾಜು, ಪ್ರಕಾಶ್, ತಿಮ್ಮೇಗೌಡ, ಮಹೇಂದ್ರ, ಶ್ರೀಧರ್, ಪುಟ್ಟೇಗೌಡ, ಶಿವರಾಜು, ಮಹದೇವ್, ಜಗದೀಶ್, ಚಂದ್ರೇಗೌಡ, ದೇವೇಗೌಡ, ಸತೀಶ್‌ಗೌಡ ಸೇರಿದಂತೆ ಇತರರಿದ್ದರು.

ದೇವರಸನಹಳ್ಳಿ ಗ್ರಾಪಂನಲ್ಲಿ 2 ಕೋಟಿ ಭ್ರಷ್ಟಾಚಾರ

ಲೋಕಾಯುಕ್ತಕ್ಕೆ ದೂರು ನೀಡುವೆ: ಮಂಡ್ಯ ಮಹದೇವು

ನಂಜನಗೂಡು, ಡಿ.29– ತಾಲೂಕಿನ ದೇವರಸನಹಳ್ಳಿ ಗ್ರಾಪಂನಲ್ಲಿ ಕಳೆದ 5 ವರ್ಷದಲ್ಲಿ 2 ಕೋಟಿಗೂ ಅಧಿಕ ಭ್ರಷ್ಟಾಚಾರ ನಡೆದಿದ್ದು, ಈ ಬಗ್ಗೆ ಲೋಕಾಯುಕ್ತರಿಗೆ ದೂರು ನೀಡಲಾಗುವುದು ಎಂದು ಮಾಜಿ ಗ್ರಾಪಂ ಸದಸ್ಯ ಮಂಡ್ಯ ಮಹದೇವು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಂಡ್ಯ ಮಹದೇವು ಮಾತನಾಡಿದರು.

ನಗರದ ತಾಲೂಕು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವರಸನಹಳ್ಳಿ ಗ್ರಾಪಂನಲ್ಲಿ ಅಭಿವೃದ್ಧಿ ನೆಪದಲ್ಲಿ 2 ಕೋಟಿಗೂ ಅಧಿಕ ಹಣ ದುರ್ಬಳಕೆಯಾಗಿದೆ. ಶಾಲಾ ಕಾಂಪೌಂಡ್ ನಿರ್ಮಾಣಕ್ಕೆಂದು 2 ಲಕ್ಷ ಅನುದಾನ ನಿಯೋಜಿಸಿ ಕ್ರಿಯಾಯೋಜನೆ ರೂಪಿಸಿ ಬೇರೆ ಅನುದಾನದಲ್ಲಿ ಶಾಲಾ ಕಾಂಪೌಂಡ್ ನಿರ್ಮಾಣ ಮಾಡಿ 2 ಲಕ್ಷ ದೋಚಿದ್ದಾರೆ. ಅಲ್ಲದೆ 2025ನೇ ಸಾಲಿನ ಗ್ರಾಮ ವಿಕಾಸ ಯೋಜನೆ ಅಡಿ ಮಂಜೂರಾದ 2.40 ಲಕ್ಷ ರೂ.ಗಳನ್ನು ಚರಂಡಿ ನಿರ್ಮಾಣಕ್ಕೆಂದು ತೀರ್ಮಾನಿಸಿ ಕಾಮಗಾರಿ ನಡೆಸದೆ ದುರ್ಬಳಕೆ ಮಾಡಿಕೊಂಡಿದ್ದಾರೆ. ಸ್ಮಶಾನದ ಅಭಿವೃದ್ಧಿಗೆ ತಂತಿ ಬೇಲಿ, ಬೋರ್‌ವೆಲ್ ಕೊರಸಲಾಗಿದೆ ಎಂದು 3 ಲಕ್ಷ ದುರ್ಬಳಕೆ ಮಾಡಿಕೊಂಡಿದ್ದಾರೆ. ಪಿಡಿಓ ಸಬಾನಾ ಅವಧಿಯಲ್ಲಿ ಎಲ್‌ಇಡಿ ಬಲ್ಬ್ ಖರೀದಿಗೆಂದು 24.67 ಲಕ್ಷ ಬೋಗಸ್ ಬಿಲ್ ಮಾಡಿದ್ದಾರೆ. 2025–26ರಲ್ಲೂ ಪಿಡಿಓ ನೇರಳೆ ಮಾದಪ್ಪ ಅವರು ಬಲ್ಬ್ ಮತ್ತು ಪೈಪ್ ಖರೀದಿ ಎಂದು ಕೆಲಸ ನಡೆಸದೆ 40 ಲಕ್ಷ, ಸೋಲಾರ್ ಅಳವಡಿಕೆ ಎಂದು 30 ಲಕ್ಷ ಹಣ ದುರುಪಯೋಗ ಮಾಡಲಾಗಿದೆ. ಗ್ರಂಥಾಲಯದ ಕಂಪ್ಯೂಟರ್ ಖರೀದಿಗೆಂದು 3 ಬಾರಿ ಬಿಲ್ ಮಾಡಲಾಗಿದೆ. ಅಲ್ಲದೇ ಯಾವುದೇ ದಾಖಲಾತಿ ಇಲ್ಲದೆ ಖಾತೆಗಳ ಬದಲಾವಣೆ, ಈ ಸ್ವತ್ತು ನೀಡಿ, ನಗರಸಭೆಗೆ ಒಳಪಡುವ ಪ್ರದೇಶದವರಿಗೂ ಪಂಚಾಯಿತಿ ವತಿಯಿಂದ ಎನ್‌ಓಸಿ ನೀಡಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಿದ್ದಾರೆ ಎಂದು ಆರೋಪಿಸಿದರು.

ತಾಪಂ ಇಓ ಸೇರಿದಂತೆ ಉನ್ನತ ಅಧಿಕಾರಿಗಳ ಬೆಂಬಲದಿಂದ ಕಳೆದ 5 ವರ್ಷದಲ್ಲಿ ದೇವರಸನಹಳ್ಳಿ ಗ್ರಾಪಂನಲ್ಲಿ ಪಿಡಿಓ ಯಾಸಿನ್ ಶರೀಫ್ ಅವಧಿಯಲ್ಲಿ 60 ಲಕ್ಷ, ಸಬಾನಾ ಅವಧಿಯಲ್ಲಿ 70 ಲಕ್ಷ, ಚೈತ್ರಾ ಅವಧಿಯಲ್ಲಿ 10 ಲಕ್ಷ, ನೇರಳೆ ಮಾದಪ್ಪ ಅವಧಿಯಲ್ಲಿ 50 ಲಕ್ಷ ಸರ್ಕಾರದ ಅನುದಾನ ದುರುಪಯೋಗ ಮಾಡಲಾಗಿದೆ. ಈ ಬಗ್ಗೆ ಆರ್‌ಟಿಐ ಮೂಲಕ ಸೂಕ್ತ ದಾಖಲಾತಿ ತೆಗೆದುಕೊಂಡಿದ್ದೇನೆ. ಈ ಸಂಬಂಧ ತಾಪಂ ಇಓ, ಜಿಪಂ ಸಿಇಓ, ಸರ್ಕಾರದ ಕಾರ್ಯದರ್ಶಿಗಳಿಗೂ ಪತ್ರ ಬರೆದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇನ್ನಾದರೂ ತಪ್ಪಿತಸ್ಥರ ವಿರುದ್ಧ ಜಿಪಂ ಸಿಇಓ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೇ ಲೋಕಾಯುಕ್ತ ಕಚೇರಿಗೆ ದೂರು ನೀಡಿ ಧರಣಿ ನಡೆಸಲಾಗುವುದು ಎಂದರು.

ಮಾನವ ಕುಲಕ್ಕೆ ಕುವೆಂಪು ಮಾರ್ಗದರ್ಶನ ಸಾರ್ವಕಾಲಿಕ

ಸರಗೂರು, ಡಿ.29– ರಾಷ್ಟ್ರಕವಿ ಕುವೆಂಪು ಅವರ ಪುಸ್ತಕಗಳನ್ನು ಯುವ ಪೀಳಿಗೆ ಅಧ್ಯಯನ ಮಾಡಬೇಕು. ಅವರ ಕಾವ್ಯಗಳಲ್ಲಿರುವ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದರಿಂದ ಸಮಾಜದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗಲಿದೆ ಎಂದು ಯುವಜನ ವ್ಯವಹಾರ ಹಾಗೂ ಸಚಿವಾಲಯದ ನಿವೃತ್ತ ರಾಜ್ಯ ನಿರ್ದೇಶಕ ಎಂ.ಎನ್.ನಟರಾಜು ಅಭಿಪ್ರಾಯ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಸೋಮವಾರ ನಡೆದ ವಿಶ್ವ ಮಾನವ ರಾಷ್ಟ್ರಕವಿ ಕುವೆಂಪು ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕುವೆಂಪು ಅವರು ಮಾನವ ಕುಲಕ್ಕೆ ನೀಡಿದ ಮಾರ್ಗದರ್ಶನ ಸಾರ್ವಕಾಲಿಕ. ಕನ್ನಡಕ್ಕೆ ಹೊಸ ನುಡಿಗಟ್ಟು ಹಾಗೂ ಹೊಸ ಕಲ್ಪನೆಗಳನ್ನು ನೀಡಿ ಹೊಸಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಧೀಮಂತ ಸಾಹಿತಿ. 'ಮನುಜ ಮತ ವಿಶ್ವಪಥ' ಸಂದೇಶ ಸಾರಿದ ಶ್ರೇಷ್ಠ ವಿಶ್ವಮಾನವ ಎಂದರು.

ಎಂಎಂಕೆ ಕಾಲೇಜಿನ ಉಪನ್ಯಾಸಕ ಸಿದ್ದಾರ್ಥ ಮಾತನಾಡಿ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ. ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ರಚಿಸಿ, ರಾಜ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟಿದ್ದಾರೆ. ಅವರಿಗೆ ಯುಗದ ಕವಿ ಹಾಗೂ ಜಗದ ಕವಿ ಎಂಬ ಬಿರುದುಗಳಿವೆ. ವಿಭಿನ್ನ ಆಯಾಮಗಳ ಮೂಲಕ ವಿಶ್ವ ಮಾನವ ಸಂದೇಶವನ್ನು ವಿಶ್ವಕ್ಕೆ ಪರಿಚಯಿಸಿದ ಮೊದಲ ಯುಗದ ಕವಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿದರು. ಪಪಂ ಅಧ್ಯಕ್ಷೆ ಚೈತ್ರಾ, ನಿವೃತ್ತ ಶಿಕ್ಷಕ ರಾಮಲಿಂಗಪ್ಪ, ಆದಿ ಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಶಿವಣ್ಣ, ಸಾಗರೆ ಆರೋಗ್ಯ ಕೇಂದ್ರ ಆರೋಗ್ಯಾಧಿಕಾರಿ ಡಾ.ಶರತ್, ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕಸಾಪ ತಾಲೂಕು ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಜಿಪಂ ಮಾಜಿ ಸದಸ್ಯ ಪಿ.ರವಿ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಸುಧೀರ್, ಮಹೇಶ್, ಪಪಂ ಸದಸ್ಯ ಶ್ರೀನಿವಾಸ್, ಮುಖ್ಯಾಧಿಕಾರಿ ಎಸ್.ಕೆ.ಸಂತೋಷ್ ಕುಮಾರ್, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ರಾಜಣ್ಣ, ಚಿಕ್ಕವೀರನಾಯಕ, ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ, ನಾಮಧಾರಿಗೌಡ ಸಮಾಜದ ತಾಲೂಕು ಅಧ್ಯಕ್ಷ ರತ್ನಯ್ಯ, ಪಪಂ ಮಾಜಿ ಸದಸ್ಯ ರಮೇಶ, ನಾಯಕ ಸಮಾಜದ ಮುಖಂಡ ಶಂಭುಲಿಂಗಯ್ಯ, ಪತ್ರಕರ್ತರ ಸಂಘದ ಅಧ್ಯಕ್ಷ ನಾಗರಾಮ್, ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ನಾಗರಾಜು, ಕಸಾಪ ಪ್ರಧಾನ ಕಾರ್ಯದರ್ಶಿ ನಿಂಗರಾಜು, ಬಂಗಾರಯ್ಯ, ದಾಸಚಾರಿ, ಸಣ್ಣಸ್ವಾಮಿ, ಮುಖಂಡರಾದ ಅಣ್ಣಯ್ಯ ಸ್ವಾಮಿ, ಮಹೇಶ್, ಮಲ್ಲೇಶ್, ನಿವೃತ್ತ ಪಿಡಿಓ ಲಿಂಗಾಚಾರ್, ಒಕ್ಕಲಿಗರ ಸಂಘದ ನಿರ್ದೇಶಕ ಸಕಲೇಶ್, ಶಾಂಬಮೂರ್ತಿ, ಅಧಿಕಾರಿಗಳಾದ ಸುನೀಲ್, ಮನೋಹರ್, ಮುಜೀಬ್, ರವಿಚಂದ್ರನ್, ಪುರುಷೋತ್ತಮ್ ಇತರರಿದ್ದರು.

ನೂತನ ದಿನದರ್ಶಿಕೆ ಬಿಡುಗಡೆ



ತಿ.ನರಸೀಪುರ ತಾಲೂಕು ವಾಟಾಳು ಡೇರಿ ನೂತನ ದಿನದರ್ಶಿಕೆಯನ್ನು, ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಬಿಡುಗಡೆಗೊಳಿಸಿದರು. ಸಂಘದ ಅಧ್ಯಕ್ಷ ವಿ.ಎಂ.ಮಹದೇವಸ್ವಾಮಿ, ಉಪಾಧ್ಯಕ್ಷ ಶಿವಸ್ವಾಮಿ, ನಿರ್ದೇಶಕರಾದ ಯೋಗೇಶ್ವರಸ್ವಾಮಿ, ಕೃಷ್ಣಶೆಟ್ಟಿ, ಆನಂದ, ರಾಜು ನಾಯಕ, ಸೋಮರಾಜು, ಕಾಂತರಾಜ್ ಅರಸ್, ಭಾಗ್ಯಮ್ಮ, ತಾಯಮ್ಮ, ಭಾಗ್ಯಮ್ಮ, ಕಾರ್ಯದರ್ಶಿ ವೈ.ಎಂ.ಮಂಜುನಾಥ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಬಿಜೆಪಿ ಉಪಾಧ್ಯಕ್ಷರಾಗಿ ನೇಮಕ



ಹೆಚ್.ಡಿ.ಕೋಟೆ, ಡಿ.29– ತಾಲೂಕಿನ ಬಿಜೆಪಿ ಉಪಾಧ್ಯಕ್ಷರಾಗಿ ಎನ್.ಚಂದ್ರಮೌಳೇಶ್ವರ ನೇಮಕಗೊಂಡಿದ್ದಾರೆ. ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಪದಗ್ರಹಣ ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಸುಬ್ಬಣ್ಣ, ತಾಲೂಕು ಅಧ್ಯಕ್ಷ ಶಂಬೇಗೌಡ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಹುಣಸೂರಲ್ಲಿ ಕುವೆಂಪು ಜಯಂತಿ ಆಚರಣೆ

ಹುಣಸೂರು, ಡಿ.29– ಇಂಗ್ಲಿಷ್ ಮೂಲಕ ಬರಹ ಆರಂಭಿಸಿದ್ದ ಕುವೆಂಪು ಅವರು ಕನ್ನಡಕ್ಕೆ ಹೊರಳಿ ಕನ್ನಡ ಸಾಹಿತ್ಯ ಕ್ಷೇತ್ರವನ್ನೇ ಅತ್ಯಂತ ಶ್ರೀಮಂತ ಗೊಳಿಸಿದ ಬಹುದೊಡ್ಡ ಮೇರು ಶಿಖರ ಎಂದು ತಾಪಂ ಇಓ ಕೆ.ಹೊಂಗಯ್ಯ ತಿಳಿಸಿದರು.



ಹುಣಸೂರಿನ ತಾಪಂ ಸಭಾಂಗಣದಲ್ಲಿ ಕುವೆಂಪು ಜಯಂತಿ ನಡೆಯಿತು.

ಇಲ್ಲಿನ ತಾಪಂ ಸಭಾಂಗಣದಲ್ಲಿ ಸಮಾನ ಮನಸ್ಕ ಸಂಘಟನೆಗಳು ಆಯೋಜಿಸಿದ್ದ ಕುವೆಂಪು ಜಯಂತಿಯಲ್ಲಿ ಮಾತನಾಡಿದ ಅವರು ಕುವೆಂಪು ಅವರು ತಮ್ಮ ಅಗಾಧ ಪ್ರತಿಭೆ ಮೂಲಕ ಇಡೀ ಕನ್ನಡ ಸಾಹಿತ್ಯ ಲೋಕವನ್ನು ಪ್ರಭಾವಿಸಿದ್ದಾರೆ. ಅವರ ಬರವಣಿಗೆ ವೈಖರಿ ಅದ್ಭುತ ಸನ್ನಿವೇಶ ಸೃಷ್ಟಿಸುತ್ತಿತ್ತು. ವೈಚಾರಿಕ ಚಿಂತನೆ ಸಮಾನತೆಯ ಹಂಬಲ ಎಂದಿಗೂ ನಿರಂತರವಾಗಿ ನಮಗೆ ಸ್ಫೂರ್ತಿಯಾಗಿದೆ ಎಂದರು.

ಪ್ರಗತಿಪರ ಚಿಂತಕ ಜೆ.ಮಹದೇವ ಮಾತನಾಡಿ, 20ನೇ ಶತಮಾನದಲ್ಲಿ ನಾಡು ಕಂಡ ಮಹಾನ್ ದಾರ್ಶನಿಕ, ಕವಿ ಕಾದಂಬರಿಕಾರ ಹಾಗೂ ಕನ್ನಡ ಸಾಹಿತ್ಯ ಲೋಕಕ್ಕೆ ಅನೇಕ ಉತ್ಕೃಷ್ಟ ಕೃತಿಗಳನ್ನು ನೀಡಿದ ಕುವೆಂಪು ಅವರಿಗೆ ಕುವೆಂಪು ಅವರೇ ಸಾಟಿ. ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟ ಕುವೆಂಪು ಅವರು ತಮ್ಮ ವಿಶ್ವಮಾನವ ಸಂದೇಶದಿಂದಾಗಿ ನಮ್ಮ ನಡುವೆ ಅಜರಾಮರರಾಗಿ ಉಳಿಯುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಕಸಾಪ ಉಪಾಧ್ಯಕ್ಷೆ ಮಹದೇವಮ್ಮ, ಸಮಾನ ಮನಸ್ಕ ಸಂಘಟನೆಗಳ ಅಧ್ಯಕ್ಷ ಶಿವರಾಜು, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಕೃಷ್ಣ, ದಲಿತ ಮುಖಂಡ ಸೋಮಯ್ಯ, ನಿವೃತ್ತ ಶಿಕ್ಷಕ ಶ್ರೀಕಂಠ ಮೂರ್ತಿ ಇನ್ನಿತರರಿದ್ದರು.

ಪಿಎಸಿಎಸ್‌ಗಳು ರೈತರ ಬೆನ್ನೆಲುಬಾಗಿ ನಿಲ್ಲಬೇಕು

ಭೇರ್ಯ: ರೈತರ ಕೃಷಿ ಚಟುವಟಿಕೆಗಳಿಗೆ ಬೇಕಾಗುವ ಗೊಬ್ಬರ, ಔಷಧಿ ಹಾಗೂ ಇನ್ನಿತರೆ ಉತ್ಪನ್ನಗಳನ್ನು ಕಡಿಮೆ ಬೆಲೆಯಲ್ಲಿ ಪೂರೈಸುತ್ತಾ ರೈತರ ಬೆನ್ನಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಲ್ಲಬೇಕು ಎಂದು ಖ್ಯಾತ ಮೂಳೆ ತಜ್ಞ ಡಾ.ಸಾ.ರಾ.ಧನುಷ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2026ನೇ ಸಾಲಿನ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಹಕಾರ ಸಂಘಗಳು ರೈತರಿಗೆ ಗೊಬ್ಬರ, ಔಷಧಿ, ಸಾಲ ಸೌಲಭ್ಯ, ವಿವಿಧ ಸವಲತ್ತುಗಳನ್ನು ಸಕಾಲದಲ್ಲಿ ನೀಡಿ ಅವರ ಅಭಿವೃದ್ಧಿಗೆ ಕಾರಣವಾಗಿವೆ. ಅದೇ ರೀತಿ ರೈತರಿಗೆ ಬಹಳಷ್ಟು ಅನುಕೂಲ ಮಾಡಿಕೊಡುತ್ತಿರುವ ಸಹಕಾರ ಸಂಘಗಳು ಇನ್ನಷ್ಟು ಬೆಳೆಯಬೇಕು ಎಂದರು.

ಸಹಕಾರ ಸಂಘಗಳು ನಂಬಿಕೆ ಮೇಲೆ ನಡೆಯುತ್ತದೆ. ಆ ನಂಬಿಕೆಯನ್ನು ಸಹಕಾರ ಸಂಘ ಉಳಿಸಿಕೊಂಡು ಬೆಳಸಿ ಕೊಂಡು ಹೋಗಬೇಕು. ಇದರಲ್ಲಿ ರಾಜಕೀಯ ಬೆರಸದೇ ಪಕ್ಷಾತೀತವಾಗಿ ಸರ್ವರನ್ನು ಒಂದೇ ರೀತಿ ಕಂಡಾಗ ಮಾತ್ರ ಸಹಕಾರ ಸಂಘಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ಈ ವೇಳೆ ಸಹಕಾರ ಸಂಘದ ಅಧ್ಯಕ್ಷ ಎಂ.ಎಸ್.ಧ್ರುವಕುಮಾರ್, ಉಪಾಧ್ಯಕ್ಷ ಬೈರಾಜಿ, ನಿರ್ದೇಶಕರಾದ ಆರ್.ರಂಗಸ್ವಾಮಿ, ಭಾಸ್ಕರ್, ಎಂ.ಕೆ.ಕಿರಣ್ ಕುಮಾರ್, ಎಂ.ವಿ.ರಮೇಶ್, ಎಂ.ಕೆ.ನಟರಾಜ್, ಎಂ.ಕೆ.ಸುಧಾಕರ್, ಕೃಷ್ಣಶೆಟ್ಟಿ, ಪಾಪನಾಯಕ ಹಾಗೂ ಸಂಘದ ಪ್ರಭಾರ ಕಾರ್ಯದರ್ಶಿ ಎ.ಮಂಜುನಾಥ್, ಮುಖಂಡರಾದ ಎಂ.ಎಲ್.ಧನಂಜಯ, ರಾಧಕೃಷ್ಣ, ರಂಗಣ್ಣ, ವಿಶ್ವನಾಥ್, ಕೃಷ್ಣೇಗೌಡ, ಕುನ್ನೇಗೌಡ, ರಾಘು, ನಾಗೇಶ್, ಮೋಹನ್ ಕುಮಾರ್, ರತನ್, ಅರ್ಜುನ್, ರಾಮಸ್ವಾಮಿಗೌಡ, ಸುರೇಶಣ್ಣ ಸೇರಿದಂತೆ ಅನೇಕ ರೈತರು ಭಾಗವಹಿಸಿದ್ದರು.



ನೂತನ ವರ್ಷದ ಕ್ಯಾಲೆಂಡರ್ ಅನ್ನು ಡಾ.ಸಾ.ರಾ.ಧನುಷ್ ಬಿಡುಗಡೆ ಮಾಡಿದರು.

ಜಗತ್ತಿಗೆ ವಿಶ್ವಮಾನವ ಸಂದೇಶ ಸಾರಿದ ಕುವೆಂಪು

ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಶ್ರೀನಿವಾಸ್

ತಿ.ನರಸೀಪುರ, ಡಿ.29– ರಾಷ್ಟ್ರಕವಿ ಕುವೆಂಪು ಅವರು ಕನ್ನಡ ನೆಲ, ಜಲ, ಭಾಷೆಗಾಗಿ ಜೀವನ ಪರ್ಯಂತ ಹೋರಾಡಿದ್ದಾರೆ ಎಂದು ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ತಿರುಮಕೂಡಲು ಶ್ರೀನಿವಾಸ್ ತಿಳಿಸಿದರು.



ಕುವೆಂಪು ವೃತ್ತ ನಾಮಫಲಕವನ್ನು ಮುಖಂಡರು ಉದ್ಘಾಟಿಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ನೂತನವಾಗಿ ಅಳವಡಿಸಿರುವ ಕುವೆಂಪು ವೃತ್ತದ ನಾಮಫಲಕ ಉದ್ಘಾಟಿಸಿ ಮಾತನಾಡಿದ ಅವರು, ಕುವೆಂಪು ಅವರು ತಮ್ಮ ಕವಿತೆಗಳ ಮೂಲಕ ಸಮಾಜದ ಅಸಮಾನತೆ ಅಳಿಸಿ ಹಾಕಲು ಶ್ರಮಿಸಿದರು. ಅಲ್ಲದೇ ಜಗತ್ತಿಗೆ ವಿಶ್ವಮಾನವ ಸಂದೇಶ ಸಾರಿದರು. ಆ ಮೂಲಕ ಜಗತ್ತಿಗೆ ಸಮಸೃಷ್ಟಿ, ಪ್ರಜ್ಞೆ ನೀಡುವ ಮೂಲಕ ವಿಶ್ವಪಥಕ್ಕೆ ಮುನ್ನುಡಿ ಬರೆದಿದ್ದಾರೆ. ಹಾಗಾಗಿ ಪ್ರತಿಯೊಬ್ಬರೂ ತಮ್ಮ ಬದುಕು, ನಡೆ–ನುಡಿಗಳಲ್ಲಿ ಕುವೆಂಪು ಅವರ ಸಾಹಿತ್ಯದ ಪ್ರೇರಣೆಯ ಆದರ್ಶಗಳನ್ನು ಅಳವಡಿಸಿಕೊಂಡು ಸರಳತೆ, ಸಮಾನತೆ, ನೆಮ್ಮದಿಯ ಬದುಕು ರೂಪಿಸಿಕೊಳ್ಳಬೇಕು ಎಂದರು.

ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಮಾತನಾಡಿ, ಕುವೆಂಪು ಅವರ ಬರವಣಿಗೆಯಲ್ಲಿ ಸಾಮಾಜಿಕ ಕಳಕಳಿ ಇತ್ತು. ಪ್ರತಿಯೊಬ್ಬ ಮನುಷ್ಯ ಹುಟ್ಟಿನಿಂದಲೇ ವಿಶ್ವಮಾನವರಾಗಿ ಹುಟ್ಟುತ್ತಾರೆ. ಬೆಳೆಯುತ್ತಾ ಜಾತಿ, ಧರ್ಮ, ಬಣ್ಣ ಇವುಗಳ ಸಂಕೋಲೆಗೆ ಸಿಲುಕಿ ಅಲ್ಪ ಮಾನವರಾಗಿ ಬಿಡುತ್ತಾರೆ. ನಾವೆಲ್ಲರೂ ಜಾತಿ ಧರ್ಮಗಳ ಸಂಕೋಲೆಗೆ ಸಿಲುಕದೆ ಕುವೆಂಪು ಅವರ ಆಶಯದಂತೆ ಮನುಜ ಮತ ವಿಶ್ವಪಥದ ದಾರಿಯಲ್ಲಿ ನಡೆಯುವ ಪ್ರತಿಜ್ಞೆ ಮಾಡೋಣ ಎಂದು ಕರೆ ನೀಡಿದರು.

ಈ ವೇಳೆ ಸಂಘದ ಗೌರವಾಧ್ಯಕ್ಷ ಹೋಟೆಲ್ ರಾಜಣ್ಣ ಉಪಾಧ್ಯಕ್ಷ ಕುಮಾರ, ಕಾರ್ಯದರ್ಶಿ ರಾಜಣ್ಣ, ಶಂಕರ, ನಾಗಲಿಂಗು, ರಮೇಶ್, ಜೆ.ನಾಗರಾಜು, ಪಿ.ಸುಬ್ರಹ್ಮಣ್ಯ, ಮಹದೇವ, ಟಿ.ಸಿ.ಜಯರಾಂ, ಮಂಜು, ಗಿರೀಶ್, ಮಾಧು, ಮಹದೇವ, ನಾಗರಾಜು, ಲೋಕೇಶ್, ಸಿದ್ದಪ್ಪ, ಕುಮಾರ, ಎಲ್.ಸುನೀಲ್, ಸುರೇಶ್, ನಂದಕುಮಾರ್, ಶಿವಣ್ಣ, ಪುಟ್ಟು, ಚಂದ್ರ, ವಿನ್ ಸೋಮಣ್ಣ, ಛತ್ರ ಶ್ರೀನಿವಾಸ್, ರಾಮಲಿಂಗು, ಕಾರ್ ಮಲ್ಲಪ್ಪ, ಡಾ.ಮಲ್ಲಿಕಾರ್ಜುನಸ್ವಾಮಿ ಹಾಜರಿದ್ದರು.

> ಕನ್ನಡ ಸಾಹಿತ್ಯವನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದ ಕೀರ್ತಿ ರಾಷ್ಟ್ರಕವಿ ಕುವೆಂಪು ಅವರಿಗೆ ಸಲ್ಲುತ್ತದೆ. ಅಗಾಧ ಪಾಂಡಿತ್ಯ ಹೊಂದಿದ್ದ ಅವರು ಮಾನವೀಯ ಮೌಲ್ಯ ಎತ್ತಿ ಹಿಡಿದವರು. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆ ಮಾತಿನಂತೆ ಕನ್ನಡದ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿ ತಮ್ಮದೇ ಆದ ಚಾಪನ್ನು ಕುವೆಂಪು ಮೂಡಿಸಿದ್ದರು. ಉತ್ತಮ ಬರವಣಿಗೆಯಿಂದ ಆರೋಗ್ಯಕರ ಸಮಾಜ ಸೃಷ್ಟಿಸಲು ಕುವೆಂಪು ಶ್ರಮಿಸಿದರು.
>
> – ಕೆ.ಎನ್.ಪ್ರಭುಸ್ವಾಮಿ, ಜಿಲ್ಲಾ ಜನಜಾಗೃತಿ ಜಿಲ್ಲಾಧ್ಯಕ್ಷ.

ಎಸ್.ಕೃಷ್ಣರಾವ್ ನಿಧನ



ನಂಜನಗೂಡು, ಡಿ.29– ನಗರದ ನಿವಾಸಿ ಹಾಗೂ ನಿವೃತ್ತ ಪತ್ರಕರ್ತ ಎಸ್.ಕೃಷ್ಣರಾವ್(79) ಸೋಮವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಕೃಷ್ಣರಾವ್ ಈ ಹಿಂದೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ, ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಧರ್ಮದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಅಂತ್ಯಕ್ರಿಯೆ ನಗರದ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಎನ್.ರೇವಣ್ಣ



ನಂಜನಗೂಡು: ತಾಲೂಕಿನ ತಾಂಡವಪುರ ಗ್ರಾಮದ ನಿವಾಸಿ, ನಿವೃತ್ತ ಕಂದಾಯ ಅಧಿಕಾರಿ ಟಿ.ಎನ್.ರೇವಣ್ಣ (74) ಸೋಮವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಡಿ.30ರಂದು ಮೃತರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಮುಖಂಡ ದೊಡ್ಡಸ್ವಾಮೇಗೌಡರಿಂದ ಕಾನೂನುಬಾಹಿರವಾಗಿ ನಿವೇಶನ ನೋಂದಣಿ

● ಹಿರಿಯ ವಕೀಲ ಅರುಣ್ ಕುಮಾರ್ ಆರೋಪ ● ಸಮಸ್ಯೆ ಪರಿಹರಿಸದಿದ್ದರೆ ನ್ಯಾಯಾಲಯದ ಮೊರೆ ● ಜಿಪಿಎಗೆ ನಿಗದಿತ ಶುಲ್ಕ ಪಾವತಿಸದೆ ನಿವೇಶನ ಮಾರಾಟ ● 10 ವರ್ಷದಿಂದ ನ್ಯಾಯಾಲಯಕ್ಕೆ ಅಲೆಯುತ್ತಿರುವ 12 ಮಂದಿ ● ಒಂದೇ ಸರ್ವೆ ನಂಬರ್ ಭೂಮಿ ಇಬ್ಬರಿಗೆ ಮಾರಾಟ ● ಸಮಸ್ಯೆ ಪರಿಹರಿಸದಿದ್ದರೆ ಪರಿಶಿಷ್ಟ ಜಾತಿ ದೌರ್ಜನ್ಯ ಕಾಯ್ದೆಯಡಿ ಪ್ರಕರಣ

ಮೈಸೂರು, ಡಿ.29(ಬಿಎಲ್‌ಯು)– ಕೆ.ಆರ್.ನಗರದ ಶಾಸಕ ಡಿ. ರವಿಶಂಕರ್ ಅವರ ತಂದೆ, ಕಾಂಗ್ರೆಸ್ ಮುಖಂಡರೂ ಆದ ದೊಡ್ಡಸ್ವಾಮೇಗೌಡ ಅವರು ಬೆಂಗಳೂರಿನ ಬಿಇಎಂಎಲ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿದ್ದ ವೇಳೆ ನನ್ನ ಸೋದರ ಮಾವ ನಾಗರಾಜ್ ಸೇರಿದಂತೆ 12 ಮಂದಿಗೆ ಕಾನೂನು ಬಾಹಿರವಾಗಿ ನಿವೇಶನ ನೋಂದಣಿ ಮಾಡಿ ವಂಚಿಸಿದ್ದಾರೆ ಎಂದು ಹಿರಿಯ ವಕೀಲ ಅರುಣ್ ಕುಮಾರ್ ಆರೋಪಿಸಿದ್ದಾರೆ.



ಮೈಸೂರಿನ ಕಿಂಗ್ಸ್‌ಕೋರ್ಟ್ ಹೋಟೆಲ್‌ನಲ್ಲಿ ಸೋಮವಾರ ಹಿರಿಯ ವಕೀಲ ಅರುಣ್ ಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರಿನ ಕಿಂಗ್ಸ್‌ಕೋರ್ಟ್ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 1992ರಲ್ಲಿ ದೊಡ್ಡಸ್ವಾಮೇಗೌಡ ಅವರು ಬಿಇಎಂಎಲ್ ಎಂಪ್ಲಾಯಿಸ್ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಗಾಗಿ ರೈತರಿಂದ 52 ಎಕರೆ ಜಮೀನು ಖರೀದಿ ಮಾಡಿ, ಬಡಾವಣೆ ನಿರ್ಮಾಣ ಮಾಡಿದ್ದರು.

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ಬಡಾವಣೆ ನಿರ್ಮಾಣ ಮಾಡಿ 400 ಬಿಇಎಂಎಲ್ ನೌಕರರಿಗೆ ನಿವೇಶನ ಹಂಚಿಕೆ ಮಾಡಿದ್ದರು. ಆದರೆ ಬೆಂಗಳೂರಿನ ದಕ್ಷಿಣ ತಾಲೂಕು ಕೆಂಗೇರಿ ಹೋಬಳಿ ಸರ್ವೆ ನಂಬರ್ 16/1ರ ಮೈಲಸಂದ್ರ ಗ್ರಾಮದ 20 ಗುಂಟೆ ಜಮೀನನ್ನು ಕರಿಯಪ್ಪ ಅವರಿಂದ ಮಾರಾಟ ಒಪ್ಪಂದದಂತೆ ದೊಡ್ಡಸ್ವಾಮೇಗೌಡರು ಖರೀದಿಸಿದ್ದರು.

ದೊಡ್ಡಸ್ವಾಮೇಗೌಡರು, ನಾಗರಾಜು ಸೇರಿದಂತೆ 12 ಜನರಿಗೆ 2003ರಲ್ಲಿ ಅಗ್ರಿಮೆಂಟ್ ಆಫ್ ಸೇಲ್ ಡೀಡ್ ನೋಂದಣಿ ಮಾಡಿದ್ದಾರೆ. ಆದರೆ ಜಿಪಿಎಗೆ ನಿಗದಿತ ಶುಲ್ಕ ಪಾವತಿ ಮಾಡಿ ಹಕ್ಕು ಪಡೆದಿರಲಿಲ್ಲ. ನೋಂದಾಯಿತ ಮಾರಾಟ ಪತ್ರವಿಲ್ಲದೆ, ಪುಸ್ತಕ 4ರಲ್ಲಿ ಮಾತ್ರ ನಮೂದಿಸಿದ್ದಾರೆ. ಇದನ್ನು ಜಿಪಿಎ ಆಧಾರದ ಮೇಲೆ ನಿವೇಶನ ನೋಂದಾಯಿಸಿದ್ದಾರೆ. ಇದರಿಂದ ಋಣಭಾರ ಪತ್ರದಲ್ಲಿ 12 ಜನರ ನೋಂದಣಿ ದಾಖಲಾಗಿಲ್ಲ ಎಂದು ಅರುಣ್ ಕುಮಾರ್ ವಿವರಿಸಿದರು.

ಇದೇ ವೇಳೆ 2014ರಲ್ಲಿ ಬೆಂಗಳೂರಿನ ಎಂ ಅಂಡ್ ಎಂ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮುದಪ್ಪ ಎಂಬಾತ ದೊಡ್ಡಸ್ವಾಮೇಗೌಡರಿಗೆ ಜಮೀನು ಮಾರಾಟ ಮಾಡಿದ ರೈತರಿಂದ ತಮ್ಮ ಹೆಸರಿಗೆ ಈ 20 ಗುಂಟೆ ಜಮೀನು ಖರೀದಿಸಿದ್ದಾರೆ.

ಇದರಿಂದ 20 ಗುಂಟೆ ಭೂಮಿ 12 ಜನರಿಗೆ ಮಾರಾಟವಾಗುವುದರ ಜೊತೆಗೆ ಎಂ ಅಂಡ್ ಎಂ ಕಂಪನಿಗೂ ನೋಂದಣಿಯಾಗಿದೆ. ಈ ಮೂಲಕ ಇಬ್ಬರಿಗೆ ಜಮೀನು ಮಾರಾಟವಾದಂತಾಗಿದೆ ಎಂದರು.

ದೊಡ್ಡಸ್ವಾಮೇಗೌಡರ ಪರವಾಗಿ ನೋಂದಾಯಿಸಿದ್ದ ಜಿಪಿಎಯನ್ನು ರೈತರ ಮೂಲಕ ಮುದ್ದಪ್ಪ ರದ್ದು ಗೊಳಿಸಿದರು. ತರುವಾಯ ಅನ್ಯಕ್ರಾಂತ ವಾದ 20 ಗುಂಟೆ ಭೂಮಿಯನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಂಡರು. ಬಳಿಕ ಇದೇ 20 ಗುಂಟೆ ಭೂಮಿಯನ್ನು ದೊಡ್ಡಸ್ವಾಮೇಗೌಡರು ನಾಗರಾಜು ಸೇರಿ 12 ಮಂದಿ ಹೆಸರಿಗೆ ರಿಜಿಸ್ಟರ್ ಮಾಡಿಕೊಟ್ಟಿದ್ದಾರೆ ಎಂದು ಅರುಣ್ ಕುಮಾರ್ ಹೇಳಿದರು.

ಈ ವೇಳೆ ಮುದ್ದಪ್ಪ ಅವರು ಬೆಂಗಳೂರಿನ 10ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ದೊಡ್ಡಸ್ವಾಮೇಗೌಡ ಸೇರಿದಂತೆ 12 ಜನರ ವಿರುದ್ಧ ಘೋಷಣೆ ಹಾಗೂ ಸ್ವಾಧೀನ ಮೊಕದ್ದಮೆ ಸಲ್ಲಿಸಿದ್ದಾರೆ ಎಂದು ಹೇಳಿದರು.

ಜಿಪಿಎ ಗೆ ನಿಗದಿತ ಶುಲ್ಕ ಪಾವತಿಸಿ ಮಾರಾಟ ಮಾಡುವ ಹಕ್ಕು ಹೊಂದದ ದೊಡ್ಡಸ್ವಾಮೇಗೌಡರು ತಮ್ಮಿಂದ ಆದ ತಪ್ಪನ್ನು ಈ ತನಕ ಸರಿಪಡಿಸಿಲ್ಲ. ಈ ಹಿನ್ನೆಲೆಯಲ್ಲಿ 2015ರಿಂದ ಈ ಸಮಸ್ಯೆ ಪರಿಹರಿಸಲು ದೊಡ್ಡಸ್ವಾಮೇಗೌಡರು ಯಾವುದೇ ಸಕಾರಾತ್ಮಕ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ದೊಡ್ಡಸ್ವಾಮೇಗೌಡರು ಕೂಡಲೇ ಈ ಸಮಸ್ಯೆ ಪರಿಹಾರ ಮಾಡದಿದ್ದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ. ಅಷ್ಟೇ ಅಲ್ಲದೆ ಪರಿಶಿಷ್ಟ ಜಾತಿ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸುತ್ತೇವೆ ಎಂದು ಅರುಣ್ ಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಾಗರಾಜು, ವಕೀಲ ಸುರೇಂದ್ರ ಕುಮಾರ್ ಉಪಸ್ಥಿತರಿದ್ದರು.

> ಡಿ30ಕ್ಕೆ ಮೈಸೂರಿನ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ. ನನಗೆ ಅಧ್ಯಕ್ಷ ಸ್ಥಾನ ಸಿಗಬಾರದೆಂದು ಸುಳ್ಳು ಆರೋಪ ಮಾಡಿದ್ದಾರೆ. ಕಳೆದ 22 ವರ್ಷದ ಹಿಂದೆ ನಾನು ಕಾನೂನಾತ್ಮಕವಾಗಿ ನೋಂದಣಿ ಮಾಡಿಕೊಟ್ಟಿದ್ದೇನೆ. ಬಿಇಎಂಎಲ್ ಕಾರ್ಖಾನೆ ಬಿಟ್ಟು 18 ವರ್ಷವಾಗಿದೆ. ಅಂದು ಈ ಸಮಸ್ಯೆ ಪರಿಹರಿಸಿಕೊಳ್ಳದೆ ಈಗ ಪ್ರಶ್ನಿಸುತ್ತಿರುವ ಹಿನ್ನೆಲೆ ಏನು? 12 ಮಂದಿಗೆ ಅನ್ಯಾಯವಾಗಿದ್ದರೆ ಹಾಲಿ ಸೊಸೈಟಿಯವರು ಪರಿಹರಿಸುತ್ತಾರೆ. ಸೊಸೈಟಿ ಪರವಾಗಿರುವ ವಕೀಲರು ನ್ಯಾಯಾಲಯದಲ್ಲಿ ಇವರ ಪರ ವಕಾಲತ್ತು ವಹಿಸಿ ಅವರ ವಾದ ಮಾಡುತ್ತಾರೆ.
> – ದೊಡ್ಡಸ್ವಾಮೇಗೌಡ

ಚುನಾವಣಾಧಿಕಾರಿ ನಿರ್ಧಾರವನ್ನು ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ

ದೊಡ್ಡಸ್ವಾಮೇಗೌಡರ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಸಹಕಾರಿ ಸಂಸ್ಥೆಯ ನಿರ್ದೇಶಕರಾಗಿ ಆಯ್ಕೆಯಾಗಲು ಅನರ್ಹರಾಗಿರುತ್ತಾರೆ. ಸಹಕಾರ ಸಂಘದ ಕಾಯ್ದೆಯನ್ನು ಈ ಮೂಲಕ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದರು.

ದೊಡ್ಡಸ್ವಾಮೇಗೌಡರು ಈಗಾಗಲೇ ಸೊಸೈಟಿಯ ಹಲವು ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಹಾಗಾಗಿ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅವರು ಅರ್ಹರಲ್ಲ ಎಂದು ವಾದಿಸಿದರು.

ಈ ಹಿನ್ನೆಲೆಯಲ್ಲಿ ದೊಡ್ಡಸ್ವಾಮೇಗೌಡರ ನಾಮಪತ್ರವನ್ನು ಚುನಾವಣಾಧಿಕಾರಿಗಳು ಪರಿಗಣಿಸಬಾರದು. ಒಂದು ವೇಳೆ ಪರಿಗಣಿಸಿದರೆ ಚುನಾವಣಾಧಿಕಾರಿಗಳ ನಿರ್ಧಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವುದಾಗಿ ಎಂದು ಅರುಣ್ ಕುಮಾರ್ ಘೋಷಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
45 (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ವೃಷಭ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

99 ಲಕ್ಷ ಸಾಲ ಪಡೆದು ವಂಚನೆ ಆರೋಪ: ಬಿಜೆಪಿ ಶಾಸಕ ಶರಣು ಸಲಗರ್ ವಿರುದ್ಧ ಪ್ರಕರಣ ದಾಖಲು

ಬೀದರ್, ಡಿ.29– 2023ರ ವಿಧಾನ ಸಭಾ ಚುನಾವಣೆಯ ಸಮಯದಲ್ಲಿ ಸಾಲವಾಗಿ ಪಡೆದಿದ್ದ 99 ಲಕ್ಷ ರೂ. ಹಿಂದಿರುಗಿಸಲು ವಿಫಲವಾದ ಆರೋಪದ ಮೇಲೆ ಬಿಜೆಪಿ ಶಾಸಕ ಶರಣು ಸಲಗರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.



ಶಾಸಕರ ದೂರದ ಸಂಬಂಧಿ ಎಂದು ಹೇಳಲಾಗುವ ದೂರುದಾರರು, ಶರಣು ಸಲಗರ್ ಅವರು ಚುನಾವಣಾ ಸಂಬಂಧಿತ ವೆಚ್ಚಗಳಿಗಾಗಿ 2023ರ ಜನವರಿ ಮತ್ತು ಫೆಬ್ರವರಿ ನಡುವೆ ಬಹು ಕಂತುಗಳಲ್ಲಿ ಹಣವನ್ನು ಪಡೆದಿದ್ದರು ಮತ್ತು ಆರು ತಿಂಗಳೊಳಗೆ ಸಾಲ ಮರುಪಾವತಿ ಮಾಡುವುದಾಗಿ ಭರವಸೆ ನೀಡಿದ್ದರು.

ದೂರುದಾರರು ಎರಡು ವರ್ಷ ಕಾಯ್ದರೂ ಹಣ ಹಿಂದಿರುಗಿಸಿಲ್ಲ. ಪದೇ ಪದೇ ಹಣ ನೀಡುವಂತೆ ಕೇಳಿದರೂ ಶಾಸಕರು ಹಣ ಹಿಂದಿರುಗಿಸುವ ಯಾವುದೇ ಲಕ್ಷಣಗಳನ್ನು ತೋರಿಸದಿದ್ದಾಗ 2025ರ ಸೆ.14 ರಂದು ಹಿರಿಯರ ಸಮ್ಮುಖದಲ್ಲಿ ಸಭೆ ಸೇರಿದ್ದಾರೆ. ಅಲ್ಲಿ ಶಾಸಕರು ಹಣ ನೀಡುವುದಾಗಿ ಒಪ್ಪಿಕೊಂಡು, ಖಾಲಿ ಚೆಕ್ ನೀಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸೆ.16 ರಂದು ದೂರುದಾರರ ಕುಟುಂಬ ಸದಸ್ಯರು ಚೆಕ್ ಅನ್ನು ಬ್ಯಾಂಕಿಂಗೆ ಹಾಕಬಹುದೇ ಎಂದು ಖಚಿತಪಡಿಸಿಕೊಳ್ಳಲು ಶಾಸಕರ ನಿವಾಸಕ್ಕೆ ಭೇಟಿ ನೀಡಿದಾಗ, ಶರಣು ಸಲಗರ್ ಗಲಾಟೆ ಮಾಡಿದ್ದಾರೆ ಮತ್ತು ಬೆದರಿಕೆ ಹಾಕಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ. ದೂರುದಾರರ ಪ್ರಕಾರ ಶಾಸಕರ ಬೆದರಿಕೆಗಳನ್ನು ರೆಕಾರ್ಡ್ ಮಾಡಿಕೊಳ್ಳಲಾಗಿದ್ದು, ಅದನ್ನು ಎಲೆಕ್ಟ್ರಾನಿಕ್ ಪುರಾವೆಯಾಗಿ ದೂರಿನ ಜೊತೆಗೆ ಸಲ್ಲಿಸಲಾಗಿದೆ.

ದೂರಿನ ಆಧಾರದ ಮೇಲೆ, ಡಿ.27 ರಂದು ಬಸವ ಕಲ್ಯಾಣ ಪೊಲೀಸ್ ಠಾಣೆಯಲ್ಲಿ ಶಾಸಕರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಸದ್ಯ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ 2.50 ಕೋಟಿ ಮೌಲ್ಯದ ಡ್ರಗ್ಸ್, ನಗದು ಜಪ್ತಿ

ಬೆಂಗಳೂರು, ಡಿ.29– ಹೊಸ ವರ್ಷಾಚರಣೆಗೂ ಮುನ್ನ, ಸಿಸಿಬಿ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ವ್ಯಕ್ತಿಗಳನ್ನು ಬಂಧಿಸಿದ್ದು, ಅವರಿಂದ ಸುಮಾರು 2.50 ಕೋಟಿ ರೂ. ಮೌಲ್ಯದ ಮಾದಕ ದ್ರವ್ಯ ಮತ್ತು ನಗದನ್ನು ವಶಪಡಿಸಿಕೊಳ್ಳಲಾಗಿದೆ.

ಮೊದಲ ಪ್ರಕರಣದಲ್ಲಿ ಕೇಂದ್ರ ಅಪರಾಧ ವಿಭಾಗದ ಮಾದಕ ದ್ರವ್ಯ ನಿಯಂತ್ರಣ ವಿಭಾಗವು ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ, ಮಾದಕ ದ್ರವ್ಯ ಮಾರಾಟದಲ್ಲಿ ಭಾಗಿಯಾಗಿದ್ದ ವಿದೇಶಿ ಪ್ರಜೆಯನ್ನು ಬಂಧಿಸಿದೆ. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ಕೈಗೊಂಡು ವಿದೇಶಿ ಪ್ರಜೆಯನ್ನು ಬಂಧಿಸಿ 2 ಲಕ್ಷ ನಗದು, 1 ಕೆಜಿ 70 ಗ್ರಾಂ ಎಂಡಿಎಂಎ ಕ್ರಿಸ್ಟಲ್, 60 ಎಕ್ಸ್ ಟೆಸಿ ಪಿಲ್ಸ್‌ಗಳು, 100 ಎಲ್‌ಎಸ್‌ಡಿ ಸ್ಟ್ರಿಪ್ಸ್‌ಗಳು, 5 ಗ್ರಾಂ ಕೊಕೇನ್, 2 ಮೊಬೈಲ್, 1 ಲ್ಯಾಪ್‌ಟ್ಯಾಪ್ ವಶಪಡಿಸಿಕೊಂಡಿದ್ದು, ಇವುಗಳ ಒಟ್ಟು ಮೌಲ್ಯ 2.25 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ.

ಈ ವಿದೇಶಿ ಪ್ರಜೆಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ದೆಹಲಿ ಮತ್ತು ಮುಂಬೈನಲ್ಲಿ ವಾಸವಾಗಿರುವ ವಿದೇಶಿ ಪ್ರಜೆಗಳಿಂದ ಕಡಿಮೆ ಬೆಲೆಗೆ ಎಂಡಿಎಂಎ ಖರೀದಿಸಿ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಪರಿಚಯಸ್ಥ ಗಿರಾಕಿಗಳಿಗೆ ಸರಬರಾಜು ಮಾಡಲು ತಯಾರಿ ನಡೆಸಿದ್ದು ಗೊತ್ತಾಗಿದೆ.

ಈತನ ವಿರುದ್ಧ ಈ ಹಿಂದೆಯೂ ಸಹ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಪ್ರಕರಣ ದಾಖಲಾಗಿದ್ದು, ಜೈಲಿನಿಂದ ಬಿಡುಗಡೆಯಾಗಿ ಹೊರ ಬಂದ ನಂತರವೂ ಮತ್ತೆ ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿಸಿಕೊಂಡಿರುವುದು ಪೊಲೀಸರ ತನಿಖೆಯಿಂದ ತಿಳಿದು ಬಂದಿದ್ದು, ಇದೀಗ ಈತನ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರೆದಿದೆ.

ಬಂಡೇಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆಸಿದ ಮತ್ತೊಂದು ಕಾರ್ಯಾಚರಣೆಯಲ್ಲಿ ಪೊಲೀಸರು ಅಂತರ ರಾಜ್ಯ ಮಾದಕವಸ್ತು ಮಾರಾಟಗಾರನನ್ನು ಬಂಧಿಸಿದ್ದಾರೆ. ಆರೋಪಿಯಿಂದ, ಪೊಲೀಸರು 100 ಎಲ್‌ಎಸ್‌ಡಿ ಪಟ್ಟಿಗಳು, ಐದು ಗ್ರಾಂ ಕೊಕೇನ್ ಮತ್ತು ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣ ದಲ್ಲಿ ವಶಪಡಿಸಿಕೊಂಡ ವಸ್ತುಗಳ ಒಟ್ಟು ಮೌಲ್ಯ 25 ಲಕ್ಷ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಂಗಮಾರನಹಳ್ಳಿ ಕೆರೆಗೆ ನೀರು ತುಂಬಿಸಲು ಆಗ್ರಹಿಸಿ ಪ್ರತಿಭಟನೆ

ಮೈಸೂರು, ಡಿ.29(ಜಿಎ)–ಹೆಚ್.ಡಿ. ಕೋಟೆ ತಾಲೂಕಿನ ಸಿಂಗರಮಾರನಹಳ್ಳಿ ಗ್ರಾಮದ ಕೆರೆಗೆ ನೀರು ತುಂಬಿಸಲು ಅಂದಾಜು ಪಟ್ಟಿ ತಯಾರಾಗಿ ಅನುಮೋದನೆಯಾಗಿದ್ದು, ಕೂಡಲೇ ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯಿಸಿ ಸತ್ಯ ಎಂಎಎಸ್ ಫೌಂಡೇಷನ್ ವತಿಯಿಂದ ಕೆಆರ್‌ಎಸ್ ರಸ್ತೆಯಲ್ಲಿರುವ ಕಬಿನಿ, ವರುಣಾ ನಾಲಾ ಅಧೀಕ್ಷಕ ಇಂಜಿನಿಯರ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.



ಸಿಂಗರಮಾರನಹಳ್ಳಿ ಗ್ರಾಮದ ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯಿಸಿ ಸತ್ಯ ಎಂಎಎಸ್ ಫೌಂಡೇಷನ್ ವತಿಯಿಂದ ಕೆಆರ್‌ಎಸ್ ರಸ್ತೆಯಲ್ಲಿರುವ ಕಬಿನಿ, ವರುಣಾ ನಾಲಾ ಅಧೀಕ್ಷಕ ಇಂಜಿನಿಯರ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸಿಂಗರಮಾರನಹಳ್ಳಿ ಗ್ರಾಮದಲ್ಲಿ 5000 ಜನಸಂಖ್ಯೆ ಇದ್ದು ಕುರಿ, ಆಡು, ಕೋಳಿ ಸೇರಿದಂತೆ ಸುಮಾರು 6000 ಜಾನುವಾರುಗಳಿವೆ. ಈ ಭಾಗದಲ್ಲಿ ಅತೀ ಕಡಿಮೆ ಮಳೆ ಬೀಳುವ ಪ್ರದೇಶ ಇದಾಗಿದೆ. ಗ್ರಾಮ ಪಂಚಾಯಿತಿಗೆ ಒಳಪಡುವ ಸಿದ್ಧಮ್ಮನಕಟ್ಟೆ ಕೆರೆ, ಊರುಮುಂದಲ ಕೆರೆ, ಚಾಪಯ್ಯನ ಕಟ್ಟೆ ಕೆರೆ, ಉಂತುರುಕಟ್ಟೆ ಕೆರೆ, ಚಾಮಪ್ಪನ ಕಟ್ಟೆ ಕೆರೆಗಳನ್ನು ಹೆಚ್.ಡಿ ಕೋಟೆ ತಾಲೂಕು ಕಬಿನಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಇಬ್ಬಾಲ ಏತ ನೀರಾವರಿ ಯೋಜನೆ ಪೈಪ್‌ಲೈನ್ ಹಾದುಹೋಗಿದೆ. ಪರಸಯ್ಯನಕಟ್ಟೆಯಿಂದ ಒಂದು ಕಿ.ಮೀ ಪೈಪ್‌ಲೈನ್ ಮಾಡಿದರೆ ಸಿಂಗರಮಾರನಹಳ್ಳಿ ಕೆರೆ ಹಾಗೂ ಇನ್ನಿತರೆ ಕೆರೆಗಳನ್ನು ತುಂಬಿಸಬಹುದು. ಈ ಕುರಿತು ಸಿಂಗರಮಾರನಹಳ್ಳಿ ಗ್ರಾಮಸ್ಥರು, ರೈತರು, ಸತ್ಯ ಫೌಂಡೇಶನ್ ಸಹಯೋಗದೊಂದಿಗೆ ಪ್ರತಿಭಟನೆ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನಾಕಾರರು ದೂರಿದರು.

ನಿರಂತರ ಪ್ರತಿಭಟನೆ, ಮನವಿ ಮೇರೆಗೆ ಅಂದಾಜು ಪಟ್ಟಿ ತಯಾರಿಸಿ, ಸಂಬಂಧಪಟ್ಟ ಇಲಾಖೆಯಿಂದ ಕೆರೆಗಳಿಗೆ ನೀರು ತುಂಬಿಸುವಂತೆ ಪತ್ರ ರವಾನಿಸಲಾಗಿದೆ ಆದರೆ, ಇದುವರೆಗೂ ಸಿಂಗರಮಾರನಹಳ್ಳಿ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸದೇ ಅಧಿಕಾರಿಗಳು ಮೀನಾ–ಮೇಷ ಎಣಿಸುತ್ತಿದ್ದಾರೆ. ಕೂಡಲೇ ಅಧಿಕಾರಿಗಳು ಇತ್ತ ಗಮನಹರಿಸಿ ಕೆರೆಗಳಿಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ, ಮುಖಂಡರಾದ ಭೀಮರಾಜು, ಈಶ್ವರೇಗೌಡ, ಜಯರಾಮ್, ಮುನಿಯಗೌಡ, ಸಿಂಗ್ರೇಗೌಡ, ರಾಮೇ ಗೌಡ, ಕೆಂಡಗಣ್ಣೇಗೌಡ, ನಾಗನಾಯಕ, ಕುಮಾರ್ ನಾಯಕ, ಚೇತನ್, ಚಿನ್ನಸ್ವಾಮಿ, ವಿಜಯ ಕುಮಾರ್, ಸೋಮಶೆಟ್ಟಿ, ಕಾಳೇ ಗೌಡ, ರವಿ, ತಿಮ್ಮರಾಜು, ರವಿನಾಯಕ, ಸಿದ್ಧನಾಯಕ, ಮಂಚನಾಯಕ, ಬೋರೇ ಗೌಡ, ಮಹದೇವ ನಾಯಕ, ಮಂಜು, ಮಂಚೇಗೌಡ, ಸುರೇಶ್, ಸಂಜು, ಪವನ್‌ಕುಮಾರ್, ರಮೇಶ್ ನಾಯಕ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಆಂಧ್ರದಲ್ಲಿ ಎಕ್ಸ್‌ಪ್ರೆಸ್ ರೈಲಿಗೆ ಬೆಂಕಿ: ಓರ್ವ ಸಾವು, ಹಲವು ಪ್ರಯಾಣಿಕರಿಗೆ ಗಾಯ

ವಿಶಾಖಪಟ್ಟಣಂ, ಡಿ.29– ಆಂಧ್ರಪ್ರದೇಶದಲ್ಲಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು ದುರಂತದಲ್ಲಿ ಓರ್ವ ಪ್ರಯಾಣಿಕ ಸಾವನ್ನಪ್ಪಿ, ಹಲವರು ಗಾಯಗೊಂಡಿದ್ದಾರೆ.

ಆಂಧ್ರಪ್ರದೇಶದ ವಿಶಾಖಪಟ್ಟಣಂನಿಂದ ಸುಮಾರು 66 ಕಿ.ಮೀ ದೂರದಲ್ಲಿರುವ ಯಲಮಂಚಿಲಿಯಲ್ಲಿ ಟಾಟಾನಗರ–ಎರ್ನಾಕುಲಂ ಎಕ್ಸ್‌ಪ್ರೆಸ್‌ನ ಎರಡು ಬೋಗಿಗಳಿಗೆ ಬೆಂಕಿ ಹೊತ್ತಿಕೊಂಡಿದ್ದು, ಈ ವೇಳೆ ರೈಲಿನೊಳಗಿದ್ದ ಓರ್ವ ಪ್ರಯಾಣಿಕ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ರೈಲಿನ (ಸಂಖ್ಯೆ 18189) ಬಿ1 ಮತ್ತು ಎಂ2 ಬೋಗಿಗಳು ಬೆಂಕಿಗೆ ಆಹುತಿಯಾದವು ಮತ್ತು ರೈಲ್ವೆ ಸಿಬ್ಬಂದಿ ಕ್ಷಿಪ್ರವಾಗಿ ಕಾರ್ಯ ನಿರ್ವಹಿಸಿ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. ರೈಲ್ವೆ ಅಧಿಕಾರಿಗಳು ಸಹ ಕಾರ್ಯಪ್ರವೃತ್ತರಾಗಿ ಪ್ರಯಾಣಿಕರನ್ನು ರೈಲಿನಿಂದ ಇಳಿಸುವಲ್ಲಿ ಸಹಾಯ ಮಾಡಿದರು. ಅಗ್ನಿಶಾಮಕ ದಳ ಸ್ಥಳಕ್ಕೆ ತಲುಪಿ ಬೆಂಕಿಯನ್ನು ನಂದಿಸಿತು ಎಂದು ದಕ್ಷಿಣ ಮಧ್ಯ ರೈಲ್ವೆ ಹೇಳಿಕೆಯಲ್ಲಿ ತಿಳಿಸಿದೆ.

ಬೆಂಕಿಯ ಬಗ್ಗೆ ಪೊಲೀಸರಿಗೆ ಬೆಳಿಗ್ಗೆ 12.45 ಕ್ಕೆ ಮಾಹಿತಿ ಸಿಕ್ಕಿತು. ರೈಲು ಬೆಂಕಿ ಹೊತ್ತಿಕೊಂಡಾಗ ಒಂದು ಬೋಗಿಯಲ್ಲಿ 82 ಪ್ರಯಾಣಿಕರು ಮತ್ತು ಇನ್ನೊಂದು ಬೋಗಿಯಲ್ಲಿ 76 ಪ್ರಯಾಣಿಕರು ಇದ್ದರು. ಪೈಕಿ ಬಿ 1 ಬೋಗಿಯಲ್ಲಿ ಮೃತದೇಹ ಪತ್ತೆಯಾಗಿದೆ. ಮೃತರನ್ನು ಚಂದ್ರಶೇಖರ್ ಸುಂದರಂ ಎಂದು ಗುರುತಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ವರದಿಗಾರರಿಗೆ ತಿಳಿಸಿದ್ದಾರೆ.

ಬೇರೆ ಭಾಷೆಯವರೊಂದಿಗೂ ಕನ್ನಡದಲ್ಲೇ ಮಾತನಾಡಿ

● ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ● ಕನ್ನಡ ಚಳವಳಿಗಾರರ ಮೇಲಿನ ಪ್ರಕರಣ ಹಿಂಪಡೆಯಲು ಉಪಸಮಿತಿ ರಚನೆ ● ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಬಗ್ಗೆ ತೀರ್ಮಾನ

ಬೆಂಗಳೂರು, ಡಿ.29– ರಾಜ್ಯ ಸರ್ಕಾರ ಹಿಂದಿಯನ್ನು ವಿರೋಧಿಸುವುದಿಲ್ಲ. ಆದರೆ, ಹಿಂದಿ ನಮ್ಮ ರಾಷ್ಟ್ರ ಭಾಷೆ ಅಲ್ಲ. ನಮಗೆ ಕನ್ನಡವೇ ಸಾರ್ವಭೌಮ ಭಾಷೆ. ಬೇರೆ ಭಾಷೆ ಮಾತನಾಡುವವರೊಂದಿಗೆ ಕನ್ನಡದಲ್ಲೇ ಮಾತನಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಮನವಿ ಮಾಡಿದ್ದಾರೆ.



ವಿವಿಧ ಕನ್ನಡ ಸಂಘಟನೆಗಳು ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ –2025ರ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಮಾತನಾಡಿದರು.

ಕರ್ನಾಟಕದಲ್ಲಿ ಕನ್ನಡದ ವಾತಾವರಣವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ರಾಜ್ಯದಲ್ಲಿ ಕನ್ನಡ ಕಲಿಯದೆಯೇ ಬದುಕಬಹುದಾದ ವಾತಾವರಣವಿದೆ. ಕನ್ನಡ ಕಲಿಯಲೇಬೇಕಾದ ಅನಿವಾರ್ಯತೆ ಇಲ್ಲ ಎಂಬ ವಾತಾವರಣವಿದೆ. ಆದ್ದರಿಂದ ಬೇರೆ ಭಾಷೆಯಲ್ಲಿ ಮಾತನಾಡುವವರೊಂದಿಗೆ ನಾವು ಕನ್ನಡದಲ್ಲಿಯೇ ಮಾತನಾಡಬೇಕು. ತಮಿಳುನಾಡು, ತೆಲಂಗಾಣ, ಕೇರಳ, ಮಹಾರಾಷ್ಟ್ರ ಹಾಗೂ ಆಂಧ್ರದಲ್ಲಿ ಅವರವರ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಕನ್ನಡಿಗರು ಏಕೆ ಕನ್ನಡದಲ್ಲಿ ಮಾತನಾಡಬಾರದು, ಕನ್ನಡದಲ್ಲಿಯೇ ಮಾತನಾಡಬೇಕು. ಅನಿವಾರ್ಯವಾದರೆ ಬೇರೆ ಭಾಷೆ ಬಳಸಿ. ಯಾವ ಭಾಷೆ ಕಲಿತರೂ ಕನ್ನಡಿಗರಾಗಿಯೇ ಉಳಿಯಬೇಕು ಎಂದು ಹೇಳಿದರು.

ಕನ್ನಡ ಭಾಷೆ, ನೆಲ, ಜಲ, ಗಡಿ ಇವುಗಳ ಬಗ್ಗೆ ಹೋರಾಟ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. 'ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ಕನ್ನಡವಾಗಿರು' ಎಂದು ಕುವೆಂಪು ಹೇಳಿದ್ದಾರೆ. ಯಾರೇ ನನ್ನೊಂದಿಗೆ ಆಂಗ್ಲ ಭಾಷೆಯಲ್ಲಿ ಮಾತನಾಡಿದರೂ ನಾನು ಕನ್ನಡದಲ್ಲಿಯೇ ಮಾತನಾಡಿಸುವುದು ಹಾಗೂ ಕನ್ನಡದಲ್ಲಿಯೇ ಸಹಿ ಮಾಡುವುದು ಮತ್ತು ಟಿಪ್ಪಣಿ ಬರೆಯುವುದು. ಹೊರರಾಜ್ಯಗಳಿಗೆ ಪತ್ರ ಬರೆಯುವಾಗ ಮಾತ್ರ ಆಂಗ್ಲ ಭಾಷೆ ಬಳಸಿದರೂ, ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಎಂದರು.

ಗ್ರಾಮಗಳಲ್ಲಿ ಕನ್ನಡ ಶಾಲೆ ಇರಲೇಬೇಕು. ನಾನೂ ಕೂಡ ಕನ್ನಡ ಶಾಲೆ, ಕನ್ನಡ ಮಾಧ್ಯಮದ ಪರವಾಗಿ ಇರುವವನು. ಇತ್ತೀಚೆಗೆ ಆಂಗ್ಲ ಭಾಷೆಯ ವ್ಯಾಮೋಹ ಹೆಚ್ಚುತ್ತಿದೆ. ಇದಕ್ಕೆ ಪೋಷಕರ ಸಹಾಯವೂ ಅಗತ್ಯ. ಪೋಷಕರ ಸಹಾಯವಿಲ್ಲದೆ ಹೋದರೆ ಕನ್ನಡ ಶಾಲೆಗಳು ಉಳಿದು, ಬೆಳೆಯುವುದು ಕಷ್ಟ ಬರಗೂರು ರಾಮಚಂದ್ರಪ್ಪ ಅವರು ಹೇಳಿದಂತೆ ಕನ್ನಡ ಶಾಲೆಗಳ ಬಗ್ಗೆ ಕೂಡಲೇ ಒಂದು ಸಭೆ ಕರೆದು, ತೀರ್ಮಾನವನ್ನು ಜಾರಿಗೊಳಿಸಲಾಗುವುದು. ವೈಯಕ್ತಿಕವಾಗಿ ನಾನು ದ್ವಿಭಾಷಾ ನೀತಿಯ ಪರವಾಗಿದ್ದು, ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಹಿಂದಿಯನ್ನು ವಿರೋಧಿಸುವುದಿಲ್ಲ. ಆದರೆ, ಹಿಂದಿ ನಮ್ಮ ರಾಷ್ಟ್ರ ಭಾಷೆ ಅಲ್ಲ. ಕನ್ನಡವೇ ಸಾರ್ವಭೌಮ ಭಾಷೆ. 1956 ರಲ್ಲಿ ಭಾಷಾವಾರು ಪ್ರಾಂತ್ಯ ವಿಂಗಡಣೆ ಆಗಿದೆ. 1973 ರಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕ ಎಂದು ನಾಮಕರಣವಾಯಿತು. ಇದಾಗಿ 50 ವರ್ಷಗಳಾದರೂ ಬಿಜೆಪಿ ಸರ್ಕಾರ ಇದರ ಆಚರಣೆ ಮಾಡಲಿಲ್ಲ. ನಮ್ಮ ಸರ್ಕಾರ ಇದನ್ನು ಇಡೀ ರಾಜ್ಯದಲ್ಲಿ ಆಚರಣೆ ಮಾಡಿತು. ಇದರ ಪ್ರಯುಕ್ತ ವಿಧಾನಸೌಧದ ಆವರಣದಲ್ಲಿ ಭುವನೇಶ್ವರಿ ದೇವಿಯ ಪ್ರತಿಮೆ ಸ್ಥಾಪನೆ ಮಾಡಲಾಗಿದೆ ಎಂದರು.

ಕನ್ನಡ ಭಾಷೆ, ನೆಲ, ಜಲ, ಗಡಿ, ಕನ್ನಡಿಗರಿಗೆ ಉದ್ಯೋಗ ವಿಚಾರದಲ್ಲಿ ನಮ್ಮ ಸರ್ಕಾರ ರಾಜಿ ಮಾಡಿಕೊಳ್ಳುವುದಿಲ್ಲ. ಕನ್ನಡದ ವಿಷಯದಲ್ಲಿ ನಾವು ಸದಾ ಮುಂಚೂಣಿಯಲ್ಲಿರುತ್ತೇವೆ. ಕನ್ನಡದ ಪರ ಧ್ವನಿ ಎತ್ತುವ ಕೆಲಸವನ್ನು ಮಾಡುತ್ತೇನೆ. ಮಹದಾಯಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಪರಿಸರ ತೀರುವಳಿ ಸಿಕ್ಕಿದ ಕೂಡಲೇ ಜಾರಿ ಮಾಡಲಾಗುವುದು. ಕೇಂದ್ರ ಸರ್ಕಾರ ಕೃಷ್ಣ ಮೂರನೇ ಹಂತ ಯೋಜನೆಗೆ ಗೆಜೆಟ್ ಅಧಿಸೂಚನೆ ಹೊರಡಿಸಿಲ್ಲ. ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯನ್ನು ಕನ್ನಡಿಗರು ಖಂಡಿಸಬೇಕು ಎಂದರು.

ಇದೇ ವೇಳೆ ಕನ್ನಡ ಚಳವಳಿಗಾರರ ಮೇಲಿರುವ ಪ್ರಕರಣಗಳನ್ನು ಹಿಂಪಡೆಯುವ ಬಗ್ಗೆ ಉಪಸಮಿತಿ ರಚಿಸಲಾಗಿದೆ ಎಂದು ಹೇಳಿದ ಸಿಎಂ, ಸಮಿತಿಗೆ ಗೃಹ ಸಚಿವರು ಅಧ್ಯಕ್ಷರಾಗಿದ್ದಾರೆ. ಅವರೊಂದಿಗೆ ಚರ್ಚಿಸಿ ತೀರ್ಮಾನ ಮಾಡಲಾಗುವುದು ಎಂದು ಹೇಳಿದರು.

ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಕನ್ನಡ ಪರವಾದ ತೀರ್ಮಾನ ಮಾಡಲಾಗುವುದು. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗಬೇಕು. ರಾಜ್ಯದಲ್ಲಿ ಕನ್ನಡದ ವಾತಾವರಣ ನಿರ್ಮಿಸಬೇಕು. ಕರ್ನಾಟಕಕ್ಕೆ ಅನ್ಯಾಯವಾದಾಗ ಒಗ್ಗಟ್ಟಿನಿಂದ ಹೋರಾಡಬೇಕು. ಕನ್ನಡಿಗರು ಯಾವುದಕ್ಕೂ ಕಡಿಮೆಯಿಲ್ಲ. ಕನ್ನಡ ಭಾಷೆ, ನೆಲ, ಜಲ, ಗಡಿಗಳ ರಕ್ಷಣೆಗೆ ಪಣ ತೊಡೋಣ ಎಂದು ತಿಳಿಸಿದರು. ಬಳಿಕಮರ್ಯಾದಾ ಹತ್ಯೆ ತಡೆಯಲು ಕಾಯ್ದೆಯನ್ನು ರೂಪಿಸಿ ಜಾರಿ ಮಾಡಬೇಕೆಂಬ ಮನವಿಯನ್ನು ಪರಿಗಣಿಸಲಾಗಿದ್ದು, ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಉದ್ಯಮ ಆರಂಭಿಸಿದ ಕೂಡಲೇ ಲಾಭ ನಿರೀಕ್ಷೆ ಮಾಡಲಾಗದು

ನಿರುದ್ಯೋಗಿಗಳಿಗೆ ಮಾಜಿ ಕಾರ್ಪೊರೇಟರ್ ಸ್ನೇಕ್ ಶ್ಯಾಮ್ ಕಿವಿಮಾತು



ಜಿಲ್ಲಾ ಕೈಗಾರಿಕಾ ಕೇಂದ್ರ, ಖಾದಿ ಗ್ರಾಮೋದ್ಯೋಗ ಇಲಾಖೆ ವತಿಯಿಂದ 'ಉದ್ಯಮಿ ಆಗು ಉದ್ಯೋಗ ನೀಡು' ಎಂಬ ಉದ್ಯಮಶೀಲತಾ ಅಭಿವೃದ್ಧಿ ಅರಿವು ಕಾರ್ಯಕ್ರಮ ಸೋಮವಾರ ನಡೆಯಿತು.

ಮೈಸೂರು, ಡಿ.29(ಎಂಕೆ)– ಉದ್ಯಮಗಳನ್ನು ಆರಂಭಿಸಿದ ಕೂಡಲೇ ಲಾಭ ಬಯಸಬೇಡಿ. ಗಟ್ಟಿಯಾಗಿ ನಿಲ್ಲುವವರೆಗೆ ತಾಳ್ಮೆ ಕಳೆದುಕೊಳ್ಳಬೇಡಿ ಎಂದು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಉರಗತಜ್ಞ ಬಾಲಸುಬ್ರಹ್ಮಣ್ಯ ಸ್ನೇಕ್ ಶ್ಯಾಮ್, ನಿರುದ್ಯೋಗಿ ಯುವಕ–ಯುವತಿಯರಿಗೆ ಸಲಹೆ ನೀಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ, ಖಾದಿ ಗ್ರಾಮೋದ್ಯೋಗ ಇಲಾಖೆ ವತಿಯಿಂದ ಸೋಮವಾರ ಆಯೋಜಿಸಿದ್ದ 'ಉದ್ಯಮಿ ಆಗು ಉದ್ಯೋಗ ನೀಡು' ಎಂಬ ಉದ್ಯಮ ಶೀಲತಾ ಅಭಿವೃದ್ಧಿ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ಉದ್ಯಮ ಆರಂಭಿಸಿದ ಕೂಡಲೇ ಲಾಭ ಸಿಗುವುದಿಲ್ಲ. ಆರಂಭದಲ್ಲಿ ನಷ್ಟವಾಗಬಹುದು. ತಾಳ್ಮೆಯಿಂದ ಇದ್ದು, ಉದ್ಯಮ ಮುಂದುವರೆಸಿದರೆ 3–4 ವರ್ಷಗಳಲ್ಲಿ ಲಾಭ ಬರಲು ಆರಭವಾಗುತ್ತದೆ ಎಂದರು.

ಆರಂಭಿಸಿದ ಉದ್ಯಮ ಮೊದಲು ಗಟ್ಟಿಯಾಗಿ ನಿಲ್ಲುವಂತೆ ಮಾಡಬೇಕು. ನಷ್ಟವಾದರೂ ಎದೆಗುಂದಬಾರದು. 3–4 ವರ್ಷಗಳ ನಂತರ ಉದ್ಯಮದಲ್ಲಿ ಲಾಭ ಬರಲು ಆರಂಭವಾಗುತ್ತದೆ. ಹೀಗಾಗಿ, ಉದ್ಯಮ ಸ್ಥಾಪಿಸುವವರಿಗೆ ತಾಳ್ಮೆ ಇರಬೇಕು ಎಂದರು.

ನಾನು ಸಹ ಹಲವು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಿದೆ. ನಂತರ ಆ ಕೆಲಸ ಬಿಟ್ಟು ಸಾಲ ಮಾಡಿ ಆಟೋ ತೆಗೆದುಕೊಂಡು ಮಕ್ಕಳನ್ನು ಶಾಲೆಗೆ ಬಿಡಲು ಆರಂಭಿಸಿದೆ. ಪರೀಕ್ಷೆಗಳಲ್ಲಿ ಫೇಲ್ ಆದವರು ಗೆದ್ದ ಇತಿಹಾಸಗಳಿವೆ. ಕೌಶಲ್ಯ ಇರುವವರು ಉದ್ಯಮ ಸ್ಥಾಪಿಸಿಕೊಂಡಿದ್ದಾರೆ ರ್‍ಯಾಂಕ್ ಪಡೆದವರು, ಕೌಶಲ್ಯ ಇರುವವರ ಬಳಿ ಕೆಲಸ ಮಾಡಿಕೊಂಡಿದ್ದಾರೆ ಎಂದು ತಿಳಿ ಹೇಳಿದರು.

ಉದ್ಯೋಗ ನೀಡಿ: ಹೊಸ ಉದ್ಯಮ ಆರಂಭಿಸಬೇಕೆಂಬ ಉದ್ದೇಶ ಹೊಂದಿರುವವರು ಸರ್ಕಾರಿ ಯೋಜನೆಗಳ ಸದುಪಯೋಗ ಪಡೆದುಕೊಂಡು ಉದ್ಯೋಗ ಸ್ಥಾಪಿಸುವ ಮೂಲಕ ಒಂದಷ್ಟು ಜನರಿಗೆ ಉದ್ಯೋಗ ನೀಡಿ. ಇದರಿಂದ ಒಂದಷ್ಟು ಕುಟುಂಬಗಳು ಜೀವನ ನಡೆಸಲು ಸಹಕಾರಿ ಆಗುತ್ತದೆ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಖಾದಿ ಗ್ರಾಮೋದ್ಯೋಗ ಆಯೋಗದ ಪ್ರಾಂಶುಪಾಲ ಪಿ.ಬಂಗಾರ ನಾಯಕ್, ಪಿಎಂಇಜಿಪಿ ಯೋಜನೆಯಲ್ಲಿ ಉದ್ಯೋಗ ಆರಂಭಿಸುವವರಿಗೆ ಇರಬೇಕಾದ ಅರ್ಹತೆ, ಸಾಲ–ಸೌಲಭ್ಯದ ಮೊತ್ತ ಸೇರಿದಂತೆ ಇನ್ನಿತರೆ ಸವಲತ್ತುಗಳ ಮಾಹಿತಿ ನೀಡಿದರು. ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಕೆ.ನಾರಾಯಣಮೂರ್ತಿ, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಎನ್.ಪಿ.ಕೃಷ್ಣಮೂರ್ತಿ, ಖಾದಿ ಗ್ರಾಮೋದ್ಯೋಗ ಮಂಡಳಿ ಜಿಲ್ಲಾ ಅಧಿಕಾರಿ ಶರತ್ ಚಂದ್ರ, ಸಿಡಾಕ್ ಜಂಟಿ ನಿರ್ದೇಶಕ ಎಂ.ಎಸ್.ಮಧು, ಬೃಂದಾವನ ವೆಲ್ ಫೇರ್ ಫೌಂಡೇಷನ್‌ನ ಸತ್ಯಶ್ರೀ ಬಿ.ಶ್ಯಾಮ್ ಮತ್ತಿತರರಿದ್ದರು.

ಅರಮನೆ ಬಾಜಲ್ಲಿ ಅನಾಥವಾಗಿ ಬಿದ್ದಿರುವ ದ್ವಿಚಕ್ರ ವಾಹನಗಳು!

ಈ ರೀತಿ ಇರುವುದು 'ಭದ್ರತಾ' ಆತಂಕವಲ್ಲವೇ?



ಅರಮನೆಯ ವರಹಾ ಗೇಟ್ ಬಳಿ ಪಾರ್ಕಿಂಗ್ ಸ್ಥಳದಲ್ಲಿ ಅನಾಥವಾಗಿ ಬಿದ್ದಿರುವ ವಾರಸುದಾರರಿಲ್ಲದ ದ್ವಿಚಕ್ರ ವಾಹನಗಳು.

ಮೈಸೂರು, ಡಿ.29(ಎಂಟಿವೈ)– ಮೈಸೂರು ಅರಮನೆಯ ವರಹಾ ಗೇಟ್ ಬಳಿಯಿರುವ ಪಾರ್ಕಿಂಗ್ ಸ್ಥಳದಲ್ಲಿ ಹಲವು ತಿಂಗಳಿಂದ ವಾರಸುದಾರರಿಲ್ಲದ ಎರಡು ದ್ವಿಚಕ್ರ ವಾಹನಗಳು ಅನಾಥವಾಗಿದ್ದು, ನಮ್ಮ ಭದ್ರತಾ ವ್ಯವಸ್ಥೆಯನ್ನು ಅಣಕಿಸುವಂತಿದೆ.

ವರಹಾ ಗೇಟ್ ಪಕ್ಕದ ಪಾರ್ಕಿಂಗ್ ಸ್ಥಳದಲ್ಲಿ ಪ್ರತಿದಿನ ನೂರಾರು ಪ್ರವಾಸಿ ವಾಹನಗಳು ನಿಲುಗಡೆಯಾಗುತ್ತಿದ್ದು, ಅರಮನೆ ವೀಕ್ಷಣೆ ಬಳಿಕ ಪ್ರವಾಸಿಗರು ತಮ್ಮ ವಾಹನವನ್ನು ಕೊಂಡೊಯ್ಯಲಿದ್ದಾರೆ. ಆದರೆ, ಪಾರ್ಕಿಂಗ್ ಸ್ಥಳದಲ್ಲಿ ವಾರಸುದಾರ ರಿಲ್ಲದ, ಅಲ್ಲಿನ ಭದ್ರತಾ ಸಿಬ್ಬಂದಿಗೂ ಅರಿವಿಲ್ಲದ ಬೈಕ್ ಮತ್ತು ಸ್ಕೂಟರ್ ನಿಂತಿವೆ. ನಂಜನಗೂಡು ತಾಲೂಕಿನ ಬದನವಾಳು ಗ್ರಾಮದ ಕಲ್ಲಪ್ಪ ಅವರ ಹೆಸರಿನಲ್ಲಿ ನೋಂದಣಿಯಾಗಿರುವ ಕೆಎ.09 ಇಎಸ್.8433 ಸಂಖ್ಯೆಯ ಅಕ್ಸೆಸ್ ಸ್ಕೂಟರ್, ಅದರ ಸಮೀಪದಲ್ಲೇ ಕಸ ಸುರಿದಿರುವ ಸ್ಥಳದಲ್ಲಿ ಕೆಎ.03, ಇಜಿ 1856 ಸಂಖ್ಯೆಯ ಬೈಕ್ ಬಿದ್ದಿದೆ.

ಸ್ಥಳೀಯರು ನೀಡಿದ ಮಾಹಿತಿ ಪ್ರಕಾರ ಈ ಎರಡೂ ದ್ವಿಚಕ್ರ ವಾಹನಗಳು ಕಳೆದ ಒಂದೆರಡು ವರ್ಷದಿಂದಲೂ ಅಲ್ಲೇ ಇವೆ. ಇದುವರೆಗೆ ಎರಡೂ ವಾಹನಗಳ ವಾರಸುದಾರರು ಸುಳಿದಿಲ್ಲ ಎಂದು ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿ ಈ ದ್ವಿಚಕ್ರ ವಾಹನಗಳು ಯಾರಿಗೆ ಸೇರಿದ್ದು ಎಂದು ತಿಳಿದು ಬಂದಿಲ್ಲ. ಎರಡೂ ವಾಹನವನ್ನು ಸ್ಥಳಾಂತರಿಸಬೇಕು. ವಾರಸುದಾರರಿಲ್ಲದ ಯಾವುದೇ ವಾಹನಗಳು ಪಾರ್ಕಿಂಗ್ ಸ್ಥಳದಲ್ಲಿ ಇದ್ದರೆ ಅದನ್ನು ಗಂಭೀರವಾಗಿ ಪರಿಗಣಿಸಿ, ಕೂಲಂಕುಶವಾಗಿ ಪರಿಶೀಲಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಪಾದಚಾರಿ ಹಕ್ಕು ಕಾಪಾಡಲು ಇದು ಸಕಾಲ!

ಮೈಸೂರು, ಡಿ.29(ಎಂಟಿವೈ)– ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣ ಮೈಸೂರಿನ ಸುರಕ್ಷತೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಗೆ ಎಚ್ಚರಿಕಾ ಪಾಠವಾಗಿದೆ. ಯಾವುದೇ ಒತ್ತಡಕ್ಕೆ ಮಣಿಯದೇ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಐತಿಹಾಸಿಕ ಅರಮನೆ ದ್ವಾರದ ಬಳಿಯೇ ಇಬ್ಬರು ಅಮಾಯಕ ಮಹಿಳೆಯರೂ ಸೇರಿದಂತೆ ಮೂವರನ್ನು ಬಲಿ ಪಡೆದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಎಚ್ಚರಿಕೆ ಗಂಟೆಯಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಅರಮನೆ, ದಸರಾ ವಸ್ತುಪ್ರದರ್ಶನ ಸುತ್ತಮುತ್ತ ಹಾಗೂ ಪ್ರಮುಖ ಸಂಯ್ಯಾಜಿರಾವ್ ರಸ್ತೆಯಲ್ಲಿ ಪಾದಚಾರಿಗಳ ಸಂಚಾರಕ್ಕೆ ದೊಡ್ಡ ಸಂಚಕಾರ ಒದಗಿ ಬಂದಿದ್ದು, ಅಲ್ಲಿನ ರಸ್ತೆ ಬದಿ ವ್ಯಾಪಾರಿಗಳನ್ನು ತೆರವಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕೆ.ಆರ್.ವೃತ್ತದಿಂದ ಕೆ.ಆರ್.ಆಸ್ಪತ್ರೆ ವರೆಗೂ ರಸ್ತೆಯ ಎರಡೂ ಬದಿಯಲ್ಲೂ ನೂರಾರು ವ್ಯಾಪಾರಿಗಳು ಉಡುಪು ಸೇರಿದಂತೆ ವಿವಿಧ ವಸ್ತುಗಳನ್ನು ಮಾರಾಟ ಮಾಡುತ್ತಿದ್ದು, ಪಾದಚಾರಿ ಮಾರ್ಗದಲ್ಲಿ ಓಡಾಡಲು ಪ್ರಯಾಸಪಡುವಂತಾಗಿದೆ. ಕಿಷ್ಕಿಂಧೆ ಸ್ಥಳದಲ್ಲಿ ಪ್ರತಿದಿನ ಬೆಳಗಿನಿಂದ ರಾತ್ರಿ ವರೆಗೆ ಸಾವಿರಾರು ಜನ ಸಂಚರಿಸುತ್ತಿದ್ದು, ಅನಾಹುತಕ್ಕೆ ಎಡೆ ಮಾಡಿ ಕೊಟ್ಟಂತಾಗಿದೆ. ಈ ಹಿನ್ನೆಲೆಯಲ್ಲಿ ಸಂಭವನೀಯ ಅನಾಹುತ ತಪ್ಪಿಸಲು ಸಂಯ್ಯಾಜಿರಾವ್ ರಸ್ತೆಯ ಪಾದಚಾರಿ ಮಾರ್ಗದ ಅತಿಕ್ರಮಣ ತೆರವು ಮಾಡಲು ಮೈಸೂರು ಮಹಾನಗರ ಪಾಲಿಕೆ, ನಗರ ಪೊಲೀಸ್ ಜಂಟಿ ಕಾರ್ಯಾಚರಣೆ ನಡೆಸಲೇಬೇಕಾಗಿದೆ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹೊಸ ವರ್ಷಾಚರಣೆ ವೇಳೆ ಕಟ್ಟೆಚ್ಚರಕ್ಕೆ ಪೊಲೀಸ್ ಅಧಿಕಾರಿಗಳಿಗೆ ಸಿಎಂ ಸೂಚನೆ

ಮಹಿಳೆಯರ ಸುರಕ್ಷತೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿ



ಬೆಂಗಳೂರು, ಡಿ.29(ಕೆಎಂಶಿ)– ಹೊಸ ವರ್ಷಾಚರಣೆ ವೇಳೆ ಬೆಂಗಳೂರು ಮಹಾನಗರ ಸೇರಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ಅಹಿತಕರ ಘಟನೆಗಳಿಗೆ ಆಸ್ಪದವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪೊಲೀಸ್ ಅಧಿಕಾರಿಗಳಿಗೆ ಇಂದಿಲ್ಲಿ ತಾಕೀತು ಮಾಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳ ಸಭೆ ನಡೆಸಿದ ಮುಖ್ಯಮಂತ್ರಿ, ಹೊಸ ವರ್ಷಾಚರಣೆ ಸಂದರ್ಭದಲ್ಲಿ ಮಹಿಳೆಯರ ಸುರಕ್ಷತೆಗೆ ಎಲ್ಲಾ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದರು.


ಹೊಸ ವರ್ಷಾಚರಣೆ ಬಳಿಕ ಜನತೆ ಸುರಕ್ಷಿತವಾಗಿ ತಮ್ಮ ಮನೆಗಳಿಗೆ ಹಿಂತಿರುಗಲು ಅನುಕೂಲವಾಗುವಂತೆ ಮಧ್ಯರಾತ್ರಿ ನಂತರವೂ ಹೆಚ್ಚಿನ ಸಂಖ್ಯೆಯಲ್ಲಿ ಬಿಎಂಟಿಸಿ ಬಸ್‌ಗಳ ವ್ಯವಸ್ಥೆ ಮಾಡಬೇಕು. ಮಹಾತ್ಮಾ ಗಾಂಧಿ ರಸ್ತೆ ಬ್ರಿಗೇಡ್ ರೋಡ್, ಚರ್ಚ್ ಸ್ಟ್ರೀಟ್, ಕೋರಮಂಗಲ, ಇಂದಿರಾ ನಗರ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಜನದಟ್ಟಣೆಯಿಂದ ಯಾವುದೇ ಅನಾಹುತವಾಗದಂತೆ ಕಟ್ಟೆಚ್ಚರ ವಹಿಸಬೇಕು, ಇದಕ್ಕಾಗಿ ಆಧುನಿಕ ತಂತ್ರಜ್ಞಾನ ಬಳಕೆ ಮಾಡಬೇಕು.

ಭದ್ರತೆಗಾಗಿ ಸಹಸ್ರಾರು ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಬೇಕು. ಅದರಲ್ಲೂ ವಿಶೇಷವಾಗಿ ಮಹಿಳಾ ಪೊಲೀಸರನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಬೇಕು. ಚೆನ್ನಮ್ಮ ಪಡೆಗಳನ್ನು ಸಕ್ರಿಯಗೊಳಿಸಬೇಕು.

ಹೊಸ ವರ್ಷಾಚರಣೆ ಸುಗಮವಾಗಲು ಕಂಟ್ರೋಲ್ ರೂಂ, ಕಾವಲು ಗೋಪುರ, ಮಹಿಳಾ ಸಹಾಯ ಡೆಸ್ಕ್, ಆಂಬುಲೆನ್ಸ್ ವ್ಯವಸ್ಥೆ ಮಾಡಬೇಕು.

ಕಿಡಿಗೇಡಿಗಳ ಮೇಲೆ ನಿರಂತರ ನಿಗಾ ಇರಿಸಬೇಕು. ವ್ಹೀಲಿಂಗ್‌ಗೆ ಅವಕಾಶ ನೀಡಬಾರದು, ಮಾದಕದ್ರವ್ಯ ಚಟುವಟಿಕೆಗಳ ನಿಯಂತ್ರಣಕ್ಕೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಕುವೆಂಪುರವರಿಗೆ ಗೌರವ ಸಲ್ಲಿಕೆ



ರಾಷ್ಟ್ರಕವಿ ವಿಶ್ವಮಾನವ ಕುವೆಂಪು ಅವರ ಜನ್ಮದಿನದ ಪ್ರಯುಕ್ತ ಮೈಸೂರಿನ ಗನ್ ಹೌಸ್ ಬಳಿಯ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ, ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಕನ್ನಡ ವೇದಿಕೆಯ ಅಧ್ಯಕ್ಷ ಎಸ್ ಬಾಲಕೃಷ್ಣ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉತ್ತನಹಳ್ಳಿ ಮಹದೇವ್, ಬೋಗಾದಿ ಸಿದ್ದೇಗೌಡ, ಚೆಲುವರಾಯಸ್ವಾಮಿ, ಲತಾ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

IN THE COURT OF 13th ADDL CIVIL JUDGE AND J.M.F.C AT MYSORE

O.S. 1328 / 2022

Plaintiff : Sri. Lokesh

V/s

Defendants: Shivakumar and Another

NOTICE TO 1st DEFENDANT

Sri. Shivakumar KL, S/o Late Ningegowda. Aged about 50 years., Residing at # 13/1, Kumbarkoppal, Metagalli Post, Devaraja Mohalla, Mysuru.

That the above plaintiff has filed the above suit against the defendants for the relief of permanent Injuction.

Notice is hereby given to you to appear in this Court in person or through an Advocate duly instructed or through some one authorised by law to appear on your behalf in the said petition on 28-01-26. at 11.00 AM. If you fail to appear on the said date, the suit will be dealt and decided in your absence by placing you EXPARTE.

Issue under my hand and seal of this Hon'ble Court. 03.12.25.

By order of the Court
Sd/- Chief Ministerial Officer,
13th Additional Civil Judge and J.M.F.C. at Mysore

ಕಛೇರಿ: 08229-222226
Fax: 08229-222226 ; Helpline 08229-223377
E-mail: itstaff_ulb_gundlupet@yahoo.com
Website: www.gundlupettown.gov.in

ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ
ಚಾಮರಾಜನಗರ ಜಿಲ್ಲೆ–571111

ಸಂಖ್ಯೆ: ಪುಗು/ಕಿ.ಅ/ಪಿಆರ್: 02/2025-26 ದಿನಾಂಕ: 26-12-2025

ಕಛೇರಿ ಕೊಟೇಷನ್ ಪ್ರಕಟಣೆ

ಗುಂಡ್ಲುಪೇಟೆ ಪುರಸಭೆ ನೆಹರು ಸರ್ಕಲ್ ಬಳಿ ಪಾರ್ಕ್‌ಲ್ಲಿರುವ ಜಿಪಿಎಸ್ ಗಡಿಯಾರದ ಯುಪಿಎಸ್ ರಿಪೇರಿ ಮತ್ತು ಗಡಿಯಾರದ ರಿಪೇರಿ ಕಾರ್ಯವನ್ನು ಮಾಡಲು ಅರ್ಹ ಜಿಪಿಎಸ್ ಗಡಿಯಾರ ತಯಾರಕರು/ಸರಬರಾಜುದಾರರಿಂದ ರಿಪೇರಿ ಅವಶ್ಯಕ ಸಾಮಗ್ರಿಗಳನ್ನ ಅಳವಡಿಸಿ ಚಾಲನೆಗೊಳಿಸಲು ಕೊಟೇಷನ್ ಆಹ್ವಾನಿಸಲಾಗಿದೆ. ಆಸಕ್ತರು ದಿನಾಂಕ: 02–01–2026 ರಂದು ಸಂಜೆ 4–00 ಗಂಟೆಯೊಳಗೆ ಕೊಟೇಷನ್ ಸಲ್ಲಿಸಲು ಸೂಚಿಸಿದೆ. ತಡವಾಗಿ ಬಂದ ಕೊಟೇಷನ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. 1) ಕೊಟೇಷನ್ ಮಂಜೂರಾದವರು ಕೆಲಸದ ಆದೇಶ ನೀಡಿದ 07 ದಿನಗಳೊಳಗಾಗಿ ಜಿಪಿಎಸ್ ಗಡಿಯಾರದ ಯುಪಿಎಸ್ ರಿಪೇರಿ ಮತ್ತು ಗಡಿಯಾರದ ರಿಪೇರಿ ಕಾರ್ಯವನ್ನು ಸರಬರಾಜು ಮಾಡಿ ಅಳವಡಿಸುವುದು ; 2) ಕೊಟೇಷನ್‌ನನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಪುರಸಭೆ ಕಾಯ್ದಿರಿಸಿಕೊಂಡಿರುತ್ತದೆ. ; 3) ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ತಿಳಿದುಕೊಳ್ಳಬಹುದಾಗಿದೆ.

ಸಹಿ/– ಎಸ್.ಸರವಣ. (ಕೆ.ಎ.ಎಂ.ಎಸ್.)
ಮುಖ್ಯಾಧಿಕಾರಿ, ಪುರಸಭೆ, ಗುಂಡ್ಲುಪೇಟೆ.

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷಿದಾರರುಗಳಾದ ಮೈಸೂರು ನಗರ, ರಾಘವೇಂದ್ರನಗರ, ತುಂಗ ರಸ್ತೆ, 3ನೇ ಕ್ರಾಸ್, ಮನೆ ನಂ. 17 ರಲ್ಲಿ ವಾಸವಾಗಿರುವ ಲೇಟ್ ವೆಂಕಟರಮಣ ಚಾರಿ ರವರ ಮಗ ಶ್ರೀ ಕೆ. ತಿರುಮಲಚಾರಿ ಮತ್ತು 1ನೇ 'ಸಿ' ಮುಖ್ಯ ರಸ್ತೆ. ಇಟ್ಟಮಾಡು, ಮಂಜುನಾಥ ನಗರ ಹತ್ತಿರ ಹರಾವಿಜಯ ಅಪಾರ್ಟ್‌ಮೆಂಟ್, ಬೆಂಗಳೂರು ಸೌತ್, ಬನಶಂಕರಿ 3ನೇ ಹಂತ, ಬೆಂಗಳೂರು ಮನೆ. ನಂ. 77 ರಲ್ಲಿ ವಾಸವಾಗಿರುವ ಲಕ್ಷ್ಮಣಪ್ಪ ರವರ ಮಗ ಶ್ರೀ. ಎಲ್. ಶ್ರೀನಿವಾಸ್ ಇವರುಗಳು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ರಮೇಶ್ ರವರ ಧರ್ಮಪತ್ನಿಯಾದ ಸರಸ್ವತಿ ರಮೇಶ ಇವರಿಂದ ಖರೀದಿಸಲು ಇಚ್ಚಿಸಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವ್ಯಕ್ತಿಯ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಹೊಂದಿದ್ದಲ್ಲಿ ಅಥವಾ ಕ್ರಯದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾರಿಗಾದರೂ ಯಾವುದೇ ರೀತಿಯ ತಕರಾರು ಇದ್ದಲ್ಲಿ ಸೂಕ್ತ ದಾಖಲೆಗಳೊಡನೆ ಈ ತಿಳುವಳಿಕೆಯು ಪ್ರಕಟಗೊಂಡ 7 ದಿನಗಳ ಒಳಗೆ ನಮ್ಮ ಕಛೇರಿಯಲ್ಲಿ ಸಲ್ಲಿಸತಕ್ಕದ್ದು ಅಥವಾ ನಮ್ಮ ಕಕ್ಷಿದಾರರಿಗೆ ಲಿಖಿತ ರೂಪದಲ್ಲಿ ಸಲ್ಲಿಸ ತಕ್ಕದ್ದು, ಆನಂತರ ಬಂದಂತಹ ಯಾವುದೇ ತಕರಾರುಗಳನ್ನು ಪರಿಗಣಿಸುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಳೇ ಹಾರೊಹಳ್ಳಿ ಗ್ರಾಮದ ಸರ್ವೆ ನಂ. 220 ನಂತರ ಹೊಸ ಗ್ರಾಮ ಮೆಲ್ಲಹಳ್ಳಿಯ ಹೊಸ ಸರ್ವೆ ನಂ. 178 ರಲ್ಲಿ 5–01.00 ಗುಂಟೆ (ಐದು ಎಕರೆ ಒಂದು ಗುಂಟೆ) ಖುಷ್ಕಿ ಜಮೀನಿಗೆ ಚೆಕ್ಕು ಬಂದಿ :–

ಪೂರ್ವಕ್ಕೆ: ದೊಡ್ಡಕೊಂಡಯ್ಯ ರವರ ಜಮೀನು ; ಪಶ್ಚಿಮಕ್ಕೆ: ವೆಂಕಟಪ್ಪ ರವರ ಜಮೀನು ; ಉತ್ತರಕ್ಕೆ: ರಮ್ಮನಹಳ್ಳಿ ಚಿಕ್ಕೈದ ರವರ ಜಮೀನು ; ದಕ್ಷಿಣಕ್ಕೆ: ರಸ್ತೆ ಮತ್ತು ಕೆಂಚರಂಗಯ್ಯ ರವರ ಜಮೀನು.

ಸಹಿ/– ಬಿ.ಎಸ್.ಪಾಂಡು ಪೂಜಾರಿ, ವಕೀಲರು
#2858/1, 2ನೇ ಮಹಡಿ 2ನೇ ಮೇನ್ ಜಯನಗರ, ಮೈಸೂರು–14
Mob: 9449793752

ನಂಜನಗೂಡು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯದಲ್ಲಿ

ಅಸಲು ದಾವಾ ಸಂಖ್ಯೆ. 80/2024

ವಾದಿ: ಪಿ. ಮಹದೇವಪ್ಪ ವಿರುದ್ಧ

ಪ್ರತಿವಾದಿಗಳು: ನಾಗಮ್ಮ ಮತ್ತು ಇತರರು 3)ಶ್ರೀಮತಿ ಶೋಭ ಬಿನ್ ಚಿನ್ನಸ್ವಾಮಿ ಸುಮಾರು 22 ವರ್ಷಗಳು, ವಾಸ: ಜೀಮಾರಹಳ್ಳಿ ಗ್ರಾಮ, ಬಿಳಿಗೆರೆ ಹೋಬಳಿ, ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆ

ಪತ್ರಿಕಾ ಪ್ರಕಟಣೆಯ ಮೂಲಕ ಸಮನ್ಸ್

ವಾದಿಯು ಮೇಲ್ಕಂಡ ದಾವೆಯನ್ನು ಪ್ರತಿವಾದಿಗಳು ವಾದಿಗೆ ಬರೆದುಕೊಟ್ಟಿರುವ ಆಧಾರಪತ್ರದ ರೀತ್ಯಾ ಹಣದ ವಸೂಲಾತಿಗಾಗಿ ಮತ್ತು ಇತರೆ ಪರಿಹಾರಗಳನ್ನು ಕೋರಿ ಸಲ್ಲಿಸಿರುತ್ತಾರೆ. 3ನೇ ಪ್ರತಿ ವಾದಿಯಾದ ಶೋಭ ಆದ ನಿಮಗೆ ಘನ ನ್ಯಾಯಾಲಯದಿಂದ ನೋಟಿಸ್ ಜಾರಿ ಮಾಡಲಾಗಿ ಅದು ಜಾರಿಯಾಗದೆ ವಾಪಸ್ ಬಂದಿರುತ್ತದೆ. ಆದ್ದರಿಂದ ಈ ಮೂಲಕ 3ನೇ ಪ್ರತಿವಾದಿಯಾದ ನಿಮಗೆ ತಿಳಿಸುವುದೇನೆಂದರೆ, ಮೇಲ್ಕಂಡ ಕೇಸಿನ ಹಿಯರಿಂಗ್ ದಿ:11–02–2026 ರಂದು ಬೆಳಿಗ್ಗೆ 11–00 ಘಂಟೆಗೆ ಇರುತ್ತದೆ. ಆ ದಿನ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗತಕ್ಕದ್ದು ತಪ್ಪಿದಲ್ಲಿ ತಮ್ಮ ಗೈರುಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿ, ಬಿಳುಗಲಿ ಗ್ರಾಮದಲ್ಲಿರುವ ತರೀ ಜಮೀನಿಗೆ ಚಕ್ಕುಬಂದಿ:–ಪೂರ್ವಕ್ಕೆ :ಬೀಳು ಕಾಲುವೆ, ಪಶ್ಚಿಮಕ್ಕೆ : ಪ್ರಭುಸ್ವಾಮಿರವರ ಜಮೀನು ಉತ್ತರಕ್ಕೆ:ಗಣೇಶ್ ರವರ ಜಮೀನು, ದಕ್ಷಿಣಕ್ಕೆ: ಬಿ.ದೇವಾದತಿ ರವರ ಜಮೀನು

ಈ ಮಧ್ಯೆ ಇರುವ ಸ.ನಂ.392/1 ರ ಬಾಬ್ತು ಒಟ್ಟು ವಿಸ್ತೀರ್ಣ 2 ಎಕರೆ 33 ಗುಂಟೆ ಪೈಕಿ ನಮ್ಮ ಬಾಬ್ತು 0.26 ಗುಂಟೆ ಜಮೀನು ಒಂದು. ಡಿಟೋ ಗ್ರಾಮಕ್ಕೆ ಸೇರಿದ ಡಿಟೋ ಚಕ್ಕುಬಂದಿಗೆ ಸೇರಿದ ಸ.ನಂ.392/2 ರ ಬಾಬ್ತು ಒಟ್ಟು ವಿಸ್ತೀರ್ಣ 1 ಎಕರೆ 26 ಗುಂಟೆ ಪೈಕಿ 0.30 ಗುಂಟೆ ತರೀ ಜಮೀನು ಒಂದು, ಹಾಗೂ ಡಿಟೋ ಗ್ರಾಮಕ್ಕೆ ಸೇರಿದ, ಡಿಟೋ ಚಕ್ಕುಬಂದಿಗೆ ಸೇರಿದ ಸ.ನಂ.392/3 ರ ಬಾಬ್ತು ಒಟ್ಟು ವಿಸ್ತೀರ್ಣ 0.12 ಗುಂಟೆ ಪೈಕಿ 0.07 ಗುಂಟೆ ತರೀ ಜಮೀನು, ಈ 3 ಸರ್ವೆ ನಂಬರ್‌ಗಳ ಸೇರಿ ಒಟ್ಟು ವಿಸ್ತೀರ್ಣ 1 ಎಕರೆ 23 ಗುಂಟೆ ಜಮೀನು.

2.ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿ, ಬಿಳುಗಲಿ ಗ್ರಾಮದಲ್ಲಿರುವ ತರೀ ಜಮೀನಿಗೆ: ಚಕ್ಕುಬಂದಿ:–ಪೂರ್ವಕ್ಕೆ: ಅಡ್ಡಹಳ್ಳ, ಪಶ್ಚಿಮಕ್ಕೆ :ಶಿವಮಲ್ಲಪ್ಪ ರವರ ಜಮೀನು, ಉತ್ತರಕ್ಕೆ :ಗಣೇಶ್ ರವರ : ಜಮೀನು, ದಕ್ಷಿಣಕ್ಕೆ : ಜೆ.ಎಂ. ಮಹದೇವಪ್ಪರವರ ಜಮೀನು

ಈ ಮಧ್ಯೆ ಇರುವ ಸ.ನಂ.201 ರ ಬಾಬ್ತು ಒಟ್ಟು ವಿಸ್ತೀರ್ಣ 0.16 ಗುಂಟೆ ಪೈಕಿ 0.06 ಗುಂಟೆ ತರೀ ಜಮೀನು ಒಂದು, ಒಟ್ಟಾರೆ ಐಟಂ ನಂ.1 ರಲ್ಲಿಯ 1 ಎಕರೆ 23 ಗುಂಟೆ ಐಟಂ ನಂ.2 ರಲ್ಲಿಯ 0.06 ಗುಂಟೆ ಒಟ್ಟು ವಿಸ್ತೀರ್ಣ 1 ಎಕರೆ 29 ಗುಂಟೆ ಜಮೀನು ಮಾತ್ರ.

ಸಹಿ/–ಜಿ.ಆರ್. ಭಾರತಿ
ವಾದಿಯ ಪರ ವಕೀಲರು
ನಂಜನಗೂಡು

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಶಿರಸ್ತೇದಾರರು
ನಂಜನಗೂಡಿನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ